ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 42

ರೂ. 5/-

ಅಕ್ಟೋಬರ್ 18, 2009

ಕನ್ನಡ ವಾರಪತ್ರಿಕೆ





ಮಹಾಮಳೆ -ಪ್ರವಾಹ ಕೊಚ್ಚಿಹೋದ ಬದುಕು

ದಕ್ಷಿಣ ಕನ್ನಡ: ಕೆಎಫ್‌ಡಿ ಯ 'ಭಜರಂಗ ಗಿರಿ'



ಆರೆಸ್ಸೆಸ್‌ನ 'ಭಾರತ-ಭಾರತಿ' ಪುಸ್ತಕ ಸಂಪದ

'ದೇಶಪ್ರೇಮ ಎಂದರೆ ಮುಸ್ಲಿಂ ದ್ವೇಷವೇ?'



ಅಕ್ಷರ ದಾಸೋಹ 2ನೇ ರಾಜ್ಯ ಸಮ್ಮೇಳನ

ಸಾಮಾಜಿಕ ಸಮಾನತೆಗಾಗಿ ಬಿಸಿಯೂಟ ಖಾಸಗೀಕರಣದ ವಿರುದ್ಧ ಹೋರಾಟದ ಸಂಕಲ್ಪ

ಜನಶಕ್ತಿ ಕನ್ನಡ ವಾರಪತ್ರಿಕೆ

ಅಕ್ಟೋಬರ್ 18 , 2

'ಐಕ್ಯತೆ ಮತ್ತು ಹೋರಾಟ' ಎಂಬ ಸಿಐಟಿಯು ಘೋಷಣೆ ಎತ್ತಿ ಹಿಡಿಯಲು, ಸಮರಧೀರ ಚಳುವಳಿ ದಾರಿ ತಪ್ಪಿಸುವ ಸಮಾವೇಶ ತಿರಸ್ಕರಿಸಲು ಮನವಿ

ರಾಜ್ಯವ್ಯಾಪಿ ಸಮಾನ ಕನಿಷ್ಠ ಕೂಲಿ ಮತ್ತು ಬೆಂಗಳೂರು-ಬಿಎಂಆರ್‌ಡಿ ವ್ಯಾಪ್ತಿಯಲ್ಲಿ ರೂ.10,000/- ಕನಿಷ್ಠ ವೇತನಕ್ಕಾಗಿ ಮತ್ತಿತರೆ ಒಟ್ಟು 8 ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ಸಮರಧೀರ ಹೋರಾಟ ನಡೆದಿದೆ. ಬೇಡಿಕೆ ಈಡೇರಿಸುವ ಬದಲು ರಾಜ್ಯ ಸರ್ಕಾರ ಪೋಲೀಸರ ಮೂಲಕ ಹೋರಾಟ ಹತ್ತಿಕ್ಕಲು ನಡೆಸಿದ ಲಾಠಿ ಚಾರ್ಜ್, ದೌರ್ಜನ್ಯ, ಹಾಕಿರುವ ಸುಳ್ಳು ಕೇಸುಗಳು, ಬಂಧನದ ವಿಷಯಗಳು ತಿಳಿದಿವೆ. ಪತ್ರಿಕೆ ಮತ್ತು ಮಾಧ್ಯಮದ ಮೂಲಕವು ಅದು ಅನಾವರಣಗೊಂಡಿದೆ.

ಬೆಂಗಳೂರಿನಲ್ಲಿಯೂ 2008 ನವೆಂಬರ್‌ನಿಂದ ಇದೇ ಬೇಡಿಕೆಗಳಿಗಾಗಿ ದಶಲಕ್ಷ ಸಹಿ ಸಂಗ್ರಹ ಚಳುವಳಿಯ ಭಾಗವಾಗಿ ಸಹಿ ಸಂಗ್ರಹ, 2009 ಫೆಬ್ರವರಿ 5 ರಂದು ಬೃಹತ್ ವಿಧಾನಸೌಧ ಚಲೋ, ಮಾರ್ಚ್ 5ರಂದು ಕಾರ್ಮಿಕ ಆಯುಕ್ತರ ಕಛೇರಿ ಪಿಕೆಟಿಂಗ್ ನಡೆಸಲಾಗಿದೆ. ಮುಂದುವರಿದ ಚಳುವಳಿಯ ಭಾಗವಾಗಿ ಸಮಾವೇಶಗಳು ಸೆಪ್ಟೆಂಬರ್ 15 ರಂದು ನಗರ ಡಿ.ಸಿ. ಕಛೇರಿ ಪಿಕೆಟಿಂಗ್, 16 ರಂದು ಗ್ರಾಮಾಂತರ ಡಿ.ಸಿ. ಕಛೇರಿಗೆ ಮೆರವಣಿಗೆ ನಡೆಸಲಾಗಿದೆ. 17 ರಂದು ಮುಖ್ಯಮಂತ್ರಿ ಮನೆ ಚಲೋ ನಡೆಸಲಾಗಿದೆ. ಅದರ ಪೂರ್ವಭಾವಿಯಾಗಿ 7 ರಿಂದ 11ರವರೆಗೆ ನಗರದ ವಿವಿಧೆಡೆ ಪ್ರತಿಭಟನೆ-ಪ್ರಚಾರ ನಡೆಸಲಾಗಿದೆ. ಈ ಎಲ್ಲಾ ಪ್ರಕ್ರಿಯೆಯಲ್ಲಿ ಸಿಐಟಿಯು ಸಂಯೋಜಿತ ಸಂಘಗಳು, ನೇತೃತ್ವದಡಿಯ ಸಂಘಗಳು, ಹಿತೈಷಿಗಳು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ.

ಈ ಎಲ್ಲಾ ಪ್ರಕ್ರಿಯೆಗಳ ಸಂದರ್ಭದಲ್ಲಿ ತಮ್ಮ ನೇತೃತ್ವದ ಸಂಘಗಳ ಕಾರ್ಮಿಕರ ತೊಡಗಿಸದೇ ಇದ್ದ ಸಿಐಟಿಯುಗೆ ಸಂಯೋಜಿತವಾಗಿರುವ ಸಂಘದ ಒಂದಿಬ್ಬರು ಮುಖಂಡರು ಇಂದು ಬೆಂಗಳೂರು ವ್ಯಾಪ್ತಿಯಲ್ಲಿ ರೂ.8,000/- ಸಮಾನ ಕನಿಷ್ಠ ಕೂಲಿಗಾಗಿ ಮತ್ತಿತರೆ ಬೇಡಿಕೆಗಳಿಗಾಗಿ ರೈತ ಕಾರ್ಮಿಕರ ಸಮನ್ವಯ ಸಮಿತಿಯ ಹೆಸರಿನಲ್ಲಿ ಸಮಾವೇಶವೊಂದನ್ನು ಬೆಂಗಳೂರಿನಲ್ಲಿ ಅಕ್ಟೋಬರ್ 9 ರಂದು ನಡೆಸುತ್ತಿದ್ದಾರೆ.

ರಾಜ್ಯಾದ್ಯಂತ ನಡೆದಿರುವ ಸಮರಧೀರ ಚಳುವಳಿಯಲ್ಲಿ ತೊಡಗದೆ, ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ಕ್ರಮಗಳ-ದಾಳಿಗಳ ಹಿಮ್ಮೆಟ್ಟಿಸಲು ಚಳುವಳಿಯೊಂದಿಗೆ ಐಕ್ಯತೆಯಿಂದ ತೊಡಗದೆ, ಹೋರಾಟದಲ್ಲಿ ಭಾಗವಹಿಸದೆ ಇದ್ದ ಈ ಮುಖಂಡರು ದಿಢೀರ್ ಸಮಾವೇಶಕ್ಕೆ



ಮುಂದಾಗಿರುವುದು ಚಳುವಳಿಯನ್ನು ದಾರಿ ತಪ್ಪಿಸುವ ಕ್ರಮವಾಗಿದೆ. ಸಿಐಟಿಯು ನೇತೃತ್ವದ ಚಳುವಳಿಗೆ ಪರ್ಯಾಯ ವೇದಿಕೆ ನಿರ್ಮಿಸುವ ಐಕ್ಯತೆ ಮತ್ತು ಹೋರಾಟದ ಘೋಷಣೆ ನಿರಾಕರಿಸುವ ಹಾಗೂ ಸರ್ಕಾರಕ್ಕೆ, ಮಾಲೀಕರಿಗೆ ಪರೋಕ್ಷವಾಗಿ ಸಹಕರಿಸುವ ಯತ್ನವಲ್ಲದೆ ಇದು ಬೇರೇನೂ ಅಲ್ಲ.

ಸಿಐಟಿಯು ನೇತೃತ್ವದಲ್ಲಿ ನಡೆದಿರುವ ಸಮರಧೀರ ಚಳುವಳಿ ಮುಂದುವರಿಸಬೇಕಿದೆ. ಕಾರ್ಮಿಕ ವರ್ಗದ ಹಿತಕ್ಕಾಗಿ ಸರ್ಕಾರ ಹಾ[illegible] ಬಂಡವಾಳಶಾಹಿಯ ವಿರುದ್ಧ ರಾಜಿರ[illegible] ಸಮರಧೀರ ಹೋರಾಟ ನಡೆಸುತ್ತಿರುವ ಏಕೈಕ ಕೇ[illegible] ಕಾರ್ಮಿಕ ಸಂಘಟನೆ ಸಿಐಟಿಯು, ಅದ[illegible] ಬಲಪಡಿಸುವ ಕೆಲಸದಲ್ಲಿ ಸಮರಧೀರ ಹೋ[illegible] ಚಳುವಳಿಯಲ್ಲಿ. ರಾಜ್ಯಾದ್ಯಂತ ಕಾರ್ಮಿಕ[illegible] ಮುಂದಾಗಿದ್ದಾರೆ. ಆದರೆ ಅದ[illegible] ಬಲಹೀನಗೊಳಿಸಲು ಸರ್ಕಾರ[illegible] ಬಂಡವಾಳಶಾಹಿಗಳು ನಿರಂತರ ಯ[illegible] ನಡೆಸಿದ್ದಾರೆ. ಇಂತಹ ಸಂದರ್ಭ[illegible] ಚಳುವಳಿಯ ದಾರಿ ತಪ್ಪಿಸುವ ಯತ್ನ[illegible] ತಿರಸ್ಕರಿಸಿ, ಐಕ್ಯತೆ ಮತ್ತು ಹೋರಾ[illegible] ಸಿಐಟಿಯು ಘೋಷ[illegible] ಎತ್ತಿಹಿಡಿಯಬೇಕಾಗಿ ಸಿಐಟಿಯು ಜ[illegible] ಸಮಿತಿ ಮನವಿ ಮಾಡುತ್ತದೆ. ಅಕ್ಟೋಬ[illegible] 9ರ ರೈತ ಕಾರ್ಮಿಕರ ಸಮಾವೇಶ[illegible] ಸಿಐಟಿಯು ಸೇರ್ಪಡೆ ಸಂಘ[illegible] ಕಾರ್ಮಿಕರು, ನೇತೃತ್ವದಡಿಯ ಸ[illegible] ಸದಸ್ಯರು ಹಾಗೂ ಹಿತೈಷಿಗಳು ಭಾಗವ[illegible] ತಿರಸ್ಕರಿಸಿ ಧಿಕ್ಕರಿಸಬೇಕಾಗಿ ಸಿಐಟಿಯು, ಬೆಂಗ[illegible] ಜಿಲ್ಲಾಸಮಿತಿಯು ಕಾರ್ಮಿಕರಿಗೆ, ಹಿತೈಷಿ[illegible] ಮನವಿ ಮಾಡಿದೆ. ಅಧ್ಯಕ್ಷ[illegible] ಹೆಚ್.ಎನ್.ಗೋಪಾಲಗೌಡ, ಪ್ರಧ[illegible] ಕಾರ್ಯದರ್ಶಿ ಕೆ.ಎನ್.ಉಮೇಶ್ ಹೇಳಿಕೆಯ[illegible] ನೀಡಿದ್ದಾರೆ.

ಅತಿವೃಷ್ಠಿ ಸಂತ್ರಸ್ತರಿಗೆ ಗರಿಷ್ಟ ಪರಿಹಾರ ನೀಡಲು ಒತ್ತಾಯಿಸಿ ರಾಜ್ಯಾದ್ಯಂತ ರೈತ ಮತ್ತು ಕೃಷಿಕೂಲಿಕಾರರ ಜಂಟಿ ಪ್ರತಿಭಟನೆ

ಹಿಂದೆಂದೂ ಕಂಡು ಕೇಳರಿಯದ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಕರ್ನಾಟಕ ನಲುಗಿಹೋಗಿದೆ. ವಿಶೇಷವಾಗಿ, ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟು ಬರದ ದವಡೆಗೆ ಸಿಲುಕಿದ್ದ ಇಡೀ ಉತ್ತರ ಕರ್ನಾಟಕ ಇದೀಗ ಅತಿವೃಷ್ಟಿಯಿಂದ ತತ್ತರಿಸಿ ಹೋಗಿದೆ. ಕುಸಿದ ಮನೆಗಳ ಅಡಿಯಲ್ಲಿ ಸಿಕ್ಕಿಹಾಕಿಕೊಂಡು ಮತ್ತು ಪ್ರವಾಹದಲ್ಲಿ ಕೊಚ್ಚಿಹೋಗಿ ಸತ್ತವರ ಸಂಖ್ಯೆ 200 ರ ಗಡಿ ದಾಟಿದೆ. ಕಾರವಾರದಲ್ಲಿ ಗುಡ್ಡ ಕುಸಿದು 21 ಮಂದಿ ಆಸುನೀಗಿದ್ದಾರೆ. ಇದರ ಬೆನ್ನಿಗೇ ಮನೆಕುಸಿತ ಮತ್ತು ಬೆಳೆಹಾನಿಯಿಂದ ಆಘಾತಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳೂ ವರದಿಯಾಗುತ್ತಿವೆ. ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯುಂಟಾಗಿದ್ದು ಸಾವಿಗೀಡಾಗುವವರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.




ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಗಳ ವಿರುದ್ಧ ರಾಜ್ಯಾದ್ಯಂತ 15-10-2009 ರಂದು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ರೈತರು ಮತ್ತು ಕೃಷಿ ಕೂಲಿಕಾರರ ಪ್ರಬಲವಾದ ಪ್ರತಿಭಟನೆಗಳನ್ನು ನಡೆಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ತೀರ್ಮಾನಿಸಿವೆ.

ಹಕ್ಕೊತ್ತಾಯಗಳು

1. ಕೇಂದ್ರ ಸರ್ಕಾರವು ರಾಜ್ಯದಲ್ಲಿ ಸಂಭವಿಸಿದ ಪ್ರಕೃತಿ ವಿಕೋಪವನ್ನು "ರಾಷ್ಟ್ರೀಯ ದುರಂತ" ಎಂದು ಘೋಷಿಸಿ ರಾಜ್ಯಕ್ಕೆ ಗರಿಷ್ಠ ನೆರವನ್ನು ವಿಳಂಬವಿಲ್ಲದೆ ಒದಗಿಸಬೇಕು.
2. ನೆರೆ ಹಾವಳಿಗೆ ತುತ್ತಾಗಿ ಸಾವನ್ನಪ್ಪಿದವರ ವಾರಸುದಾರರಿಗೆ ತಲಾ 5 ಲಕ್ಷ ರೂ. ಪರಿಹಾರ ಕೊಡಬೇಕು.
3. ಮನೆ ಮಠ ಕಳೆದುಕೊಂಡು ಸಂತ್ರಸ್ತರಾಗಿರುವ ಎಲ್ಲ ಕುಟುಂಬಗಳಿಗೆ ಮುಂದಿನ 3 ತಿಂಗಳವರೆಗಾದರೂ ತಿಂಗಳಿಗೆ ಕನಿಷ್ಠ 30 ಕಿ.ಜಿ.ಯಷ್ಟು ಆಹಾರದಾನ್ಯಗಳನ್ನು ಮತ್ತು ಅಗತ್ಯವಿರುವಷ್ಟು ಸೀಮೆ ಎಣ್ಣೆಯನ್ನು ಉಚಿತವಾಗಿ ಒದಗಿಸಬೇಕು.
4. ಕುಸಿದು ಬಿದ್ದ ಹಾಗೂ ಶಿಥಿಲಗೊಂಡಿರುವ ಎಲ್ಲ ಮನೆಗಳನ್ನು ಮನರ್ ನಿರ್ಮಾಣ ಮಾಡಲು ತಲಾ ಒಂದು ಲಕ್ಷ ರೂ.ಗಳನ್ನು ನೀಡಬೇಕು.
5. ಪ್ರವಾಹಪೀಡಿತ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಬೇಕು. ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆಗಟ್ಟಬೇಕು.
6. ಬೆಳೆಹಾನಿ ಅನುಭವಿಸಿರುವ ರೈತರಿಗೆ ಎಕರೆಗೆ ಹತ್ತು ಸಾವಿರ ರೂ. ದರದಲ್ಲಿ ಪರಿಹಾರ ನೀಡಬೇಕು. ರೈತರು ಪಡೆದ ಬೆಳೆ ಸಾಲವನ್ನು ಮನ್ನಾ ಮಾಡಬೇಕು.
7. ಹಾನಿಗೀಡಾದ ರೈತರ ನೀರಾವರಿ ಪಂಪ್‌ಸೆಟ್‌ಗಳನ್ನು ದುರ[illegible] ಮಾಡಿಕೊಡಬೇಕು. ಕೋಳಿ ಹಾಗೂ ಜಾನುವಾರುಗಳನ್ನು ಕಳೆದುಕೊಂಡಿರುವವರಿಗೆ ಪರಿಹಾ[illegible] ಒದಗಿಸಬೇಕು.
8. ಪ್ರವಾಹದಿಂದ ಹಾಳಾದ ಸಂಪರ್ಕ ರಸ್ತೆಗ[illegible] ಹಾಗೂ ವಿದ್ಯುತ್ ಸಂಪರ್ಕಗಳ ದು[illegible] ಕಾರ್ಯವನ್ನು ಸಮರೋಪಾದಿಯ[illegible] ಕೈಗೊಳ್ಳಬೇಕು. ಪ್ರವಾಹ ತಡೆಗಟ್ಟಲ[illegible] ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕು.
9. ಅತಿವೃಷ್ಟಿಗೆ ತುತ್ತಾಗಿರುವ ಪ್ರದೇಶದ[illegible] ಎಲ್ಲಾ ಕರ ವಸೂಲಿಯನ[illegible] ಸ್ಥಗಿತಗೊಳಿಸಬೇಕು. ಸಂತ್ರಸ್ತರ ಮಕ್ಕ[illegible] ಶಾಲಾ-ಕಾಲೇಜು ಶುಲ್ಕಗಳನ್ನು, ಪರೀಕ[illegible] ಶುಲ್ಕಗಳನ್ನು ಮನ್ನಾ ಮಾಡಬೇಕು.
10. ಗ್ರಾಮೀಣ ಉದ್ಯೋಗ ಖಾ[illegible] ಯೋಜನೆಯನ್ನು ರಾಜ್ಯಾದ್ಯಂ[illegible] ಸಮರ್ಪಕವಾಗಿ ಜಾರಿ ಮಾಡಬೇಕು[illegible] ದಿನಗೂಲಿಯನ್ನು 150 ರೂ.[illegible] ಏರಿಸಬೇಕು. ನೂರು ದಿನಗಳ ಬದ[illegible] ವರ್ಷದಲ್ಲಿ 200 ದಿನಗಳ ಕೆಲ[illegible] ಒದಗಿಸಬೇಕು. ಯೋಜನೆ ಜಾರಿಯ[illegible] ಭ್ರಷ್ಟಾಚಾರ, ಯಂತ್ರಗಳ ಬಳ[illegible] ಗುತ್ತಿಗೆದಾರರ ನೇಮಕ ಮಾಡುತ್ತಿರು[illegible] ಅಧಿಕಾರಿಗಳನ್ನು ನೌಕರಿಯಿಂದ ವಜಾ[illegible] ಮಾಡಬೇಕು.

ಯಾತಾಕ್ಕೆ ಮಳೆ ಸುರಿಯಿತೋ... ಲೋಕ ತಲ್ಲಣಿಸ್ಯಾದೋ...



ಳೆಯು ರೌದ್ರ ನರ್ತನವಾಗಿ ತಿದೆ. ಉಕ್ಕಿದ ನೆರೆ, ಜಲಾವೃತ ದೇಶಗಳಿಂದ ಮೆಲ್ಲಗೆ ಸರಿಯುತ್ತಿದೆ. ತೆರೆ ಸರಿದಂತೆ ಆದ ಹಾನಿಯ, ನಾಶದ ದರ್ಶನವಾಗುತ್ತಿದೆ. ಜನ ಗಾಲಾಗಿದ್ದಾರೆ. ನಾಳೆ ಇರಲಿ ದು-ಈಗಿನದೇನು ಎಂದು ಂಕಿತರಾಗಿದ್ದಾರೆ. ನಿನ್ನೆ -ನಾಳೆಗಳ ದರೆ ನಡುಕವಾಗುತ್ತಿದೆ. ಬದುಕಿನ ಬಂಡಿ ಮುನಿದ ಕೃತಿಯ ಏಟಿಗೆ ಛಿದ್ರ-ವಿಛಿದ್ರವಾಗಿ ಹಾಗೇ ಡಿಯಾಗಿ ಬಿದ್ದು ಕೊಂಡಿದೆ. ಹುಟ್ಟಿ ಬೆಳೆದು ದುಕಿ ಬಾಳಿದ, ಹೊಟ್ಟೆಗೆ ಗಂಜಿ ದಿದ್ದರೂ ಒಂದಿಷ್ಟು ನೆರಳಿನ ಯವಾಗಿದ್ದ ಮನೆಯೀಗ ಎಲ್ಲಿ? ಶ್ರಯದ ಹೊಲಗಳೆಲ್ಲಿ? ತೆಗೆಹೆಗಲ ಹಚ್ಚಿ ದುಡಿಯುತ್ತಿದ್ದ ನುವಾರುಗಳೆಲ್ಲಿ? ಈಗ ಕರುಳಿನ ತಿಗಳಿಲ್ಲ. ಹೆತ್ತು ಹೊತ್ತು ಸಾಕಿ ತೈಸಿದ ಹೆತ್ತವರಿಲ್ಲ, ಕೈ ಹಿಡಿದ ತನಾಡಿಗಳಿಲ್ಲ. ಬಿತ್ತಿ, ಬೆಳೆದ ಯು ಬೆಳೆಯಿಲ್ಲ? ಗಂಜಿ ಡಿದಾದರೂ ಜೀವ ತಿಯೋಣವೆಂದರೆ ಇದ್ದಬದ್ದ ದು-ಕಡ್ಡಿ ಕೊಳೆತು ನಾರುತ್ತಿದೆ.

ಯಾತಕೆ ಮಳೆ ೋದವೋ ಶಿವ ಶಿವಾ ಲೋಕ ಣಿಸುತಿದೋ...

ಎಂದು ಬರದ ಬಾಧೆಯಲ್ಲಿ ನಲುಗಿದ ಜನ ೕಗ **'ಯಾತಕೆ ಮಳೆ ಸುರಿಯತೋ. ಲೋಕ ತಲ್ಲಣಿಸ್ಯಾದೋ..'** ಎಂದು ಬಿಕ್ಕುವಂತಾಗಿದೆ. ಜನರ ಪಾಲಿಗೆ "ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿಸೋ..." ಎಂಬ ಹತಾಶೆಯ ಕೂಗು ಇಂದು ಅಕ್ಷರಶಃ ಅತಿವೃಷ್ಟಿ ನೆರೆಯ ಕ್ರೌರ್ಯದಿಂದ ನಿಜವಾಗಿ ಬಿಟ್ಟಿದೆ.!!

ಹೌದು, ಇಂದು ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕದ ಇಡೀ ಜನತೆಯ ಸಮಗ್ರ ಬದುಕನ್ನೇ ಕಟ್ಟಿಕೊಡಲೇಬೇಕಾದ ಗಂಭೀರ ಸ್ಥಿತಿ ಇದೆ. ಇದು ಒಂದು ಮಹಾ ಸವಾಲು ಕೂಡಾ.



ಹಾನಿ - ಅಂದಾಜು

ಸರ್ಕಾರದ ಅಂದಾಜಿನಂತೆ

1. ಈ ಮಳೆ ನೆರೆಗೆ 222ಕ್ಕೂ ಅಧಿಕ ಜನ ಬಲಿಯಾಗಿದ್ದಾರೆ.
2. 1 ಕೋಟಿ 80 ಸಾವಿರದಷ್ಟು ಜನ ಬಾಧಿತರಾಗಿದ್ದಾರೆ.
3. 2 ಲಕ್ಷ ಜಾನುವಾರುಗಳು ಇಲ್ಲವಾಗಿವೆ.
4. 2 ಲಕ್ಷ ಮನೆಗಳು ಕುಸಿದಿವೆ, ನೆಲಸಮವಾಗಿವೆ.
5. ಒಡವೆ, ವಸ್ತುಗಳು ನಾಶವಾಗಿದ್ದು, ಲೆಕ್ಕ ಸಿಗಲು ಈಗ?
6. 25 ಲಕ್ಷ ಹೆಕ್ಟೇರ್ (62.5 ಲಕ್ಷ ಎಕರೆ) ಬೆಳೆಯೂ ಇದ್ದ ಹೊಲ-ಗದ್ದೆ ನಾಶವಾಗಿದೆ. ರಸ್ತೆ, ಸೇತುವೆಗಳು ನಿರ್ನಾಮವಾಗಿ ಹೋಗಿವೆ.
7. ಪರಿಹಾರ ಕೇಂದ್ರಗಳಲ್ಲಿ 2 ಲಕ್ಷ ಜನ ಜಮಾಯಿಸಿದ್ದಾರೆ.
8. ವಿದ್ಯುತ್ ಪೂರೈಕೆ ಜಾಲ ನಾಶವಾಗಿದೆ. ಕುಡಿವ ನೀರಿಗೂ ತತ್ವಾರವಿದೆ.
9. ಸಾಂಕ್ರಾಮಿಕ ರೋಗಗಳು ಹರಡುತ್ತಿದು, ಹಬ್ಬುವ ಭೀತಿ ಇದೆ.

ಅಂದರೆ ಒಟ್ಟು ಹಾನಿ ಏನಿಲ್ಲವೆಂದರೂ, 20 ಸಾವಿರ ಕೋಟಿ ಎಂಬುದು ಮುಖ್ಯಮಂತ್ರಿಗಳ ಅಂದಾಜು. (ಇಂತಹ ನೆರೆ ಪರಿಸ್ಥಿತಿ ನೆರೆಯ ಆಂಧ್ರದಲ್ಲೂ ಸಂಭವಿಸಿದೆ.

ಬದುಕು ಕಟ್ಟಿಕೊಡಲು ಮಾನವೀಯತೆಯ ವಿಶಾಲಹಸ್ತ ಚಾಚಿ -ಜನರಲ್ಲಿ ಮನವಿ

ನೆರೆಯ ಅಪಾರ ಹಾನಿಯ ಸಂದರ್ಭದಲ್ಲಿ ಲ್ಲಿನ ಜನತೆಯ ಬದುಕು ಕಟ್ಟಿಕೊಡಲು ಲ್ಲರೂ ನೆರವಿನ ವಿಶಾಲ ಹಸ್ತ ಚಾಚಬೇಕಿದೆ. ದಕ್ಕಾಗಿ ಹಣ, ವಸ್ತು ಸಂಗ್ರಹಿಸಿ ಳುಹಿಸಬೇಕು.

ಇಂತಹ ನೆರವು ಕೆಲವೊಮ್ಮೆ ಅಧಿಕಾರಸ್ಥರ ಗೆ ಹೋದಾಗ ಹೇಗೆಲ್ಲಾ ಖರ್ಚಾಗುತ್ತದೆ ಂದು ಗೊತ್ತೇ ಇದೆ. ಅದಕ್ಕಾಗಿ ಜನಶಕ್ತಿಯನ್ನು ಳಗೊಂಡು, ಇತರೆ ಸಾಮೂಹಿಕ ಂಘಟನೆಗಳು, ಸಿಪಿಐ(ಎಂ) ಪಕ್ಷ ಆ ಧಿಯನ್ನು ಪೂರ್ಣವಾಗಿ ವಿನಿಯೋಗಿಸುವಂತೆ ಮ ವಹಿಸಲಿವೆ. ಸಹಾಯ ನೀಡುವವರು ಜನಶಕ್ತಿಯ ಮೂಲಕ ನೀಡಬಹುದು. ಅದರ ವರಗಳನ್ನು ಪ್ರಕಟಿಸಲಾಗುವುದು. ಬನ್ನಿ ಹಾಯದ ಹಸ್ತ ಚಾಚಿ.

-ಸಂ.

ಸರ್ಕಾರ ತುರ್ತಾಗಿ ಏನು ಮಾಡಬೇಕು!

ಕೇಂದ್ರ ಸರ್ಕಾರ ಇನ್ನೂ ವಿಳಂಬಿಸದೇ ರಾಷ್ಟ್ರೀಯ ಆಪತ್ತು ಎಂದು ಘೋಷಿಸಬೇಕು. ರಾಜ್ಯ ಸರ್ಕಾರವು ಹಾನಿಯ ಅಂದಾಜಿನ ಬಗ್ಗೆ ಅತ್ಯಂತ ವಿವರವಾದ ಅಧ್ಯಯನ ಮಾಡಬೇಕು. ತಕ್ಷಣದಲ್ಲಿ ಆಹಾರ, ವಸತಿ, ಬಟ್ಟೆ-ಹೊದಿಕೆ, ಪೂರೈಕೆ ಅಲ್ಲದೇ ಸಾಂಕ್ರಾಮಿಕ ರೋಗ ಹರಡದಂತೆ ಆರೋಗ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.

ನಷ್ಟದ ನಿಜ ಅಂದಾಜಿಗೆ ಪರಿಹಾರ ನೀಡುವ ಕ್ರಮವಹಿಸಬೇಕು.

ಬಿದ್ದ ಮನೆಗಳಿಗೆ 1 ಲಕ್ಷ ಪರಿಹಾರ ಎಂದಿದ್ದಾರೆ. ಇದು ಕಡಿಮೆಯಾಗಬಾರದು. ಅಲ್ಲದೇ ಸಣ್ಣ-ದೊಡ್ಡ ಎಂಬ ಬೇಧವಿಲ್ಲದೇ ನೀಡಬೇಕು. ಮನೆ ಬಿದ್ದವರಿಗೆ, ಸತ್ತವರಿಗೆ ಸ್ಕೀಮುಗಳಿಲ್ಲ ಎಂದು ಕೆಲ ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ಈ ವಿಕೋಪದಲ್ಲಿ ಮಡಿದವರಿಗೆ 5 ಲಕ್ಷ ಪರಿಹಾರ ನೀಡಬೇಕು. ಆದ್ದರಿಂದ ಇದಕ್ಕಾಗಿಯೇ ವಸತಿಗಾಗಿ ಪ್ರತ್ಯೇಕ ಯೋಜನೆ ಆರಂಭಿಸಬೇಕು. ಹಣ ನೀಡಬೇಕು. ರಾಜೀವ್‌ಗಾಂಧಿ ವಸತಿಯೋಜನೆ ಮತ್ತು ನರ್ಮ್ ಅಡಿಯಲ್ಲಿ ವ್ಯಾಪಕವಾದ ಗೃಹ ನಿರ್ಮಾಣ ಕೈಗೊಳ್ಳಬೇಕು.

ಈಗ ಸರ್ವಸ್ವವನ್ನು ಕಳೆದುಕೊಂಡವರಿಗೆ ಗಂಜಿಗೂ ಕಷ್ಟವಿದೆ. ಆದ್ದರಿಂದ **ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ** ಜನತೆಗೆ 200 ದಿನ ಕೆಲಸ ನೀಡಲು ತುರ್ತು ಕ್ರಮ ಕೈಗೊಳ್ಳಬೇಕು. ಇದರಿಂದ ಪುನರ್ ನಿರ್ಮಾಣಕ್ಕೂ ಸಾಧ್ಯವಾಗುವುದು.

ಉಚಿತವಾಗಿ ರೇಷನ್, ಸೀಮೆಎಣ್ಣೆಯನ್ನು ಕನಿಷ್ಠ ಮೂರು ತಿಂಗಳಿಗೆ ಸಾಕಾಗುವಷ್ಟು ಪೂರೈಸಬೇಕು.

ಒಂದು ಎಕರೆ ಬೆಳೆ ಹಾನಿಗೆ ಕನಿಷ್ಠ 10,000 ಸಾವಿರ ರೂ. ನೀಡಬೇಕು. ಬೆಳೆ ಸಾಲ ಮನ್ನಾ ಮಾಡಬೇಕು.

ಪ್ರಕೋಪದ ಮುನ್ಸೂಚನೆ ಇತ್ತು ಆದರೆ.. ಬಿಜೆಪಿ ಸರ್ಕಾರ ಕ್ರಿಮಿನಲ್

ಅಪರಾಧಗಳು

ಅರಬ್ಬಿ ಸಮುದ್ರದಲ್ಲಿನ ವಾಯುಭಾರದ ವೈಪರೀತ್ಯದ ಕಾರಣದಿಂದ ಇಂತಹ ಭಾರೀ ಮಳೆ ಬರುವ ಬಗ್ಗೆ ಹವಾಮಾನ ಇಲಾಖೆಯು ಒಂದು ವಾರಕ್ಕೂ ಮೊದಲೇ ಸರ್ಕಾರಕ್ಕೆ ಮುನ್ಸೂಚನೆ ನೀಡಿತ್ತು. ಆದರೆ ಇದನ್ನು ಕೇಳಿಸಿ ಕೊಂಡ ಮುಖ್ಯಮಂತ್ರಿ ಹಾಗೂ ಆಡಳಿತವು ಇನ್ನೊಂದು ಕಿವಿಯಿಂದ ಹೊರಬಿಟ್ಟು ಅತ್ಯಂತ ಹೊಣೆಗೇಡಿತನದಿಂದ ವರ್ತಿಸಿದ್ದಾರೆ. ಅಗತ್ಯ ಕ್ರಮ ವಹಿಸಿದ್ದಿದ್ದರೆ ಈ ಪ್ರದೇಶದಲ್ಲಿನ ಜನ ಜಾರುವಾರು ಆಸ್ತಿಯ ಪಾಲು ರಕ್ಷಿಸಬಹುದಿತ್ತು. ಸುರಕ್ಷಿತ ಸ್ಥಳಗಳಿಗೆ ಸಾಗಿಸಿ, ಸ್ಥಿತಿ ನಿಭಾಯಿಸಲು ಕ್ರಮ ವಹಿಸಬಹುದಿತ್ತು. ಇದರಿಂದ ಹಾನಿಯ ಪ್ರಮಾಣ ತಗ್ಗಿಸಬಹುದಿತ್ತು. ಆದರೆ ಇದ್ಯಾವುದು ಆಗಲೇ ಇಲ್ಲ. ಬದಲಾಗಿ ಮುಖ್ಯಮಂತ್ರಿಗಳು, ಸಚಿವರು ದಸರಾದ 'ಶೋಭಾ ಯಾತ್ರೆ'ಯಲ್ಲಿಯೇ ಮುಳುಗಿ, ಎದ್ದು ಸಂಭ್ರಮಿಸಿದರು. ಹಬ್ಬದ ನಂತರವೂ ಆರ್.ಎಸ್.ಎಸ್.ನ ಬೈಠಕ್‌ನಲ್ಲಿ ಭಾಗವಹಿಸಿದ್ದು, ಅನಾಹುತ ಸಂಭವಿಸಿದರೂ ಅಲ್ಲಿಂದ ಕದಲದೇ, ಸಚಿವರೆಲ್ಲರೂ ಠಿಕಾಣಿ ಹೂಡಿದ್ದು, ಮತ್ತೊಂದು ಅಪರಾಧ. ನಂತರ ಈಗಲೂ ಬಾಯಿ ಮಾತಿನ ಪ್ರಚಾರ-ಹೇಳಿಕೆಗಳಲ್ಲೇ ಹೆಚ್ಚಿನ ಕಾಲಹರಣ ಮಾಡಲಾಗುತ್ತಿದೆ.

ಹೆಲಿಕಾಪ್ಟರ್ ಸ್ವಾಮಿಗೆ ಮಾತ್ರ

ಮಂತ್ರಾಲಯದಲ್ಲಿ ಪ್ರವಾಹದಿಂದ ತತ್ತರಿಸಿ ರಕ್ಷಿಸಲು ಮಹಿಳೆಯರು ಮಕ್ಕಳು ಕೂಗುತ್ತಿದ್ದರೂ ಕೇವಲ ಮಠದ ಸ್ವಾಮಿಯನ್ನಷ್ಟೇ ಹೆಲಿಕ್ಯಾಪ್ಟರ್‌ನಲ್ಲಿ ಎತ್ತಿಕೊಂಡು ಹೋಗಿ 10 ಕೋಟಿಯನ್ನು ಘೋಷಿಸಿದ್ದು, ಜನರ ಆಕ್ರೋಶಕ್ಕೆ ಗುರಿಯಾಗಿದೆ. ಸರ್ಕಾರದ 'ಮಾನವೀಯತೆ ಜನ ಕಾಳಜಿ'ಗೆ ಇದೂ ನಿದರ್ಶನ.

ಆದ್ದರಿಂದಲೇ ಸಚಿವ ಜನಾರ್ಧನ ರೆಡ್ಡಿಯಂತಹವರು ಗ್ರಾಮಗಳಿಗೆ ಭೇಟಿ ನೀಡಿದಾಗ ಜನ ನಿವಾಳಿಸಿ 'ಥೂ' ಮಾರಿ ಹಾಕಿದ್ದಾರೆ. ರಾಯಚೂರಿನಲ್ಲಿ ಅಧಿಕಾರಿಗಳು, ಶಾಸಕರನ್ನು ತರಾಟೆಗೆ ತೆಗೆದುಕೊಂಡು ವಾಹನಗಳನ್ನು ಸುಟ್ಟು ಬಿಟ್ಟಿದ್ದಾರೆ. ○



ಸರ್ಕಾರ ಏನು ಮಾಡಿಲ್ಲ

ಹಾಗಾದರೆ ಜನತೆಯ ಇಂತಹ ಭೀಕರ ಸಂದರ್ಭದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ? ಅವರೇ ಹೇಳುವ ಪರಿಹಾರದ ಕ್ರಮಗಳು ನಿಜಕ್ಕೂ ಜನತೆಯನ್ನು ತಲುಪುತ್ತಿವೆಯಾ? ಸಂಕಷ್ಟದಲ್ಲಿ ಸಾಂತ್ವನವನ್ನಾದರೂ ಹೇಳುತ್ತಿವೆಯಾ? ಊರುಗಳಲ್ಲಿನ ಜನ ಈ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳಿ. ಬಳ್ಳಾರಿ ಜಿಲ್ಲೆಯ ಅಚ್ಚೊಳ್ಳಿಯ ಜನ 'ಸ್ವಾಮಿ ನಮ್ಮ ಪಾಡು ಯಾರಿಗೆ ಹೇಳಬೇಕು. ಇಲ್ಲಿತನಕ ಸರ್ಕಾರದ ಯಾವ ಅಧಿಕಾರಿಗಳು ಬಂದಿಲ್ಲ. ಅನ್ನದ ಪೊಟ್ಟಣ ನಮಗೆ ತಲುಪೇ ಇಲ್ಲ.

ಪುಟ 4ಕ್ಕೆ

ಶಿವಮೊಗ್ಗ

ಯಡಿಯೂರಪ್ಪನೋ ಊರು ಒಡೆಯೂರಪ್ಪನೋ?

ಮುಖ್ಯ ಮಂತ್ರಿಗಳು ಶಿವಮೊಗ್ಗ ಜಿಲ್ಲೆಯವರಾದ್ದರಿಂದ ಶಿವಮೊಗ್ಗ ಜಿಲ್ಲೆ ಹೆಚ್ಚು ಅಭಿವೃದ್ಧಿಯಾಗಿದೆ ಅಂತ ಇತರ ಜಿಲ್ಲೆಯಲ್ಲಿ ಕರುಬುವವರು ಇರಬಹುದು. ಆದರೆ, ಶಿವಮೊಗ್ಗ ನಗರದಲ್ಲಿ 'ಅಭಿವೃದ್ಧಿ' ಅಂದರೆ ಸಾಕು ಜನ, ರಸ್ತೆ ಬದಿಯ ಕಟ್ಟಡಗಳು, ಹಾಗೂ ಮರಗಳು ಬೆಚ್ಚಿ ಬೀಳುತ್ತವೆ. ಅಭಿವೃದ್ಧಿ ಎಂಬ ಹೆಸರಿನಲ್ಲಿ ಶಿವಮೊಗ್ಗದ ಬಿ.ಹೆಚ್.ರಸ್ತೆಯನ್ನು ಅಗಲಗೊಳಿಸಿ ಕಾಂಕ್ರೀಟ್ ರಸ್ತೆ ನಿರ್ಮಿಸಲು ಕಟ್ಟಡಗಳನ್ನು ಧ್ವಂಸಗೊಳಿಸಿ ಒಂದು ವರ್ಷವಾಯಿತು. ಕಟ್ಟಡದ ಮಾಲಿಕರನ್ನು ಗೋಳಾಡಿಸಿ, ಗೋಳಾಡಿಸಿ, ಇನ್ನೂ ಅರ್ಧಂಬರ್ಧ ಪರಿಹಾರ ನೀಡಲಾಗಿದೆ. ಇನ್ನು ಬಾಡಿಗೆದಾರರ ಕತೆ ಕೇಳುವುದೇ ಬೇಡ ಎಲ್ಲಾ ಅಧಿಕಾರಿಗಳು, ಮಂತ್ರಿಗಳಿಗೆ ಮನವಿ ಸಲ್ಲಿಸೀ, ಸಲ್ಲಿಸೀ ಸುಸ್ತಾಗಿದ್ದಾರೆ. ಇವರ ಹೋರಾಟದ ಕ್ಷೀಣ ಧ್ವನಿ ಯಾರಿಗೂ ಕೇಳಿಸಿಲ್ಲ. ಕಟ್ಟಡಗಳ ಧ್ವಂಸಕ್ಕಿಂತ ಹೆಚ್ಚಾಗಿ ಈ ಜನಗಳನ್ನು ಆಘಾತಗೊಳಿಸಿದ್ದು ಇವರುಗಳು ನಂಬಿದ ಬಿ.ಜೆ.ಪಿ.ಗಳು ಹಾಗೂ ಅಧಿಕಾರಿಗಳ ಕ್ರೂರ ವಂಚಕ ನಡವಳಿಕೆ. ಬಿ.ಹೆಚ್. ರಸ್ತೆ ವಿಸ್ತರಣೆ ಬಗ್ಗೆ ಮುಖ್ಯ ಮಂತ್ರಿಗಳೊಂದು ಥರ ಇಂಧನ ಮಂತ್ರಿಗಳೊಂದು ಥರ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದರು. ಇದರ ಗೊಂದಲದಲ್ಲಿ ಜನ ದಸರಾ ಹಬ್ಬದ ಸಂಭ್ರಮದಲ್ಲಿದ್ದಾಗ ರಾತ್ರೋ ರಾತ್ರಿ ಶತೃಗಳ ಧಾಳಿಯಂತೆ ಕಟ್ಟಡಗಳು ಧ್ವಂಸಗೊಳಿಸಲ್ಪಟ್ಟವು. ನ್ಯಾಯಾಲಯದ ಆಜ್ಞೆಗಳೂ ಕಸವಾದವು. ನ್ಯಾಯಾಲಯದ ಆಜ್ಞೆನಮಗೆ ತಲುಪಿಲ್ಲ ಎಂದು ಸುಳ್ಳು ಹೇಳಿ, ಆಜ್ಞೆ ಉಲ್ಲಂಘಿಸಿ ಅಧಿಕಾರಿಗಳೇ ಕಟ್ಟಡ ಧ್ವಂಸಗೊಳಿಸಿದರು. ನಂತರ ಅದೇ ಅಧಿಕಾರಿಗಳೇ "ಕಟ್ಟಡಗಳ ಮಾಲೀಕರು ಸ್ವಯಂಪ್ರೇರಣೆಯಿಂದ ತಾವೇ ಕಟ್ಟಡ ತೆರವುಗೊಳಿಸಿದ್ದಾರೆ" ಎಂದು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ! ಕಾಯುವವರೇ ಕೊಲ್ಲುವವರಾದ ಕತೆಯಿದು.

ಬಿ.ಹೆಚ್. ರಸ್ತೆ ಧ್ವಂಸ ಪ್ರಕರಣದ ಸಂದರ್ಭದಲ್ಲಿ ಜನರ ಆಕ್ರೋಶ ಎದುರಿಸಲಾಗದೆ. 'ಇನ್ನಾವ ರಸ್ತೆ ವಿಸ್ತರಣೆಯೂ ಇಲ್ಲ' ಎಂದು ಮಂತ್ರಿಗಳು ಭರವಸೆ ನೀಡಿ ಬಚಾವಾಗಿದ್ದರು. (ಜನ ನಂಬಿರಲಿಲ್ಲ ಎನ್ನುವುದು ಬೇರೆ ಮಾತು). ಕೆಲವು ತಿಂಗಳುಗಳ ನಂತರ ಇನ್ನೂ ಎರಡು ಮೂರು ರಸ್ತೆಗಳ ಬಗ್ಗೆ ಸುದ್ದಿಗಳು ಹರಿದಾಡಿದವು. ಇದೀಗ ಒಂದು ವರ್ಷದ ನಂತರ ಅತ್ತ ಸಾಗರದ ರಸ್ತೆಯಲ್ಲಿ ಮರಗಳು ನೆಲಕ್ಕುರುಳುತ್ತಿರುವಾಗ, ಇತ್ತ ಮುಖ್ಯಮಂತ್ರಿಗಳು ನೆಹರೂ ರಸ್ತೆ, ದುರ್ಗಿಗುಡಿ ರಸ್ತೆ ಹಾಗೂ ಜೈಲ್ ರಸ್ತೆಯ ವಿಸ್ತರಣೆಯ ಘೋಷಣೆ ಮಾಡಿದ್ದಾರೆ. ಇವರೇನು ಯಡಿಯೂರಪ್ಪನೋ ಊರು ಒಡೆಯೂರಪ್ಪನೋ? ಅಂತ ಜನ ಮಾತನಾಡಿಕೊಳ್ಳುವಂತಾಗಿದೆ. (ಶಿವಮೊಗ್ಗದ 'ಅಭಿವೃದ್ಧಿಗೆ ಯಾವ ಯೋಜನೆ, ಬಜೆಟ್ಟು, ವರದಿ ಏನೂ ಬೇಕಾಗಿಲ್ಲ!?.)

ಈಶ್ವರಪ್ಪ ಧಮಕಿ

ಈ ರಸ್ತೆ ಬದಿಯ ಕಟ್ಟಡಗಳ ಮಾಲೀಕರುಗಳು ಎದೆಯೊಡೆದುಕೊಂಡು ಇಂಧನ ಸಚಿವ ಶ್ರೀ ಈಶ್ವರಪ್ಪನವರ ಮೊರೆ ಹೊಕ್ಕರು. ಅವರು ಸಮಾಧಾನ ಮಾಡಿದ್ದಾದರೂ ಹೇಗೆ? 'ಯಾರಾದರೂ ಕೋರ್ಟು ಗೀರ್ಟು ಅಂತ ಹೋದ್ರೆ, ಬಿ.ಹೆಚ್. ರಸ್ತೆಯವರಿಗಾದ ಗತಿಯೇ ಆಗುತ್ತೆ' ಅಂತ. ಇದರ ಅರ್ಥ ಸ್ಪಷ್ಟವಾಯಿತಲ್ಲವೇ? ಬಿ.ಹೆಚ್. ರಸ್ತೆಯಲ್ಲಿ ನಡೆದಿದ್ದು ಏನು ಅಂತ. ಸರ್ಕಾರಿ ಗೂಂಡಾಗಿರಿ. ಇಲ್ಲೂ ಮತ್ತೆ ಅದೇ ಎಷ್ಟು ಅಗಲ ವಿಸ್ತರಣೆ ಎಂಬುದರ ಬಗ್ಗೆ ಒಬ್ಬೊಬ್ಬರು ಒಂದೊಂದು ಹೇಳುತ್ತ ಗೊಂದಲ ಹುಟ್ಟಿಸುವ ಹಳೇ ನಾಟಕ ನಡೆದಿದೆ. ಸಂಸತ್ ಸದಸ್ಯರೆಂಬ ಇನ್ನೊಬ್ಬ ಪಾತ್ರಧಾರಿಯೂ ಸೇರಿದ್ದಾರೆ.

ವಿಪರ್ಯಾಸವೆಂದರೆ ಈ ಪೆಟ್ಟು ತಿಂದ, 'ತಿನ್ನುತ್ತಿರುವ ವ್ಯಾಪಾರಿಗಳಲ್ಲಿ ಹೆಚ್ಚಿನವರು ಅನೇಕ ವರ್ಷಗಳಿಂದ ಬಿ.ಜೆ.ಪಿಯನ್ನು ಬೆಂಬಲಿಸಿದವರೇ! ಹಾಗಾಗಿ ಇವರಿಗೆ ಹೋರಾಟ ಮಾಡಲು ನಾಯಕರೇ ಇಲ್ಲವಾಗಿ ಮುಖ್ಯ ಮಂತ್ರಿಗಳ ಬಳಿ, ಇಂಧನ ಸಚಿವರ ಬಳಿ, ಸಂಸತ್ ಸದಸ್ಯರ ಬಳಿ ಗೋಳಾಡುವುದು, ಗೋಗರೆಯುವುದೇ ಆಗಿದೆ.

'ಜೈಲು ನುಂಗಲು'

ನಗರ ಸಭೆಯ ಯೋಜನೆಯಲ್ಲಾಗಲೀ ರಾಜ್ಯ ಸರ್ಕಾರದ ಬಜೆಟ್/ಯೋಜನೆಗಳಲ್ಲಾಗಲೀ ಇರದ ಈ ದುರ್ಗಿಗುಡಿ, ಜೈಲ್‌ರಸ್ತೆ ವಿಸ್ತರಣೆ ಕಾರ್ಯಗಳು ದಿಢೀರ್ ಎಂದು ಬಂದಿದ್ದಾದರೂ ಯಾಕೆ ಎಂದು ಹುಡುಕ ಹೋದರೆ ಈ ರಸ್ತೆಯ ಕಡೆಯಲ್ಲಿರುವ ನೂರಾರು ಎಕರೆ ಪ್ರದೇಶ ವಿಸ್ತಾರದ ಕೋಟ್ಯಾನುಕೋಟಿ ರೂಪಾಯಿಗಳ ಬೆಲೆಬಾಳುವ ಜೈಲನ್ನೇ ನುಂಗಲು ಹೊಂಚುಹಾಕಿರುವ ಕಳ್ಳ ಖದೀಮರ ಜಾಡು ಸಿಗಬಹುದು.

ಅಭಿವೃದ್ಧಿ ಎಂದರೆ ಬರೀ ರಸ್ತೆ ವಿಸ್ತರಣೆ ... ಅಲ್ಲ, ರಸ್ತೆ ಅಭಿವೃದ್ಧಿ ಆಗಬೇಕಾದರೂ ಸಂತ್ರಸ್ತ... ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಪುನರ್ವ... ಪರಿಹಾರ, ಇತ್ಯಾದಿ ಸಮಾಧಾನಕರವಾಗಿರಬೇ... ಮೊದಲು ಮುನಿಸಿಪಾಲಿಟಿ ನೌಕರರಿಗೆ ಸರಿಯಾ... ಸಂಬಳ ಕೊಡಿ. ನಗರ ಸಭೆಯ ಆದಾಯ ಹೆಚ್ಚಿ... ಯೋಜನೆಗಳನ್ನು ಕೈಗೊಳ್ಳಿ. ಎಂದು ಕೆ... ಇಂಜಿನಿಯರುಗಳೇ ವಿವೇಕದ ಮಾತು ಹೇಳುತ್ತಿ... ಆದರೆ ಗೂಂಡಾಗಳು ಮಹಾ ಭಂಢ... ಆಗಿರುತ್ತಾರೆ. ಅವರಿಗೆ ವಿವೇಕದ ಮಾತು ... ಪಥ್ಯವಲ್ಲ! ಹಸಿದ ಹೊಟ್ಟೆಗೆ ಅನ್ನ ಕೊಡುವ... ದುಡಿಯುವ ಕೈಗಳಿಗೆ ಕೆಲಸ ಕೊಡುವ... ವಿದ್ಯಾಭ್ಯಾಸ, ಆರೋಗ್ಯ ಇವ್ಯಾವುವೂ ಅಭಿ... ಅಲ್ಲವೇ? ನಿಂತು ಹೋದ ಸಕ್ಕರೆ ಕಾರ್ಖಾನೆ ಬ... ಮಹನೀಯರ್‍ಯಾರೂ ಚಕಾರ ಎತ್ತಿಲ್ಲ. ಸಾವಿ... ಕಾರ್ಮಿಕರು ಎಲ್ಲೆಲ್ಲೋ ಹೋದರು. ಇದೀಗ ... ಬೆಳೆಯುತ್ತಿದ್ದ ಭೂಮಿಯಲ್ಲಿ ವಿಮಾನ ನಿ... ಆಗುತ್ತಿದೆ.

ರಸ್ತೆ ಅಭಿವೃದ್ಧಿಗೆ ಕೋಟ್ಯಾ... ರೂಪಾಯಿಗಳನ್ನು ಸುರಿಯುತ್ತಿದ್ದರೂ ಶಿವಮೊ... ರಸ್ತೆಗಳ 'ಸುಖ'ವನ್ನು ಇಲ್ಲಿ ಬಂದು ಓಡಾಡಿ... ಅನುಭವಿಸಬೇಕು! ಕಾಂಕ್ರೀಟ್ ರ... "ಪ್ರಸಾದ"ದಲ್ಲಿ ಏಳುತ್ತಿರುವ ದೊಡ್ಡವರ ಕಟ್ಟಡ... ನೋಡಿ ಆನಂದಿಸಬೇಕು. ಒಳ್ಳೆಯ ಟಾರ್... ಆಗದೆ? ಕಾಂಕ್ರೀಟ್ ರಸ್ತೆಯೇ ಏಕೆ ಬೇಕು? ... ಹಣದಲ್ಲಿ ಕೆಲವೇ ರಸ್ತೆಗಳ ಬದಲು ಊರಿನ... ರಸ್ತೆಗಳನ್ನೂ ಚೆನ್ನಾಗಿ ಮಾಡಬಹುದಲ್ಲ? ... ಕೆಲವರು ಮುಗ್ಧವಾಗಿ ಪ್ರಶ್ನೆ ಕೇಳುತ್ತಿದ್ದಾರೆ. ಅವರಿಗೆ ಗೊತ್ತಿಲ್ಲ. ಡಾಂಬರಿನಲ್ಲಿ ... ಕಟ್ಟಲಾಗುವುದಿಲ್ಲ ಅಂತ!

ಯಾತಾಕ್ಕೆ ಮಳೆ ಸುರಿಯಿತೋ...

ಪುಟ 3 ರಿಂದ

ಮೂರ್ನಾಲ್ಕು ದಿನಗಳಿಂದ ಹೆಂಗೋ ಜೀವ ಹಿಡಿದಿದ್ದೀವಿ. ಮಕ್ಕಳು, ಹೆಣ್ಣಕ್ಕಳು, ಮುದುಕರು ಹೆಂಗೆ ಇರಬೇಕು ಹೇಳಿ? ಈಗೇನೋ ಸರ್ಕಾರದವರು ಬರುತ್ತಾರಂತೆ. ನೋಡಬೇಕು'.

ರಾಯಚೂರಿನಲ್ಲಿ ಗಂಜಿ ಕೇಂದ್ರಗಳು ಆರಂಭಗೊಂಡಿವೆಯಂತೆ. ಚಿಕ್ಕಗೂರು, ಹಗ್ಗನಹಳ್ಳಿ, ಡೊಂಗ ಪಂಪಾಪುರ ಮುಂತಾದ ಕಡೆ 'ಪರಿಹಾರ' 'ಇನ್ನೂ' ಬರಬೇಕು. ಇಲ್ಲಿಯೂ ಆಹಾರ ಪೊಟ್ಟಣಗಳನ್ನು ಇನ್ನೂ ಜನ ನೋಡಿಯೇ ಇಲ್ಲ!. ಇದು ಇತರೆ ಕಡೆಗಳ ಸಾಮಾನ್ಯ ದೃಶ್ಯ. ಸರ್ಕಾರದ ಆಡಳಿತ ಯಂತ್ರ ಅಪಾಯದಲ್ಲಿರುವ ಕೆಲವು ಜನರನ್ನು ರಕ್ಷಿಸಲು ಬಂದಿಷ್ಟು ಕ್ರಮ ಕೈಗೊಂಡಿದೆ. ಅಲ್ಲಲ್ಲಿ ಪರಿಹಾರದ ಕ್ರಮಗಳಿದ್ದರೂ ಇಂದಿನ ಸ್ಥಿತಿಗೆ ಸರಿದೂಗಿಸಲು ಸಾಧ್ಯವಾಗಿಲ್ಲ. ಅಂದರೆ ಇನ್ನೂ ಆಡಳಿತ ಯಂತ್ರ ಸಂಪೂರ್ಣವಾಗಿ ಸಮರ ಸನ್ನದ್ಧವಾಗಿ ಧುಮುಕಿಲ್ಲ. ಆದರೆ ಧುಮುಕು ಈ ಇಚ್ಛಾಶಕ್ತಿ, ಕಂಡು ಬರುತ್ತಿಲ್ಲ.

ಮುಖ್ಯಮಂತ್ರಿಗಳು ವಿಮಾನ ಸಮೀಕ್ಷೆ ಮಾಡಿ ಕೆಲವು ಹಳ್ಳಿಗಳಿಗೆ ಭೇಟಿ ನೀಡಿ ಬಂದಿದ್ದಾರೆ. ಈಗ ಜನರಿಂದ ಸಂಗ್ರಹಕ್ಕೆ 'ರೋಡ್ ಶೋ'ಗೆ ಇಳಿದಿದ್ದಾರೆ. ಆದರೆ ಮುಖ್ಯಮಂತ್ರಿಗಳು ಮಾಡಬೇಕಾದ ಮಹತ್ವದ ಕೆಲಸ ಬೇರೆ ಇದೆ ಎಂಬ ಪ್ರಜ್ಞೆ ಅವರಿಗೆ ಇಲ್ಲವೇ? ಅಥವಾ ನಿಜ ಪರಿಹಾರ ಕೈಗೊಳ್ಳದೇ ಬಹಳಷ್ಟು ಮಾಡುತ್ತಿದ್ದೇವೆ ಎಂಬ ಪ್ರದರ್ಶಕ ಮೋಜು ಇದಾಗಿದೆಯೇ? ಸರ್ಕಾರದ ಕ್ರಮಗಳನ್ನು ಜನ ನೋಡಿದ್ದಾರೆ. ಮಾಡಬೇಕಾದಷ್ಟನ್ನೂ ಮಾಡದೇ. ಇರೋದು ಇಲ್ಲಿ ಕಾಣುತ್ತಿದೆ. ಇಂತಹ ಪ್ರದರ್ಶನ ಬಿಟ್ಟು ಸಂಪನ್ಮೂಲ ಸಂಗ್ರಹಕ್ಕೆ ಆಡಳಿತ ಚುರುಕುಗೊಳಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಅತ್ಯಂತ ವ್ಯವಸ್ಥಿತವಾಗಿ ಪಾರದರ್ಶಕವಾಗಿಯೂ ಪರಿಹಾರದ ಕ್ರಮ ಕೈಗೊಳ್ಳಬೇಕು.

ಜನರ ನೆರವು

ಈಗಾಗಲೇ ನಾಡಿನ ಜನತೆ ಅತ್ಯಂತ ಮಾನವೀಯತೆ ಮೆರೆದ್ದಾರೆ. ನಿಧಿ, ವಸ್ತುಗಳ ನೀಡಿಕೆ ನಡೆದಿದೆ. ಈ ಸಂದರ್ಭದಲ್ಲಿ ಸಾಧ್ಯವಿರುವ ಎಲ್ಲಾ ನೆರವು ನೀಡಿ ಬದುಕು ಕಲ್ಪಿಸಿಕೊಡಬೇಕಿರುವುದು ಎಲ್ಲರ ಹೊಣೆ.

ಇನ್ನೂ ಸಂಪನ್ಮೂಲ ಸಂಗ್ರಹಿಸುವಲ್ಲಿ:

ರಾಜ್ಯ ಸರ್ಕಾರದ ಕೈಯಲ್ಲಿರುವ ನೈಸರ್ಗಿಕ ಆಪತ್ತು ನಿರ್ವಹಣಾ ಹಣ ಮತ್ತು ಇತರ ಇಲಾಖೆಗಳಲ್ಲಿನ ಎಲ್ಲಾ ಸಂಪನ್ಮೂಲ ಕ್ರೋಢೀಕರಿಸುವುದು.

ಕೇಂದ್ರ ಸರ್ಕಾರವೂ ಸಹ ಕೂಡಲೇ ಇದನ್ನು (ಆಂಧ್ರ ಇತರೆ ಸೇರಿ) 'ರಾಷ್ಟ್ರೀಯ ವಿಪತ್ತು' ಎಂದು ಘೋಷಿಸಿ ಎಲ್ಲಾ ನೆರವನ್ನು ನೀಡಬೇಕು. ವಿಳಂಬದ ರಾಜಕಾರಣ ಸಲ್ಲದು. ಇದಕ್ಕಾಗಿ ರಾಜ್ಯ ಸರ್ಕಾರವು ಸರ್ವ ರಾಜಕೀಯ ಪಕ್ಷಗಳು, ಜನ ಸಂಘಟನೆಗಳ ಪ್ರತಿನಿಧಿಗಳ ಸಭೆಯನ್ನು ಕರೆದು ಸಮಾಲೋಚಿಸಿ ಸಂಯೋಜಿತ ಕ್ರಮ ವಹಿಸಬೇಕು. ಅಲ್ಲದೇ ಕೇಂದ್ರಕ್ಕೆ ಸರ್ವ ಪಕ್ಷಗಳ (ಕೇವಲ ಶಾಸನಸಭೆ ಪಕ್ಷಗಳು ಅಲ್ಲ) ನಿಯೋಗವು ಒತ್ತಾಯಿಸಬೇಕು.

ಈಗಾಗಲೇ ಸೋನಿಯಾಗಾಂಧಿ ಆರ್ಥಿಕ ಸಚಿವ ಚಿದಂಬರಂ ಭೇಟಿ ನೀಡಿದ್ದಾರೆ ಪ್ರಧಾನಿಗಳು ಬರಲಿದ್ದಾರೆ. ಇಷ್ಟೆಲ್ಲಾ ಆದಮೇಲೂ ಸೂಕ್ತ ಸಹಾಯ ತುರ್ತು ಬೇಕಿದೆ.

ವಿಶೇಷವಾಗಿ ಈಗಾಗಲೇ ಸರ್ಕಾರದ ಸರ್ವ ರೀತಿಯ (ಜನರ ಹಣ) ಸಹಾಯ, ಸಬ್ಸಿಡಿ, ತೆರಿಗೆ ವಿನಾಯಿತಿ ಪ್ರೋತ್ಸಾಹ ಎಂದೆಲ್ಲಾ ಸವಲತ್ತು ಗಿಟ್ಟಿಸಿ ಬೆಳೆದಿರುವ ಇನ್‌ಫೋಸಿಸ್, ವಿಪ್ರೋ, ಇತ್ಯಾದಿ ಕೈಗಾರಿಕೋದ್ಯಮಿಗಳಿಂದ ನಿಧಿ ಸಂಗ್ರಹಕ್ಕೆ ಹೆಚ್ಚಿನ ಆದ್ಯತೆಯನ್ನ ರಾಜ್ಯ ಸರ್ಕಾರ ನೀಡಬೇಕು. ಅಂತಹವರ ಸಭೆ ಕರೆದು ಚರ್ಚಿಸಬೇಕು.


ಪರಿಹಾರವೋ ಪರಿಹಾಸ್ಯವೋ?

ಸರ್ಕಾರದ ಪರಿಹಾರ ವೈಖರಿಗೆ ಒಂದು ಪ್ರಕರಣ ಉದಾರಹಣೆ ಇಲ್ಲಿದೆ.

2007ರಲ್ಲಿ ಉಂಟಾದ ಮಳೆ-ನೆರೆ ಹಾ... ಸರ್ವಸ್ವವನ್ನು ಕಳೆದುಕೊಂಡ (ನರಗುಂದ-ರೋ... ತಾಲ್ಲೂಕುಗಳಲ್ಲಿ) ರೋಣದ ಬಸಣ್ಣೆವ್ವನಿಗೆ ರಾ... ಘನ ಸರ್ಕಾರ ಪರಿಹಾರವೆಂದು ಒಂದು ... ನೀಡಿತು. ಆ ಪರಿಹಾರದ ಮೊತ್ತ ಎಷ್ಟು ಗೊ... ರೂ.11.00 (ಹನ್ನೊಂದು ರೂ) ನಿರಕ್ಷರಿ ಬಸಣ... ಇದೆಷ್ಟು ಎಂದು ತಿಳಿಯಲಿಲ್ಲ. ಪರಿಹಾರ ಬ... ಎಂದು ಖುಷಿಯಾಗಿ ಊರ ಹುಡು... ತೋರಿಸಿದರೆ ಆ ಮೊತ್ತ ನೋಡಿ ಅವಕ್ಕಾ... ಇನ್ನೂ ಉಳಿದ ಜೀವ ಕಳೆದುಕೊಳ್ಳಬೇಕಾದ ಪ... ಯಾಕೆಂದರೆ ಪರಿಹಾರ ನೀಡಿಯಾಯ್ತೆಂದು ಆ... ತಹಶೀಲ್ದಾರ್ ಸಾಹೇಬರು ಗಂಜಿ ಕೇಂದ್ರದಿಂ... ಹೊರ ಹಾಕಿದ್ದರು.

ಇನ್ನೂ ವಿಚಿತ್ರವೆಂದರೆ; ಈ ಪರಿ... ದಕ್ಕಿಸಿಕೊಳ್ಳಲು ಆಕೆ ಒಂದು ಬ್ಯಾಂಕ್ ಆ... ಆರಂಭಿಸಬೇಕಿತ್ತು. ಅದಕ್ಕೆ ಆರಂಭಿಕ ಡಿಪಾ... ಎಷ್ಟು ಗೊತ್ತೇ? ರೂ.500.00. ಇಂತಹ ಆ... ತೆರೆಯಲಾಗದೇ, ಪರಿಹಾರ ಪಡೆಯುವುದು... ಹೇಗೇ? ಬಸಣ್ಣೆವ್ವ ಚಿಂತಿಳಾಗಿದ್ದಾಳೆ. ಈಗ... ಪ್ರದೇಶದಲ್ಲಿ ಅಂತೆಯೇ ನೆರೆ ಸಂಭವಿಸಿದೆ.

ಇಂತಹ ಪರಿಹಾರದಿಂದ ಪ್ರಯೋಜನ? ಯಡ್ಡಿ ಇದನ್ನು ಗಮನಿಸಬೇ...



ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (ಕೆಎಫ್‌ಡಿ) ಎಂಬುದೊಂದು ಜಾತ್ಯಾತೀತ ಪ್ರಗತಿಪರ ಸಂಘಟನೆ ಎಂಬಂತೆ ಭಾವಿಸುವ ಹಲವರಿದ್ದಾರೆ. ಬಜರಂಗದಳದಂತೆ, ಕೆಎಫ್‌ಡಿಯೂ ಸಹ ತಾನು ಪ್ರಜಾಪ್ರಭುತ್ವ ವಿರೋಧಿ ಎಂಬುದನ್ನು ಮತ್ತೊಮ್ಮೆ ನಿರೂಪಿಸಿದೆ.

'ನೈತಿಕ ಪೊಲೀಸ್‌ಗಿರಿ'

ಬಯಲಿಗೆ ಬಂದ ಕೆಎಫ್‌ಡಿ ಬಣ್ಣ

ಸಂಜಯ

ದಕ್ಷಿಣ ಕನ್ನಡ

ರಾಷ್ಟ್ರದ ಗಮನವನ್ನು ಸೆಳೆದು ಮಂಗಳೂರಿನ
ವನ್ನು ಹರಾಜು ಹಾಕಿದ ಪಬ್ ದಾಳಿ ನಡೆದು
ಕಳೆದರೂ ನೈತಿಕ ಪೊಲೀಸ್‌ಗಿರಿ
ಗಳೂರಿನ ಬೀದಿಗಳಲ್ಲಿ ಅಡೆತಡೆಗಳಿಲ್ಲದೆ
ದುವರಿಯುತ್ತಿದೆ. ದಿನಾ ಸಾಯುವವರಿಗೆ
ವವರು ಯಾರು ಎಂಬ ನಾಣ್ನುಡಿಯಂತೆ
ಧ್ಯಮಗಳು, ಜಾತ್ಯಾತೀತ ಸಂಘಟನೆಗಳು ನೈತಿಕ
ಲೀಸರ ಕಾರ್ಯಾಚರಣೆಗಳ ಬಗ್ಗೆ ಪ್ರತಿಕ್ರಿಯಿಸು
ಉದಾಸೀನತೆಯನ್ನು ಬೆಳೆಸಿಕೊಂಡಿವೆ. ಇತ್ತ
ಅವಕಾಶವಾಗಿ ಬಳಸಿಕೊಳ್ಳುತ್ತಿರುವ ಮುಸ್ಲಿಂ
ಯವಾದಿ ಶಕ್ತಿಗಳು ತಮ್ಮ ಶಕ್ತಿ ವೃದ್ಧಿಸಿಕೊಳ್ಳಲು
ರಂಗಿ ಪಡೆಗಳೊಂದಿಗೆ ಸ್ಪರ್ಧೆಗೆ ಬಿದ್ದಿವೆ.
998ರ ಸುರತ್ಕಲ್ ಗಲಭೆಯ
ರ್ಯಭಾವಿಯಾಗಿ ಆರಂಭವಾದ
ತ್ವವಾದಿಗಳ ನೈತಿಕ ಪೊಲೀಸ್‌ಗಿರಿ 2008ರ
ದಾಳಿಯೊಂದಿಗೆ ಒಂದು ಹಂತವನ್ನು ದಾಟಿ
ಪ್ರಯೋಗಗಳನ್ನು ನಡೆಸುತ್ತಿದೆ. ಹಿಂದೂ
ಗಿಯರೊಂದಿಗೆ ತಿರುಗಾಡುವ, ಕನಿಷ್ಟ
ಯದ ನಗೆಬೀರುವ ಮುಸ್ಲಿಂ ಹುಡುಗರಿಗೆ ಹಲ್ಲೆ
ವ ಕೃತ್ಯಗಳನ್ನು ದಾಟಿ ಈಗ ಹಿಂದೂ, ಮುಸ್ಲಿಂ
ಮಕ್ಕಳು, ವಿದ್ಯಾರ್ಥಿನಿಯರು ಪರಸ್ಪರ
ತೆಗಿದ್ದರೆ ಹಲ್ಲೆ ನಡೆಸುವ, ಪೊಲೀಸರಿಗೆ
ಸುವ, ಮನೆಯವರನ್ನು ಕರೆದು ಎಚ್ಚರಿಕೆ ನೀಡಿ
ಗಡೆ ಮಾಡುವ ಕೃತ್ಯಗಳು ಬಜರಂಗಿಗಳಿಂದ
ದೆ ನಿತ್ಯ ನಡೆಯುತ್ತಿದೆ. ಹಿಂದುತ್ವವಾದಿಗಳ
ಹ ಅನೈತಿಕ ಗೂಂಡಾಗಿರಿಗೆ ಅಧಿಕೃತ
ಯೊತ್ತುವ ಇಲ್ಲಿನ ಬಜರಂಗಿ ಆಜ್ಞಾರಾಧಕರಾದ
ಲೀಸರು ತಾವೂ ಅಂತಹ ಹುಡುಗಿಯರಿಗೆ
ಕೆ ನೀಡುವ, ಮುಚ್ಚಳಿಕೆ ಬರೆಯಿಸಿ ಬಿಡುವ
ಗಳನ್ನು ಕಾನೂನು ಬದ್ಧ ಎಂಬಂತೆ
ತವಾಗಿಯೇ ಮಾಡುತ್ತಿದ್ದಾರೆ. ಇತ್ತೀಚೆಗೆ ತನ್ನ
ಗೆಳತಿಯೊಂದಿಗೆ ಮಾತನಾಡುತ್ತಿದ್ದ ಮುಸ್ಲಿಂ
ಡುಗನಿಗೆ ಬಹಿರಂಗವಾಗಿ ಬಜ್ಪೆ ಬಸ್ಸು
ಣದಲ್ಲಿ ಹಲ್ಲೆ ನಡೆಸಿದ್ದಲ್ಲದೆ ಹಿಂದೂ ಹುಡುಗಿಗೆ
ದಕಿಯೊಡ್ಡಿ ಮುಸ್ಲಿಂ ಹುಡುಗ ತನ್ನನ್ನು
ಾಯಿಸುತ್ತಿದ್ದ ಎಂಬ ಸುಳ್ಳು ದೂರನ್ನು
ಸಲಾಯಿತು. ಸತ್ಯ ಗೊತ್ತಿದ್ದ ಬಜ್ಪೆ ಪೊಲೀಸರು
ರಂಗಿಗಳು ಹೇಳುತ್ತಿರುವುದೇ ಪರಮಸತ್ಯ
ಂತೆ ನಿರಪರಾಧಿ ಮುಸ್ಲಿಂ ಹುಡುಗನನ್ನು ಜೈಲಿಗೆ
ದು. ಇನ್ನೊಂದು ಘಟನೆಯಲ್ಲಿ ಹಿಂದೂ ಮುಸ್ಲಿಂ
ರ್ಥಿನಿಯರು ಪುತ್ತೂರು ಪೇಟೆಯಲ್ಲಿ ಒಟ್ಟಿಗೆ
ಟೇಲಿಗೆ ಹೋದುದನ್ನೇ ಪ್ರಶ್ನೆಯಾಗಿಸಿ
ುತ್ವದ ತಾಲಿಬಾನಿಗಳು ಆ ಹೆಣ್ಣು ಮಕ್ಕಳನ್ನು
ು ಪೊಲೀಸರಿಗೆ ಒಪ್ಪಿಸಿದರು. ಯಥಾ ಪ್ರಕಾರ
ಲೀಸರು ಹೆತ್ತವರನ್ನು ಠಾಣೆಗೆ ಕರೆಯಿಸಿ ನೈತಿಕ
ವನ್ನು ಹೇಳಿ ಎಚ್ಚರಿಕೆ ನೀಡಿ ಕಳುಹಿಸಿದರು.
ಇಲ್ಲಿ ನಿತ್ಯ ನಡೆಯುತ್ತಿರುವ ಹಿಂದೂ
ಬಾನಿಗಳ ಕಾರ್ಯಾಚರಣೆಯ ಒಂದೆರಡು
ಪಲ್‌ಗಳಷ್ಟೇ. ಇವುಗಳಿಗಿಂತಲೂ
ಕಾರಿಯಾದದ್ದು ಮುಸ್ಲಿಂ ತಾಲಿಬಾನಿಗಳಾದ
... 'ಇಂಡಿಯಾ' ಎಂಬ

ಹೊಸ ಹೆಸರನ್ನಿಟ್ಟುಕೊಂಡಿರುವ KFD ಗಳದ್ದು.

'ಶಿಸ್ತು' ಬದ್ಧತೆ

ಎಲ್ಲವನ್ನು 'ಶಿಸ್ತು ಬದ್ಧ'ವನ್ನಾಗಿ ಮಾಡುವ PFI ಅಲಿಯಾಸ್ KFDಗಳು ನೈತಿಕ ಪೊಲೀಸ್‌ಗಿರಿಯನ್ನು ನಾಜೂಕಾಗಿ, ಮೈನವಿರೇಳಿಸುವಂತೆ ಮಾಡುವುದರಲ್ಲಿ ಸಿದ್ಧ ಹಸ್ತರು. ಮುಸ್ಲಿಂ ಸಮುದಾಯಕ್ಕೆ ಸೇರಿದ ಗಂಡು-ಹೆಣ್ಣುಗಳು ಪರಸ್ಪರ ಜೊತೆಗಿದ್ದರೆ ಅದುವೇ ದೊಡ್ಡ ಅನೈತಿಕತೆ ಎಂಬಂತೆ ಬೊಬ್ಬೆ ಹೊಡೆಯುವ KFD ತಾಲಿಬಾನಿಗಳು ಅವರನ್ನು ವಿಚಾರಣೆಗೆ ಒಳಪಡಿಸಿ, ಹೆತ್ತವರನ್ನು ಕರೆಸಿ ಪಂಚಾತಿಕೆ ನಡೆಸಿ ಕುಟುಂಬಗಳ ಮಾನವನ್ನು ಹರಾಜು ಹಾಕುವುದು ಎಲ್ಲರಿಗೂ ಗೊತ್ತಿರುವ ಕಥೆ. ಇಂತಹ ಘಟನೆಗಳು ನೋವುಣ್ಣುವ ಕುಟುಂಬಗಳ ಕಣ್ಣೀರಿನೊಂದಿಗೆ ಮುಸ್ಲಿಂ ಸಮುದಾಯದೊಳಗಡೆಯೇ ಕರಗಿಹೋಗುತ್ತವೆ. ಪರಧರ್ಮೀಯರನ್ನು ದ್ವೇಷಿಸುವುದರಲ್ಲಿ ಹಿಂದುತ್ವವಾದಿಗಳಿಗಿಂತಲೂ ಒಂದು ಕೈ ಮೇಲು ಎಂಬಂತೆ ವರ್ತಿಸುವ ಇವರು ಮುಸ್ಲಿಂ ಹುಡುಗಿಯರು ಹಿಂದೂ ಹುಡುಗರೊಂದಿಗೆ ಕ್ಷಣ ಮಾತ್ರ ಕಾಣಿಸಿಕೊಂಡರೂ ವ್ಯವಸ್ಥಿತವಾಗಿ ದಾಳಿ ನಡೆಸಿ ರಂಪವೆಬ್ಬಿಸುತ್ತಾರೆ. ಮುಸ್ಲಿಂ ಸಮುದಾಯದೊಳಗಡೆ ಕೃತ್ಯ ನಾವೇ ಎಸಗಿದ್ದು ಎಂದು ಪ್ರಚಾರ ನಡೆಸಿ ಮೈಲೇಜ್ ಗಿಟ್ಟಿಸಿಕೊಳ್ಳುತ್ತಾರೆ ಮತ್ತು ಬಹಿರಂಗವಾಗಿ ತಮಗೂ ಘಟನೆಗೂ ಸಂಬಂಧವಿಲ್ಲ ಎಂಬಂತೆ ಬಿಂಬಿಸಿ ತಾವು ಮಹಾನ್ ಜಾತ್ಯಾತೀತ ಪ್ರಗತಿಶೀಲರು ಎಂಬ ಪೋಸ್ ಕೊಡುತ್ತಾರೆ.

ಪತ್ತೆದಾರಿಕೆ

'ಕೋಮು ಸೌಹಾರ್ದ ವೇದಿಕೆ'ಯ ಭಾಗೀದಾರರಾದ ಇಂತಹ ಮಹಾನ್ ಜಾತ್ಯಾತೀತವಾದಿಗಳ ನಿಜಬಣ್ಣವನ್ನು ಬಹಿರಂಗಗೊಳಿಸಿದ ಘಟನೆಯನ್ನು ನೋಡಿ. ಅಕ್ಟೋಬರ್ ಆರರ ಮಂಗಳವಾರ ಮಧ್ಯಾಹ್ನ ಮಂಗಳೂರಿನಲ್ಲಿ ಎಲ್ಲವೂ ತಣ್ಣಗಿತ್ತು. ಉತ್ತರ ಕರ್ನಾಟಕದ ನೆರೆಹಾವಳಿಯ ದುರಂತ ಇಲ್ಲಿ ಜನರನ್ನು ಮತೀಯವಾದವನ್ನು ಮೀರಿ ಮಾನವೀಯತೆಯಿಂದ ಮಿಡಿಯುವಂತೆ ಮಾಡಿತ್ತು. ದುರಂತ ಪೀಡಿತ ಹತಭಾಗ್ಯರಿಗೆ ತಾವು ಹೇಗೆ ನೆರವಾಗ ಬಹುದು ಎಂದು ಎಲ್ಲರೂ ಚಿಂತಿಸುತ್ತಿದ್ದರೆ ಮತೀಯ ಸೈತಾನರು ಮಾತ್ರ ಹಿಂದೂ, ಮುಸ್ಲಿಂ ಗಂಡು ಹೆಣ್ಣುಗಳು ಪರಸ್ಪರ ಜೊತೆಗಿರುವುದು, ಹೊಟೇಲ್‌ನಲ್ಲಿ ಜೊತೆಯಾಗಿ ಊಟ ಮಾಡುವುದು, ಬಸ್ಸು ನಿಲ್ದಾಣ, ಮಾರುಕಟ್ಟೆಗಳಲ್ಲಿ ಪರಸ್ಪರ ಮಾಡನಾಡುವುದು, ಬಸ್ಸಿನಲ್ಲಿ ಜೊತೆಯಾಗಿ ಪ್ರಯಾಣಿಸುವುದು, ಮಹಾ ರಾಷ್ಟ್ರೀಯ ದುರಂತವೆಂಬಂತೆ ಅಂತಹ ಜೋಡಿಗಳನ್ನು ಪತ್ತೆ ಹಚ್ಚುವುದರಲ್ಲಿಯೇ ತಲ್ಲೀನರಾಗಿದ್ದರು. ಮಂಗಳೂರಿನ ಹೃದಯ ಭಾಗವಾದ ಜಿಲ್ಲಾಧಿಕಾರಿಗಳ ಕಛೇರಿಯ ಮುಂಭಾಗದ ಸದಾ ಜನರಿಂದ ತುಂಬಿರುವ ಸ್ವಾಗತ್



ಹೋಟೇಲಿಗೆ ಊಟ ಮಾಡಲು ಕಾರ್ಕಳದ ಹಿಂದೂ ಹುಡುಗ ಮತ್ತು ಮುಸ್ಲಿಂ ಹುಡುಗಿ ಜೊತೆಯಾಗಿ ಬಂದಿದ್ದಾರೆ. ಪರಸ್ಪರ ಪರಿಚಯಸ್ಥರಾದ ಇವರು ಯಾವುದೋ ಕೆಲಸದ ನಿಮಿತ್ತ ಜೊತೆಯಾಗಿ ಬಂದವರು ಜನ ಜಂಗುಳಿಯ ಮಧ್ಯೆ ಮಂಗಳೂರಿನ ಕರಾಳತೆಯ ಪರಿಚಯವಿಲ್ಲದೆ ಊಟದಲ್ಲಿ ಮಗ್ನರಾಗಿದ್ದರೆ ಹೊಟೇಲಿನ ಹೊರಭಾಗದ ಆಯಕಟ್ಟಿನ ಜಾಗದಲ್ಲಿ ಮುಸ್ಲಿಂ ಮತಾಂಧ ನೈತಿಕ ಪೊಲೀಸರು ಜಮೆಯಾಗತೊಡಗಿದ್ದಾರೆ. ಇದರ ಪರಿವೆಯಿಲ್ಲದೆ ಊಟ ಮುಗಿಸಿ ಹೊರಬಂದ ಈ ಜೋಡಿಯನ್ನು ತಕ್ಷಣ ನಲ್ವತ್ತು ಮಂದಿ PFI (ಹಳೆಯ KFD)ನ ಕಾರ್ಯಕರ್ತರು ಸುತ್ತುವರಿದಿದ್ದಾರೆ. ಅಂತಹ ಜನ ಜಂಗುಳಿಯ ಮಧ್ಯೆಯೂ ಯಾವುದೇ ಗೊಂದಲಗಳಿಲ್ಲದೆ ಕಾರ್ಯಾಚರಿಸಿದ 'ಶಿಸ್ತುಬದ್ಧ' ಕಾರ್ಯಕರ್ತರು ಇಬ್ಬರನ್ನೂ ಅಪಹರಿಸಿ ಗುಪ್ತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಅವರನ್ನು ತಮ್ಮದೇ ಶೈಲಿಯಲ್ಲಿ ವಿಚಾರಣೆ ನಡೆಸತೊಡಗಿದ್ದಾರೆ. ಮುಸ್ಲಿಂ ಹುಡುಗಿಯ ಜೊತೆಗೆ ಊಟ ಮಾಡಿದ ತಪ್ಪಿಗೆ ಹಿಂದು ಯುವಕನಿಗೆ ಸಮಾ ಥಳಿಸಲಾಗಿದೆ. ಎಂದಿನಂತೆ ಹುಡುಗಿಯ ಮನೆಯವರಿಗೆ ತಕ್ಷಣ ಬರಬೇಕು ಎಂಬ ಕರೆಹೋಗಿದೆ. ಇಷ್ಟರಲ್ಲಿ ಸುದ್ದಿಯು ಮಾಧ್ಯಮ ಮಂದಿಯ ಗಮನಕ್ಕೆ ಬಂದಿದೆ. ವಿಷಯ ಪೊಲೀಸ್ ವರಿಷ್ಠಾಧಿಕಾರಿಯವರಿಗೂ ಮುಟ್ಟಿದೆ. ಎಸ್‌ಪಿಯವರ ಕಟ್ಟುನಿಟ್ಟಿನ ಆದೇಶದಿಂದಾಗಿ ಪೋಲೀಸರು ಮಂಗಳೂರಿನ ಇಂಚಿಂಚೂ ಜಾಲಾಡತೊಡಗಿದ್ದಾರೆ. ಇದನ್ನು ಅರಿತ ಮುಸ್ಲಿಂ ನೈತಿಕ ಪೊಲೀಸರು ಹಿಂದೂ ಹುಡುಗನನ್ನು ಬಿಡುಗಡೆಗೊಳಿಸಿದ್ದಾರೆ. ಹುಡುಗಿಯನ್ನು ಮನೆಯವರಿಗೆ ನೈತಿಕ ಪಾಠವನ್ನು ಹೇಳಿಕೊಟ್ಟು ಎಚ್ಚರಿಕೆ ನೀಡಿ ಕಳುಹಿಸಿಕೊಟ್ಟಿದ್ದಾರೆ. ಇತ್ತ ಸದಾ ನೊಂದವರ ಪರವಹಿಸುವ ಸಾಮಾನ್ಯವಾಗಿ ಎಂತಹುದೇ ಸಂದರ್ಭದಲ್ಲೂ ಜಾತ್ಯಾತೀತ ನಿಲುವನ್ನು ಎತ್ತಿ ಹಿಡಿಯುವ 'ದಿ ಹಿಂದೂ, ಕರಾವಳಿ ಅಲೆ' ಪತ್ರಿಕೆಯ ವರದಿಗಾರರು ಸುದ್ದಿಯನ್ನು ಖಚಿತ ಪಡಿಸಿಕೊಳ್ಳಲು PFI ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಥಾವುಲ್ಲಾನನ್ನು ಫೋನ್ ಮೂಲಕ ಸಂಪರ್ಕಿಸಿದ್ದಾರೆ. ಈ ಪತ್ರಿಕೆಗಳ ವರದಿಗಾರರ ಜಾತ್ಯಾತೀತ ಮನೋಭಾವವನ್ನು ತಮ್ಮ ಪರ ಎಂದು ಅರ್ಥೈಸಿಕೊಂಡಿದ್ದ ಹುಂಬ ಅಥಾವುಲ್ಲಾ ಕ್ಷಣ ಯಾಮಾರಿ ಬಜರಂಗಿ ಮಹೇಂದ್ರ ಕುಮಾರ್‌ನಂತೆ ಮಾತನಾಡಿದ್ದಾನೆ. ಕೃತ್ಯವನ್ನು ನಾವೇ ಮಾಡಿದ್ದು, ಮುಸ್ಲಿಂ ಹುಡುಗಿಯೊಂದಿಗೆ ಹಿಂದೂ ಹುಡುಗ ಊಟ ಮಾಡುವುದು ಅನೈತಿಕತೆಯ ಪರಮಾವಧಿ. ಅದಕ್ಕಾಗಿ ಹುಡುಗನಿಗೆ ಎರಡೇಟು ಬಿಗಿದು

ಪುಟ 14ಕ್ಕೆ

ಅಕ್ಷರದಾಸೋಹ ನೌಕರರ 2 ನೇ ರಾಜ್ಯ ಸಮ್ಮೇಳನ

ಸಾಮಾಜಿಕ ಸಮಾನತೆಗಾಗಿ, ಬಿಸಿಯೂಟ ಖಾಸಗೀಕರಣದ ವಿರುದ್ಧ ಹೋರಾಟದ ಸಂಕಲ್ಪ

ಬಿಸಿಯೂಟ ನೌಕರರನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ತರಬೇಕು, ಖಾಸಗೀಕರಣಕ್ಕೆ ತಡೆಹಾಕಬೇಕು, ನೌಕರರಿಗೆ ಜೀವನ ಭದ್ರತೆ, ಉದ್ಯೋಗಭದ್ರತೆ ಒದಗಿಸಬೇಕೆಂಬ ಬೇಡಿಕೆಗಳ ಆಧಾರದಲ್ಲಿ ಅಕ್ಷರದಾಸೋಹ ನೌಕರರ ಸಂಘಟನೆಯ ರಾಜ್ಯ ಸಮ್ಮೇಳನವು ಅಕ್ಟೋಬರ್ 2 ಮತ್ತು 3 ರಂದು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆಯಿತು. ಅಕ್ಟೋಬರ್ 2 ರಂದು ನಗರ ರೈಲ್ವೆ ನಿಲ್ದಾಣ ಸಮೀಪದ ತೋಟದಪ್ಪ ಛತ್ರದ ಬಿ2 ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭವು ನಡೆಯಿತು.

ಸಮ್ಮೇಳನವನ್ನು ರಾಷ್ಟ್ರದ ಮಹಿಳಾ ಚಳುವಳಿಯ ಹಿರಿಯ ನಾಯಕಿ, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರ ಬೃಂದಾಕಾರಟ್ ಉದ್ಘಾಟಿಸಿದರು. ಮಾಜಿ ಸಚಿವೆ, ಸಾಹಿತಿ ಬಿ.ಟಿ.ಲಲಿತಾ ನಾಯಕ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್, ಸಿಐಟಿಯು ಅಖಿಲ ಭಾರತ ಮುಖಂಡರಾದ ರಂಜನಾ ನಿರುಲ್ಲಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಟಿ. ಲೀಲಾವತಿ ಮುಂತಾದವರು ಪಾಲ್ಗೊಂಡಿದ್ದ ಸಮಾರಂಭದಲ್ಲಿ



ಸಂಘಟನೆಯ ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿಅಧ್ಯಕ್ಷತೆ ವಹಿಸಿದ್ದರು. ಯಾರು ಏನು ಹೇಳಿದರು, ಏನು ನಡೆಯಿತು. ಓದಿ.

'ಉದ್ಯೋಗ ಚೀಟಿ ನೀಡಿ, ವೇತನ ಹೆಚ್ಚಿಸಿ. ಬ್ಯಾಂಕ್ ಖಾತೆ ಮೂಲಕ ವೇತನ ನೀಡಿ'

- ಬೃಂದಾ ಕಾರಟ್

'ಬಿಸಿಯೂಟ ನೌಕರರಿಗೆ ತಿಂಗಳಿಗೆ ಕೇವಲ 400 ರಿಂದ 850 ರೂ.ಗಳನ್ನು ವೇತನ ಮಾತ್ರ ನೀಡಲಾಗುತ್ತಿದೆ. ಅವರ ವೇತನ ಕನಿಷ್ಠ ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ನೀಡುತ್ತಿರುವಷ್ಟಕ್ಕಾದರೂ ಏರಿಸಬೇಕಿದೆ. ತಿಂಗಳ ವೇತನ ಪಡೆಯಲು ನೌಕರರ ಪರದಾಡಬೇಕಿದೆ. ಇದರಲ್ಲಿಯೂ ಅವರನ್ನು ಶೋಷಿಸಲಾಗುತ್ತಿದೆ. ಇದನ್ನು ತಪ್ಪಿಸಲು ನೌಕರರಿಗೆ ಬ್ಯಾಂಕ್ ಖಾತೆಯ ಮೂಲಕ ವೇತನ ನೀಡಬೇಕು. ಹಾಗೂ ನೌಕರರಿಗೆ ಉದ್ಯೋಗ ಚೀಟಿ ನೀಡಬೇಕು. ಬಿಸಿಯೂಟ ಯೋಜನೆಯ ಖಾಸಗೀಕರಣ ನಿಲ್ಲಬೇಕು. ಧಾರ್ಮಿಕ, ಜಾತಿಯ ಸಂಘಟನೆಗಳಿಗೆ ಯೋಜನೆ ಒಪ್ಪಿಸುವುದು ತಪ್ಪಬೇಕು.

ಕೇಂದ್ರ ಸರ್ಕಾರವು ಬಿಸಿಯೂಟ ಯೋಜನೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂಚಿಗಳನ್ನು ಬದಲಿಸಿ ಮಕ್ಕಳಿಗೆ ಮತ್ತಷ್ಟು ಉತ್ತಮ ಪೌಷ್ಟಿಕಾಂಶಗಳಿಂದ ಕೂಡಿದ ಆಹಾರವನ್ನು ನೀಡಲು ಕ್ರಮವಹಿಸಬೇಕು. ಪ್ರಾಥಮಿಕ ಶಾಲೆಯ ಒಂದು ಮಗುವಿನ ಕೇವಲ 20 ಗ್ರಾಂ ಬೇಳೆ, 100 ಗ್ರಾಂ ಅಕ್ಕಿ, 50 ಗ್ರಾಂ ತರಕಾರಿ ನೀಡುವುದು ಏನೇನೂ ಸಾಲದು.

ದೆಹಲಿಯಲ್ಲಿ ಇತ್ತೀಚಿಗೆ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿಗಳು ಮಕ್ಕಳಿಗೆ ಕೊಡುವ ಆಹಾರ ಹೆಚ್ಚಿದೆ. ಅದನ್ನು ಕಡಿತಗ ಮಾಡಬೇಕೆಂದು ತಿಳಿಸಿರುವುದು ಆಘಾತಕಾರಿಯಾದ ವಿಷಯ. ಕೇಂದ್ರ ಸರ್ಕಾರವು ಮಗುವಿನ ಪ್ರತಿ ಊಟಕ್ಕೆ ಕೇವಲ 2 ರೂಪಾಯಿ 57 ಪೈಸೆ ಮಾತ್ರ ನೀಡುತ್ತಿದೆ. ಆಹಾರಧಾನ್ಯ ಇತರೆ ಸಾಮಗ್ರಿಗಳ ಬೆಲೆ ತೀವ್ರ ಏರುತ್ತಿರುವಾಗಲೂ ಇಷ್ಟನ್ನೇ ನೀಡಲಾಗುತ್ತಿದೆ. ರಾಜ್ಯ ಸರ್ಕಾರ ಕೇವಲ 77 ಪೈಸೆ ಮಾತ್ರ ನೀಡುತ್ತಿದೆ."

ಅಕ್ಟೋಬರ್ 2 ಮತ್ತು 3 ರಂದು ನಡೆದ ಪ್ರತಿನಿಧಿ ಅಧಿವೇಶನದ ಚರ್ಚೆಗಳ ನಂತರ ನೂತನ ಸಮಿತಿಯನ್ನು ಸಮ್ಮೇಳನ ಚುನಾಯಿಸಿತು.

ಅಧ್ಯಕ್ಷರು : ಎಸ್.ವರಲಕ್ಷ್ಮಿ

ಉಪಾಧ್ಯಕ್ಷರು : ಲೀಲಾವತಿ, ಯಮುನಾ ಗಾಂವ್ಕಾರ್

ದುರ್ಗಪ್ಪ, ಶರಣಬಸವ ಮರದ

ರೇಣುಕ, ಕಲ್ಪನಾ, ಸುನಂದ

ಪ್ರಧಾನ ಕಾರ್ಯದರ್ಶಿ : ಮಾಲಿನಿ ಶರಣ್ ...

ಸಹಕಾರ್ಯದರ್ಶಿಗಳು :ಸಿದ್ಧಮ್ಮ, ಯಶೋಧ... ರತ್ನಾವತಿ, ಮುಗುಂಡಪ್ಪ, ರಾಜಮ್ಮ ಮಹದೇವಮ್ಮ

ಖಜಾಂಚಿ ನಾಗರತ್ನ

ಒಂದು ಖಾಲಿ ಸ್ಥಾನ ಸೇರಿದಂತೆ

ಒಟ್ಟು 64 ಜನ ಸೇರಿ ನೂತನ ಸಮಿತಿ ರಚನೆಯಾಗಿದೆ.



ಅಕ್ಟೋಬರ್ 3 ರಂದು ಬೆಳಿಗ್ಗೆ ಶಿಕ್ಷಕರ ಸದನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ವಿವಿಧ ಗಣ್ಯರು ಪಾಲ್ಗೊಂಡಿದ್ದರು.

'ಅಕ್ಷರ ದಾಸೋಹ ನೌಕರರು ಸಾಮಾಜಿಕ ನ್ಯಾಯ ವಂಚಿತರು'

ನ್ಯಾಯಮೂರ್ತಿ ಎಸ್.ಆರ್.ನಾಯಕ್

ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

"ದೇಶ ಸ್ವಾತಂತ್ರ್ಯ ಗಳಿಸಿ 60 ವರ್ಷಗಳ ನಂತರವೂ ಜನತೆಗೆ ಸಾಮಾಜಿಕ ನ್ಯಾಯಸಿಕ್ಕಿಲ್ಲ. ಮಾನವ ಹಕ್ಕುಗಳು ಮೂಲಭೂತ ಹಕ್ಕುಗಳಿಂದ ವಂಚನೆಯಾಗುತ್ತಿದೆ. ಬಿಸಿಯೂಟ ತಯಾರಿಸಿ ನೀಡುವ ಅಕ್ಷರ ದಾಸೋಹ ನೌಕರರು ಸಾಮಾಜಿಕ ನ್ಯಾಯ ವಂಚಿತರು. ಶತ ಶತಮಾನಗಳಿಂದ ವಂಚನೆಗೆ ಒಳಗಾದ ಹಿಂದುಳಿದ ಗುಂಪಿನ ಮಕ್ಕಳು ಶಾಲೆಯಲ್ಲಿ ಲವಲವಿಕೆಯಿಂದ ಕಲಿಯಲು ಬಿಸಿಯೂಟ ನೆರವಾಗುತ್ತದೆ. ಕಲಿಕೆಯ ಬಗ್ಗೆ ಆಸಕ್ತಿ ಮೂಡಲು, ಚುರುಕುತನ, ಲವಲವಿಕೆ ಮೂಡಿಸಲು ನೆರವಾಗುತ್ತದೆ.

ದಶಕಗಳ ಹಿಂದೆ ಗೃಹಣಿ ವಾಹನ ಅಪಘಾತದಲ್ಲಿ ತೀರಿಕೊಂಡರೆ ಆಕೆಗೆ ಏನು ಆದಾಯ ಇಲ್ಲ ಎಂಬ ಲೆಕ್ಕಚಾರದಲ್ಲಿ ದಿನಕ್ಕೆ 25 ರೂ.ನಂತೆ ಏನೋ ಒಂದಷ್ಟು ಲೆಕ್ಕ ಹಾಕಿ, ಒಂದು ಲಕ್ಷಕ್ಕಿಂತ ಕಡಿಮೆ ವಿಮಾ ಪರಿಹಾರ ನಿಗದಿ ಮಾಡಲಾಗುತ್ತಿತ್ತು. ಹೊರಗೆ ದುಡಿಮೆಗೆ ಹೋಗದೆ ಮನೆಯಲ್ಲಿ ದುಡಿಯುವ ಮಹಿಳೆಯರ ದುಡಿಮೆಗೆ ಬೆಲೆಯೇ ಇರಲಿಲ್ಲ. ಆಗ ನಾನು ಗೃಹಣಿಯ ಆದಾಯವನ್ನು ಕನಿಷ್ಠ ಮಾಸಿಕ 3000 ರೂ.ಗಳಾದರೂ ಲೆಕ್ಕ ಮಾಡಬೇಕೆಂದು ದ ...ಗಳ ಹಿಂದೆಯೇ ತೀರ್ಪು ನೀ...ದ್ದೆ.

ತಿಂಗಳಿಗೆ 300, 400 ಸಂಬಳ ಎಂದರೆ ಏನರ್ಥ. 10 ರೂಪಾಯಿಗೆ ಈಗ ಏನು ಬರುತ್ತದೆ.? ನಮ್ಮ ಮಂತ್ರಿಗಳು ಫೈವ್ ಸ್ಟಾರ್ ಹೋಟೇಲ್‌ಗಳಲ್ಲಿ ಒಂದು ಕಾಫಿಗೆ 300 ರೂ. ಖರ್ಚು ಮಾಡುವವರಿದ್ದಾರೆ. ಅಕ್ಷರ ದಾಸೋಹದ ನೌಕರರು ರಾಜ್ಯದ ಸೇವಕರು. ಅವರು ರಾಜ್ಯದ ಸೇವೆ ಮಾಡುತ್ತಾರೆ. ಅವರೂ ಸರ್ಕಾರಿ ನೌಕರರೇ. ಕಾಂಟ್ರಾಕ್ಟ್ ಆಗಿದ್ದರೂ ಅವರು ನೌಕರರೇ. ಅವರಿಗೆ ನ್ಯಾಯಬದ್ಧ ವೇತನ ನೀಡಬೇಕು. ಗರ್ಭಿಣಿಯವರಿಗೆ ರಜೆ - ಭತ್ಯೆ ಇತ್ಯಾದಿ ಸೌಲಭ್ಯ ನೀಡಬೇಕು. ಬಿಸಿಯೂಟ ನೌಕರರ ನಿಕೃಷ್ಟ ಸಂಬಳದಲ್ಲೂ ಪಾಲು ಕೇಳುವ ಭ್ರಷ್ಟ ಅಧಿಕಾರಿಗಳಿರುವುದು ಆಘಾತಕಾರಿ. ಜಂಟಿ ಸದನ ಸಮಿತಿ ಇಸ್ಕಾನ್ ಹಗರಣದ ಬಗೆಗೆ ತನಿಖೆ ನಡೆಸುವಂತಾಗಬೇಕು. ಯೋಜನೆಯ ಖಾಸಗೀಕರಣ ನಿಲ್ಲಬೇಕು."

'ಖಾಸಗೀಕರಣ ತಡೆ ಏಕಿಲ್ಲ'

-ಜಿ.ವಿ.ಶ್ರೀರಾಮರೆಡ್ಡಿ

"ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ತೀರಾ ಹಿಂದುಳಿದ ಪರಿಸ್ಥಿತಿ ಹಾಗು ಪೌಷ್ಟಿಕಾಂಶದ ಕೊರತೆಯಿಂದ ಸಾಯುವ ಮಕ್ಕಳ ಭಾರತದಲ್ಲಿ ಬಹುದೊಡ್ಡ ಪಾಲು ಇತ್ತು ಏಷ್ಯಾರಾಷ್ಟ್ರಗಳ ಶಿಶು ಮರಣದ ಶೇ.60ರಷ್ಟು ಈಗಿನ ಸರ್ಕಾರಗಳು ಇದನ್ನು ಸಾಮಾಜಿ... ಅಸಮಾನತೆ ತೊಡೆಯುವ ಕಾರ್ಯಕ್ರಮವಾ... ಜಾರಿಗೆ ತರುತ್ತಿರುವುದಾಗಿ ಹೇಳಿಕೊಳ್ಳುತ್ತಿವೆ. ಆದ... ದೇಶದ ಸುಪ್ರೀಂಕೋರ್ಟ್ 'ಮಕ್ಕಳ... ಅಪೌಷ್ಟಿಕತೆಯಿಂದ ಸಾಯುತ್ತಿರುವುದನ್ನು ತಪ್ಪಿ... ಎಂದು ಆದೇಶಿಸಿದರಿಂದಾಗಿ ಈ ಯೋಜನೆ ಜಾರಿ... ಬರುತ್ತಿದೆ.

ವಿಚಾರ ಸಂಕಿರಣಕ್ಕೆ ವಿವಿಧ ರಾಜಕೀಯ ಪ... ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ. ಬಹುತೇ... ರಾಜಕೀಯ ಪಕ್ಷಗಳು ರಾಜಕೀಯ... ಅನುಕೂಲಕ್ಕೋಸ್ಕರ ಲಾಭ ನಷ್ಟಗಳ ದೃಷ್ಟಿಯಿ... ಈ ವಿಚಾರವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿ...



ಪುಟ ...


ಶ್ರೀಮಂತ ದೇಶಗಳ ಯಜಮಾನಿಕೆ ಮುಂದುವರೆಯುತ್ತಿದೆ

ಇತ್ತೀಚಿನ ಜಿ-20 ಶೃಂಗಸಭೆ ಜಗತ್ತಿನ ಆರ್ಥಿಕದ ನಿರ್ವಹಣೆಯಲ್ಲಿ ಬದಲಾವಣೆ ತಂದಿದೆ, ಭಾರತದಂತಹ ದೇಶಗಳ ಕೈಮೇಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಜಾಗತಿಕ ಬಂಡವಾಳಶಾಹಿಯ ನಿರ್ವಾಹಕ ಸ್ಥಾನ ಜಿ-8 ರ ಬದಲು ಜಿ-20ರ ಕೈಗೆ ಹೋಗುತ್ತಿರುವುದು ಜಾಗತಿಕ ವ್ಯವಸ್ಥೆಯಲ್ಲಿ ಯಾವುದೇ ಮೂಲಭೂತ ಪಲ್ಲಟದ ಸೂಚನೆಯೇನೂ ಅಲ್ಲ.

ಸೆಪ್ಟೆಂಬರ್ 24-25ರಂದು ಪಿಟ್ಸ್‌ಬರ್ಗ್‌ನಲ್ಲಿ ನಡೆದ ಜಿ-20 ಶೃಂಗಸಭೆ 19 ದೇಶಗಳ (ಮತ್ತು ಯುರೋಪಿಯನ್ ಸಂಘದ) ಈ ಗುಂಪಿಗೆ ಒಂದು ಶಾಶ್ವತ ಸ್ವರೂಪ ಕೊಟ್ಟಂತಾಗಿದೆ. ಅದೀಗ ಜಾಗತಿಕ ಆರ್ಥಿಕದ ಹೊಸ ನಿರ್ವಾಹಕ. ಜಾಗತಿಕ ಹಣಕಾಸು ಮತ್ತು ಆರ್ಥಿಕ ಬಿಕ್ಕಟ್ಟು ಭುಗಿಲೆದ್ದ ನಂತರ ಇದು ಈ ಗುಂಪಿನ ಮೂರನೇ ಶೃಂಗ ಸಭೆ.

ಜಾಗತಿಕ ಉತ್ಪಾದನೆ ಮತ್ತು ವ್ಯಾಪಾರದಲ್ಲಿ ಚೀನಾ, ಭಾರತ, ಬ್ರೆಝಿಲ್, ಮೆಕ್ಸಿಕೊ, ಅರ್ಜೆಂಟಿನಾ, ದಕ್ಷಿಣ ಕೊರಿಯಾ, ಟರ್ಕಿ, ಇಂಡೋನೇಷ್ಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳ ಪಾಲು ಗಣನೀಯವಾಗಿ ಹೆಚ್ಚಿರುವುದರಿಂದ ಶ್ರೀಮಂತ ದೇಶಗಳ ಜಿ-8 ಕ್ಕೆ ಜಾಗತಿಕ ಆರ್ಥಿಕವನ್ನು ನಿರ್ವಹಿಸುವ ಸಾಮರ್ಥ್ಯ ಉಳಿದಿಲ್ಲ. ಅದೀಗ ತನ್ನ ಅಸಮರ್ಥತೆಯನ್ನು ತೋರಿಸಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹೆಚ್ಚು ವ್ಯಾಪಾರಗಳಿಂದಾಗಿ ಅಭಿವೃದ್ಧಿ ಹೊಂದಿರುವ ದೇಶಗಳ, ಅದರಲ್ಲೂ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮಾರುಕಟ್ಟೆಯನ್ನು ಹೆಚ್ಚು ಅವಲಂಬಿಸಬೇಕಾಗಿ ಬಂದಿದೆ. ಅಲ್ಲದೆ ಡಾಲರ್ ಜಗತ್ತಿನ ಮೀಸಲು ಕರೆನ್ಸಿಯ ಸ್ಥಾನಮಾನ ಹೊಂದಿರುವುದರಿಂದಾಗಿ ಜಗತ್ತಿನ ಹಣಕಾಸು ಸಂಪತ್ತು ಡಾಲರಿನಲ್ಲಿ ಸೂಚಿಸುವ ಆಸ್ತಿಗಳಲ್ಲಿ ಶೇಖರವಾಗುತ್ತಿದೆ. ಆದ್ದರಿಂದ ಜಗತ್ತಿನಾದ್ಯಂತ ಮೇಲ್ವರ್ಗಗಳ ಮಂದಿ ಮತ್ತು ಸರಕಾರಗಳು ಡಾಲರಿನ ವಿಶ್ವಾಸಾರ್ಹತೆ ಉಳಿಸಲು ಅಮೆರಿಕಾದೊಂದಿಗೆ ಸಹಕರಿಸಲು ಮುಂದಾಗುತ್ತಾರೆ.

ಆದರೆ ಜಾಗತಿಕ ಬಂಡವಾಳಶಾಹಿಯ ನಿರ್ವಾಹಕ ಸ್ಥಾನ ಜಿ-8 ರ ಬದಲು ಜಿ-20ರ ಕೈಗೆ ಹೋಗುತ್ತಿರುವುದು ಜಾಗತಿಕ ವ್ಯವಸ್ಥೆಯಲ್ಲಿ ಯಾವುದೇ ಮೂಲಭೂತ ಪಲ್ಲಟದ ಸೂಚನೆಯೇನೂ ಅಲ್ಲ. ಜಿ-20 ಜಗತ್ತಿನ ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ಕೂಡ ಸರಿಯಲ್ಲ. ಏಕೆಂದರೆ ಈ ಗುಂಪಿನಲ್ಲಿ ಇರಾನ್, ವೆನೆಜುವೆಲಾದಂತಹ ಪ್ರಮುಖ ಆರ್ಥಿಕಗಳು, ಆಫ್ರಿಕಾ ಖಂಡದ ದೇಶಗಳು(ದಕ್ಷಿಣ ಆಫ್ರಿಕಾ ಬಿಟ್ಟು) ಇಲ್ಲದಿರುವುದು ಇದಕ್ಕೆ ನಿಜವಾಗಿಯೂ ಒಂದು ಪ್ರಾತಿನಿಧಿಕ ಸ್ವರೂಪ ಇಲ್ಲದಂತೆ ಮಾಡಿದೆ.



ಆರ್ಥಿಕ ಚೇತರಿಕೆ ತಾತ್ಕಾಲಿಕವಾಗಿರುವುದರಿಂದ ಈಗಲೇ ಹಣಕಾಸು ಉತ್ತೇಜಕಗಳನ್ನು ಹಿಂದಕ್ಕೆ ಪಡೆಯುವುದು ಸಲ್ಲ ಎಂದು ಜಿ-20 ಒಪ್ಪಿಕೊಂಡರೂ ‘ಸರಿಯಾದ ಸಮಯದಲ್ಲಿ ನಿರ್ಗಮನ ಕಾರ್ಯತಂತ್ರಗಳಿಗೆ ......ಅಸಾಧಾರಣ ಬೆಂಬಲ ನೀತಿಯನ್ನು ಹಿಂದಕ್ಕೆ ಪಡೆಯುವುದಕ್ಕೆ ಒಂದು ಸಹಕಾರಿ ಮತ್ತು ಸಂಯೋಜಿತ ರೀತಿಯಲ್ಲಿ, ಹಣಕಾಸು ಹೊಣೆಗಾರಿಕೆಗೆ ನಮ್ಮ ಬದ್ಧತೆಯನ್ನು ಕಾಯ್ದುಕೊಂಡು ಸಿದ್ಧವಾಗಬೇಕು’ ಎಂದು ನಿರ್ಧರಿಸಲಾಯಿತು. ಜಿ-20 ‘ಸಂರಕ್ಷಣಾತ್ಮಕ ಧೋರಣೆಗಳ ವಿರುದ್ಧ ಹೋರಾಡಲು’ ಮತ್ತು ಡಬ್ಲ್ಯುಟಿಓ ದೋಹಾ ಸುತ್ತನ್ನು 2010ರಲ್ಲಿ ಯಶಸ್ವಿಯಾಗಿ ಸಮಾಪನ ಗೊಳಿಸಲು ನಿರ್ಧರಿಸಿತು. ಜಾಗತೀಕರಣದ ಅಡಿಯಲ್ಲಿರುವ ಒಟ್ಟಾರೆ ಆರ್ಥಿಕ ಚೌಕಟ್ಟು ಹಾಗೆಯೇ ಉಳಿಯುತ್ತದೆ ಎಂಬುದು ಇಲ್ಲಿ ಸ್ಪಷ್ಟ. ಅಮೆರಿಕಾ ಜಗತ್ತಿನ ಇತರ ಭಾಗಗಳಿಂದ ದೊಡ್ಡ ಮೊತ್ತಗಳ ಸಾಲಗಳನ್ನು ಮಾಡಿ ಅಗಾಧ ವ್ಯಾಪಾರ ಕೊರತೆಗಳಲ್ಲಿ ನಡೆಯುತ್ತಿರುವ ಜಾಗತಿಕ ಅಸಮತೋಲನದ ಸ್ಥಿತಿಯನ್ನು ಎದುರಿಸುವ ಬಗ್ಗೆ ಈಗಲೂ ಮಾತಿಲ್ಲ.



ಜಾಗತಿಕ ಹಣಕಾಸು ಶಿಲ್ಪವನ್ನು ಪುನರ್ರಚಿಸುವುದಕ್ಕೆ ಸಂಬಂಧಪಟ್ಟಂತೆ ಹೊಸದೇನೂ ಇರಲಿಲ್ಲ. ಆಗಾಗ ಹೇಳುವ ಬಹಳ ಸೀಮಿತವಾದ ಬ್ಯಾಂಕಿಂಗ್ ಸುಧಾರಣೆಗಳ ಮಾತಿನ ಪುನರಾವರ್ತನೆಯಾಯಿತಷ್ಟೇ. ಬಿಕ್ಕಟ್ಟಿನ ಮೊದಲೇ ಒಮ್ಮತ ಮೂಡಿರದ ಬೇಸೆಲ್-2 ಮಾನಕಗಳು, ತೆರಿಗೆ ವಂಚಕರ ಆಶ್ರಯಪ್ರದೇಶಗಳ ಮೇಲೆ ದಾಳಿ, ಅವರಿಗೆ ಬ್ಯಾಂಕ್ ಆಧಾರವನ್ನು ಕಡಿಮೆ ಮಾಡುವುದು ಇತ್ಯಾದಿ ವಿಷಯಗಳ ಮೇಲೇ ಹಣಕಾಸು ಸುಧಾರಣೆಯ ಚರ್ಚೆಗಳು ಗಮನ ಕೇಂದ್ರೀಕರಿಸಿದವು. ಆದರೆ ಈಗಲೂ ಒಮ್ಮತ ದೂರದ ಮಾತೇ ಆಗುಳಿದಿದೆ.

ಜಾಗತಿಕ ಆರ್ಥಿಕ ಉಸ್ತುವಾರಿಗೆ ಸಂಬಂಧಪಟ್ಟಂತೆ, ಐಎಂಎಫ್‌ನಲ್ಲಿ ಕನಿಷ್ಠ 5ಶೇ. ಮತ್ತು ವಿಶ್ವಬ್ಯಾಂಕಿನಲ್ಲಿ ಕನಿಷ್ಠ 3ಶೇ. ಶೇರುಗಳನ್ನು ವಿಪರೀತ ಪ್ರಾತಿನಿಧ್ಯ ಹೊಂದಿರುವ ಅಭಿವೃದ್ಧಿ ಹೊಂದಿದ ದೇಶಗಳಿಂದ ‘ಮೂಡಿ ಬರುತ್ತಿರುವ’ ಆರ್ಥಿಕಗಳಿಗೆ ವರ್ಗಾಯಿಸುವುದಾಗಿ ಭರವಸೆ ನೀಡಲಾಯಿತು. ನಿಜ, ಅಮೆರಿಕಾ ಐಎಂಎಫ್‌ನಲ್ಲಿ ಯಾವುದೇ ವಿಷಯದಲ್ಲಿ ನಿಷೇಧಾಧಿಕಾರ(ವಿಟೋ)ವನ್ನು ಚಲಾಯಿಸಲು ಬೇಕಾದಷ್ಟು ಶೇರುಗಳನ್ನು ತಾನೇ ಇಟ್ಟುಕೊಳ್ಳುತ್ತದೆ. ಜಗತ್ತಿನ ಬಡವರನ್ನು ಕುರಿತಂತೆ, ಅತೀ ಬಡ ದೇಶಗಳಲ್ಲಿ ಆಹಾರ ಭದ್ರತೆಯನ್ನು ಪ್ರೋತ್ಸಾಹಿಸುವ ವಿಶ್ವ ಬ್ಯಾಂಕ್ ನೇತೃತ್ವದ ಈಗಾಗಲೇ ಇರುವ ಕಾರ್ಯಕ್ರಮವನ್ನು ಅನುಮೋದಿಸಲಾಯಿತು. ಜಿ-20 ಕೂಟದ ಹೊರಗೆ ಇರುವವರ ಕುರಿತು ಕಾಳಜಿಯಿದೆ ಎಂಬುದರ ಸಂಕೇತವಾಗಿ ಇದನ್ನು ಮಾಡಲಾಯಿತು.

ಒಟ್ಟಿನಲ್ಲಿ, ಜಿ-20 ಶೃಂಗ ಸಭೆ ಜಾಗತೀಕರಣದ ಹಿಂದಿರುವ ಆರ್ಥಿಕ ವ್ಯವಸ್ಥೆಯಲ್ಲಿ ಯಾವುದೇ ಗಮನಾರ್ಹ ಬದಲಾವಣೆಯನ್ನು ಸೂಚಿಸುವ ಬದಲು ಅದರ ಮುಂದುವರಿಕೆಯನ್ನೇ ಹೆಚ್ಚಾಗಿ ಸೂಚಿಸಿದೆ. ಅಮೆರಿಕಾದ ಅಧ್ಯಕ್ಷ ಒಬಾಮಾ ಹಾಗೂ ಬ್ರಿಟನ್ ಮತ್ತು ಫ್ರಾನ್ಸಿನ ಮುಖ್ಯಸ್ಥರು ಕೂಡಾ ಇರಾನಿನ ನಾಗರಿಕ ಪರಮಾಣು ಕಾರ್ಯಕ್ರಮದ ವಿರುದ್ಧ ಮತ್ತಷ್ಟು ಹರಿಹಾಯಲು ಈ ಸಂದರ್ಭವನ್ನು ಬಳಸಿಕೊಂಡದ್ದು ಅಮೆರಿಕಾದ ಯಜಮಾನಿಕೆಗೆ ಸಂಬಂಧಪಟ್ಟಂತೆ ಏನೇನೂ ಬದಲಾವಣೆ ಇಲ್ಲ ಎಂಬುದನ್ನು ತೋರಿಸುತ್ತದೆ.

ದಾಸೋಹ ನೌಕರರು ಸಾಮಾಜಿಕ ನ್ಯಾಯ ವಂಚಿತರು...


ಪುಟ 6 ರಿಂದ

ಸಿಪಿಐ(ಎಂ) ಪಕ್ಷ ದುಡಿಯುವ ವರ್ಗದ ಪರ ಇರುವ ಪಕ್ಷ. ರಾಜಕೀಯ ಇಚ್ಛಾಶಕ್ತಿಯೊಂದಿಗೆ ದುಡಿಯುವ ಜನರ ಪರವಾಗಿ ಹೋರಾಡುತ್ತಿದೆ. ಇಸ್ಕಾನ್ ನೀಡುವ ಊಟದಲ್ಲಿ ಈರುಳ್ಳಿ, ಬೆಳ್ಳುಳ್ಳಿ ಹಾಕುವುದಿಲ್ಲ. ಯಾಕೆ ಹಾಕಬಾರದು. ಸಾಮಾಜಿಕ ನ್ಯಾಯದ ಬಗೆಗೆ ಮಾತಾಡುವ ಸರ್ಕಾರ ಇಸ್ಕಾನ್ ಹಗರಣದ ಬಗೆಗೆ ಜಂಟಿ ಸದನ ಸಮಿತಿ ವರದಿ ಬರುವವರೆಗೆ ಯಾಕೆ ಬಿಸಿಯೂಟ ಖಾಸಗೀಕರಣ ತಪ್ಪಿಸುವುದಿಲ್ಲ? 2002 ರಲ್ಲಿ ಮೊದಲು ಖಾಸಗೀಕರಣ ಮಾಡುವಾಗ ಅದನ್ನು ಸದನದಲ್ಲಿ ಪ್ರಸ್ತಾಪಿಸಿ ವಿರೋಧಿಸಿದ್ದು, ಸಿಪಿಐ(ಎಂ) ಶಾಸಕನಾದ ನಾನು ಮತ್ತು ಮಾಧುಸ್ವಾಮಿ.

ಅಕ್ಷಯ ಫೌಂಡೇಷನ್ ಬಿಸಿಯೂಟ ಪೂರೈಸಲು ಅನರ್ಹ ಸಂಸ್ಥೆ

- ಡಿ.ಕೆ.ಶಿವಕುಮಾರ್

‘ಇಸ್ಕಾನ್ ಹಗರಣದ ಬಗೆಗೆ ಸದನದಲ್ಲಿ ನಾನು ಮಾತನಾಡಿದ ನಂತರ ನಮ್ಮ ಪಕ್ಷದ ಒಳಗೊನಿಂದಲೂ, ಹೊರಗಿನಿಂದಲೂ ಹಲವು ರೀತಿಯ ಒತ್ತಡಗಳು ಬರುತ್ತಿವೆ. ಸಾಕಷ್ಟು ಹೋರಾಟದ ನಂತರ ರಾಜ್ಯ ಸರ್ಕಾರ ಜಂಟಿ ಸದನ ಸಮಿತಿ ರಚಿಸಲು ಒಪ್ಪಿತು. ಆದರೆ ಸಮಿತಿಯ ಸದಸ್ಯರನ್ನು ನೇಮಿಸಿಲ್ಲ. ಇಸ್ಕಾನ್‌ಗೆ ಬಿಸಿಯೂಟ ಪೂರೈಕೆಗೆ ಅವಕಾಶ ಕೊಡುವುದು ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ವಿರುದದಿದು ಒಂದು ಧಾರ್ಮಿಕ ಸಂಸ್ಥೆ. ಅಷ್ಟು ಮಾತ್ರವಲ್ಲ ದೇಶದ ಮಕ್ಕಳನ್ನು ಭಿಕ್ಷುಕರೆಂಬಂತೆ ತೋರಿಸಿಕೊಂಡು ಕೋಟಿ ಹಣ ಸಂಗ್ರಹಿಸುತ್ತಿದೆ. ಇದರ ವಿರುದ್ಧದ ಹೋರಾಟ ಯಾವುದೇ ಒತ್ತಡ ಬಂದರೂ ನಿಲ್ಲುವುದಿಲ್ಲ.




ಅಧ್ಯಕ್ಷರಾಗಿ ಆಯ್ಕೆಯಾದ ಎಸ್.ವರಲಕ್ಷ್ಮಿ ಮತ್ತು ಪ್ರಧಾನ ಕಾರ್ಯದರ್ಶಿ ಮಾಲಿನಿ ಶರಣ್

ಬಿಸಿಯೂಟದಲ್ಲಿ ಕೆಲಸ ಮಾಡುವವರು ನೌಕರರು ಎಂದು ನಾನು ಹೇಳುವುದಿಲ್ಲ. ಇದು ರಾಷ್ಟ್ರದ ಸೇವೆ. ದೇಶಕ್ಕಾಗಿ ತ್ಯಾಗ ಮಾಡುತ್ತಿದ್ದೇವೆ ಅನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡೋಣ.

ರಾಯಚೂರು

ಜನಜೀವನವೇ ಪ್ರವಾಹದಲ್ಲಿ ಮುಳುಗೇಳುತ್ತಿದ್ದಾಗಲೂ ಹಲವು ದಿನ ಅತ್ತ ತಲೆಹಾಕದ ಅಧಿಕಾರಸ್ಥರು, ಶಾಸಕ ಮಂತ್ರಿಗಳ ಬಗೆಗೆ ಜಿಲ್ಲೆಯಲ್ಲಿ ಜನರ ಆಕ್ರೋಶ ಬುಗಿಲೆದ್ದಿದೆ.

ಕೊಚ್ಚಿಹೋದ ಬದುಕು

ಶರಣಬಸವ

ಗೋಡೆ ಕುಸಿದು ಸಾವು, ಮಳೆಗೆ ಎರಡು ಬಲಿ, ಮಳೆಯಿಂದ ಜನಜೀವನ ಅಸ್ತವ್ಯಸ್ತ. ರಸ್ತೆ ಸಂಚಾರ ಸ್ಥಗಿತ, ಗ್ರಾಮಗಳು ಜಲಾವೃತ ಹೀಗೆ ಹತ್ತಾರು ಸುದ್ದಿಗಳ ಸರಮಾಲೆಗಳು ದಿನಪತ್ರಿಕೆಯಲ್ಲಿ ಪ್ರಮುಖ ಸುದ್ದಿಗಳಾಗಿದ್ದವು.

ಇದ್ದಕ್ಕಿದ್ದಂತೆ ಕಳೆದ ಮಂಗಳವಾರದಿಂದ ಶುಕ್ರವಾರದವರೆಗೆ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದ ಸಂಭವಿಸಿದ ದುರಂತಗಳಲ್ಲಿ ವರದಿಯಾಗುತ್ತಿದ್ದವು.

ಜಿಲ್ಲೆಯಾದ್ಯಂತ ಸುರಿದ ಭಾರಿ ಮಳೆ ಮತ್ತು ಕೃಷ್ಣ ಮತ್ತು ತುಂಗಭದ್ರಾ ನದಿ ಪ್ರವಾಹದಿಂದ ಅನೇಕ ಗ್ರಾಮಗಳನ್ನು ಇನ್ನಿಲ್ಲದಂತೆ ನಾಶ ಮಾಡಿತ್ತು. ಮೊನ್ನೆ ಮೊನ್ನೆಯವರೆಗೂ ಜನ ಜಾನುವಾರು ಮತ್ತು ಗಿಡಮರಗಳಿಂದ ತುಂಬಿದ ಜೀವಂತ ಗ್ರಾಮಗಳು ಈಗ ಜೀವವಿಲ್ಲದಂತಾಗಿ ಸ್ಮಶಾನ ಮೌನಕ್ಕೆ ತಿರುಗಿರುವುದು. ಅಲ್ಲಿನ ಧಾರುಣ ಸ್ಥಿತಿ ಎಂಥ ಕಲ್ಲು ಮನಸ್ಸನ್ನು ಕರಗಿಸುತ್ತದೆ.

ಭೀಕರ ಮಳೆ ಮತ್ತು ಪ್ರವಾಹದಿಂದಾಗಿ, ಸೂರಿಲ್ಲದೆ ಊರಿಗೆ ದಾರಿಯಿಲ್ಲದೆ ಅಸಹಾಯಕರಾಗಿ ಇರುವ ಜನರಿಗೆ ಸೂರಿನ ವ್ಯವಸ್ಥೆಯು ಅವಶ್ಯಕತೆಯಿಂದ ಇದು ರಾಯಚೂರು ಜಿಲ್ಲೆಯಲ್ಲಿ ಈಚೆಗೆ ಸುರಿಧ ಭಾರಿ ಮಳೆ ಮತ್ತು ನೆರೆಹಾವಳಿಯಿಂದಾಗಿ ಉಂಟಾದ ಭೀಕರ ದುರಂತದ ಚಿತ್ರಣ.

ಜಿಲ್ಲೆಯಲ್ಲಿ ಹಿಂದೆಂದೂ ಕಂಡರಿಯದ ಮಳೆಯಿಂದ ಉಂಟಾದ ಹಾನಿಯಿಂದಾಗಿ ಜನರ ಬದುಕೇ ಕೊಚ್ಚಿಹೋದಂತಾಗಿದೆ.

ಈ ದುರಂತದಿಂದಾಗಿ 27 ಜನರು ಸಾವಿಗೀಡಾಗಿದ್ದು, 1894 ಜಾನುವಾರುಗಳು ಸಾವನ್ನಪ್ಪಿವೆ. ಅನ್ನ, ಆಹಾರವಿಲ್ಲದೆ, ಕುಡಿಯಲು ನೀರಿಲ್ಲದೆ, ಎರಡು-ಮೂರು ದಿನಗಳವರೆಗೆ ಗಿಡಗಂಟೆಗಳ, ಮನೆಯ ಮಾಳಿಗೆಯ ಮೇಲೆ ಆಶ್ರಯ ಪಡೆದವರು ಸಾವಿರಾರು ಜನ. ಕೆಳಗೆ 6-7 ಅಡಿಯಷ್ಟು ನೀರು ಮೇಲೆ ಧಾರಾಕಾರವಾಗಿ ಸುರಿಯುತ್ತಿರುವ ಮಳೆ, ಇವರೆಡರ ಮಧ್ಯೆ ತಮ್ಮ ಮರಿ ಮಕ್ಕಳೊಂದಿಗೆ ಸಹಾಯಕ್ಕಾಗಿ, ಮೊರೆಯಿಟ್ಟ ಜನರ ಕಷ್ಟ ಹೇಳತೀರದು. ಇಂತಹ ಮಹಾಮಳೆಯಿಂದಾಗಿ ಜನರ ಬದುಕು ಮೂರಾಬಟ್ಟೆಯಾಗಿದೆ.

ಮಳೆ ಸಂಬಂಧಿ ಹಾನಿಯಿಂದ ಜನರು ಇನ್ನು ಮುಕ್ತರಾಗಿಲ್ಲ. ಇನ್ನೂ ಸಾವು ನೋವುಗಳು ಹೆಚ್ಚುವ ಸಂಭವವಿದೆ. ಮಳೆ ಹಾಗೂ ನದಿ ಪ್ರವಾಹದಿಂದ ಖಾಲಿಯಾದ ಗ್ರಾಮಗಳಿಗೆ ಇನ್ನೂ ಜನ ತೆರಳದಂತೆ ರಾಡಿಯಾಗಿವೆ. ಇಡೀ ಜೀವನವೇ ಹಾಳಾದ ಜನತೆಗೆ ಮತ್ತೆ ಪುನರ್ ಜೀವನ ನೀಡಬೇಕಾಗಿದೆ.

ಇಂತಹ ಜನರ ಬದುಕನ್ನು ಕಟ್ಟಿಕೊಳ್ಳುವುದು ಸುಲಭವಲ್ಲ. ಇಡೀ ಜನ ಸಮುದಾಯ ಅವರ ನೆರವಿಗೆ ನಿಂತರೆ ಮಾತ್ರ ಅವರು ಬದುಕನ್ನು ಕಟ್ಟಿಕೊಳ್ಳಬಲ್ಲರು. ಕ್ರಮೇಣ ಮಳೆ ಕಡಿಮೆಯಾಗಿದ್ದರಿಂದ ಪರಿಹಾರ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸಲು ಅವಕಾಶವಿದೆ. ಈ ವಿಚಾರದಲ್ಲಿ ಸಂಘಟಿತ ಪ್ರಯತ್ನದ ಅವಶ್ಯಕತೆಯಿದೆ.



ಅಂಕಿ-ಅಂಶಗಳು : ಜಿಲ್ಲೆಯಲ್ಲಿ ಮಳೆಯಿಂದಾಗಿ 61,541 ಜನ ನಿರಾಶ್ರಿತರಾಗಿದ್ದು, ಪ್ರವಾಹ ದಿಂದ ಇದುವರೆಗೆ 27 ಜನ ಸಾವನ್ನಪ್ಪಿದ್ದಾರೆ. 1894 ಜಾನುವಾರುಗಳು ಸಾವನ್ನಪ್ಪಿವೆ. ಇದುವರೆಗೆ 158 ಗಂಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 16 ಗ್ರಾಮಗಳು ಸಂಪೂರ್ಣ ಜಲಾವೃತ್ತ ಗೊಂಡು ನಾಶವಾಗಿವೆ. 38,835 ಮನೆಗಳು ಬಿದ್ದಿವೆ, 25,816 ಹೆಕ್ಟೇರ್ ಪ್ರದೇಶದಲ್ಲಿನ ಬೆಳೆ ನಷ್ಟವಾಗಿವೆ.

ವಿದ್ಯುತ್ ಸಮಸ್ಯೆ: 3400 ವಿದ್ಯುತ್ ಕಂಬಗಳು ಬಿದ್ದಿವೆ. 800 ಟ್ರಾನ್ಸ್‌ಫಾರ್ಮರ್‌ಗಳು ಮುಳುಗಿವೆ. 5 ಸಣ್ಣ ಕೆರೆಗಳು, 6 ಬೃಹತ್ ಕೆರೆಗಳು ಒಡೆದಿವೆ. 10 ಏತ ನೀರಾವರಿ ಸಾಧನಗಳಿಗೆ ಧಕ್ಕೆಯಾಗಿದೆ. ಶಕ್ತಿನಗರದ 5 ವಿದ್ಯುತ್ ಘಟಕಗಳು, ಕಲ್ಲಿದ್ದಲ್ಲಿನ ಗೋಡೋನಿಗೆ ನೀರು ನುಗ್ಗಿದ್ದರಿಂದ, ವಿದ್ಯುತ್ ಉತ್ಪಾದನೆ ಸ್ಥಗಿತಗೊಂಡಿದೆ.

ರಾಯಚೂರಿನ ಯರಮರಸ್ ಬಳಿ ರೈಲು ಹಳಿ ಕೊಚ್ಚಿಕೊಂಡು, ಈ ಕಡೆಯ ರೈಲು ಸಂಚಾರ ಸ್ಥಗಿತಗೊಂಡಿದೆ. ಅದರಂತೆ ರಾಯಚೂರು -ಮಂತ್ರಾಲಯ ರಸ್ತೆಯಲ್ಲಿನ ತುಂಗಭದ್ರ ನದಿಯ ಬ್ರಿಜ್ ಸಂಪೂರ್ಣ ಕೊಚ್ಚಿಹೋಗಿದ್ದರಿಂದ ರಸ್ತೆ ಸಂಚಾರ ನಿಂತಿದೆ.




ಸಂತ್ರಸ್ತರ ರಕ್ಷಣೆಯಲ್ಲಿ ಜಿಲ್ಲಾಡಳಿತ ವಿಫಲ: ಸತತ ಮಳೆ ಹಾಗೂ ಪ್ರವಾಹದಿಂದ ಸಂಕಷ್ಟಕ್ಕೀಡಾಗಿರುವ ಜಿಲ್ಲೆಯ ಜನರ ಸಂರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳುವಲ್ಲಿ ಸರ್ಕಾರ ವಿಫಲಗೊಂಡಿದೆ.

ತಕ್ಷಣ ಸಂತ್ರಸ್ತರ ನೆರವಿಗೆ ಧಾವಿಸಲು ಜಿಲ್ಲಾಡಳಿತಕ್ಕೆ ಸಾಧ್ಯವಾಗಿಲ್ಲ. ಮಳೆಯ ಎರಡನೇ ದಿನ ಸಂಘ-ಸಂಸ್ಥೆಗಳೇ ಆಹಾರ, ನೀರನ್ನು ವಿತರಿಸಿದವು. ಪ್ರವಾಹಕ್ಕೊಳಗಾದ ಜನರ ಸರ್ಕಾರ ತಮ್ಮ ನೆರವಿಗೆ ಬಂದು ರಕ್ಷಿಸುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ. 2-3 ದಿನಗಳವರೆಗೆ ಹಾಗೆಯೇ ಅನ್ನ ನೀರಿಲ್ಲದೆ ಗಿಡಗಳ ಆಶ್ರಯದಲ್ಲಿ ಮತ್ತು ಮನೆಗಳ ಮೇಲೆ ಜೀವನ ಕಳೆದಿದ್ದಾರೆ.

ಜಿಲ್ಲಾಡಳಿತ ಸರಿಯಾಗಿ ಪರಿಹಾರ ಕಾರ್ಯಗಳನ್ನು ಕೈಗೊಂಡಿಲ್ಲ. ಸರ್ಕಾರ ಹಾಗೂ ಅಧಿಕಾರಿಗಳ ಮಧ್ಯೆ ಸಮನ್ವಯ, ಕೊರತೆ ಇದಕ್ಕೆ ಕಾರಣವಾಗಿವೆ.

ಎಷ್ಟು ಗ್ರಾಮಗಳು ಜಲಾವೃತಗೊಂಡಿದೆ. ಎಷ್ಟು ಜನರು ಪ್ರವಾಹದಲ್ಲಿ ಸಿಲುಕಿದ್ದಾರೆಂಬುದನ್ನು ಪತ್ತೆ ಹಚ್ಚಿ ರಕ್ಷಿಸುವಲ್ಲಿ ಸರ್ಕಾರ ವಿಫಲವಾಗಿದೆ. ತಡವಾಗಿದೆ ಮತ್ತು ಜನರೇ ಜಿಲ್ಲಾಡಳಿತವನ್ನು ಎಚ್ಚರಿಸಿ ರಕ್ಷಣೆ ಪಡೆದುಕೊಂಡಂತಹ ಘಟನೆಗಳು ಸಾಕಷ್ಟು ಜರುಗಿವೆ.



ಸಂತ್ರಸ್ತರ ನೆರವಿಗೆ ಧಾವಿಸಿದ ರಾಷ್ಟ್ರೀಯ ವಿಪತ್ತು ರಕ್ಷಣಾ ಪಡೆಯ ದೋಣಿಗಳನ್ನು ಸಂಪರ್ಕವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಬೂರ್ದಿ ಪಾಡಿನಲ್ಲಿ ರಕ್ಷಣೆಗೆ ಬಂದಿದ್ದ ದೋಣಿಗಳಲ್ಲಿ ಒಂದು ಆಗಲೇ ಪಂಚರ್ ಆಗಿ ಕೆಲಸವಿಲ್ಲದೆ ಬಿದ್ದಿತ್ತು. ಇನ್ನೊಂದು ದೋಣಿಯ ಮುಖಾಂತರ ರಕ್ಷಣೆ ಕಾರ್ಯ ನಡೆದಿತ್ತು. ಅದೇ ರೀತಿಯಾಗಿ ಮಾನ್ವಿಯ ಚೀಕಲಪರ್ವಿಯ ಪ್ರವಾಹ ಪೀಡಿತ ರಕ್ಷಣೆಗೆ ಧಾವಿಸಿದ್ದ ಹೆಲಿಕ್ಯಾಪ್ಟರ್ ಅಧಿಕಾರಿಗಳ ಸಮನ್ವಯತೆಯ ಕೊರತೆಯಿಂದಾಗಿ ಹಾಗೆಯೇ ಕೆಲಸವಿಲ್ಲದೆ ರಾಯಚೂರಿಗೆ ಧಾವಿಸಿಧೆ.

ಮೊದಲೇ ಚೀಕಲಪರ್ವಿಗೆ ತೆರಳಿದ ತಹಶೀಲ್ದಾರ್ ಹಾಜೀಬಾಯಿ ಹೆಲಿಕ್ಯಾಪ್ಟರ್ ಬರುವಿಕೆಗಾಗಿ ಕಾದಿದ್ದರು. ಇತ್ತ ಹೆಲಿಕ್ಯಾಪ್ಟರ್ ಮಾನ್ವಿಗೆ ಆಗಮಿಸಿ ಲ್ಯಾಂಡ್ ಆಯಿತು. ಆದರೆ ಅದು ಎಲ್ಲಿ ತೆರಳಬೇಕೆಂಬ ಮಾಹಿತಿ ಯಿಲ್ಲದೆ, ಅಲ್ಲಿ ಯಾರು ಸರ್ಕಾರದ ಪ್ರತಿನಿಧಿಗಳಿಲ್ಲದೆ ಪೈಲಾ... ಅದನ್ನು ಮರಳಿ ರಾಯಚೂರು ಕಡೆಗೆ ಸಾಗಿಸಿ...

ಇಲ್ಲಿ ಚೀಕಲಪರ್ಟಿ ಜನರ ರಕ್ಷಣಾ ಕಾರ್ಯ ಹಾಗೆಯೇ ನಿಂತಿತು. ಪ್ರವಾಹದಿಂದ ರಕ್ಷಿತಗೊಂಡ ಸಂತ್ರಸ್ತರನ್ನು ಜನರೆ ಸಂತೈಸಿ ಅವರಿಗೆ ಆಹಾರವನ್ನು ನೀಡುತ್ತಿದ್ದರು. ಅದೇ ರೀತಿಯಾಗಿ 3-4 ದಿನಗಳಿಂದ ಪ್ರವಾಹದಲ್ಲಿ ಸಿಲುಕಿದ ಜನರನ್ನು ರಕ್ಷಿಸಲು ಸಾಧ್ಯವಾಗಿಲ್ಲ.

ಕಾಣೆಯಾದ ಉಸ್ತುವಾರಿ ಮಂತ್ರಿ: ಜಲ ಪ್ರವಾಹದಿಂದ ಸೂತಕದ ಮನೆಯಂತಾದ ಜಿಲ್ಲೆಯ ಸ್ಥಿತಿ-ಗತಿ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಬೇಕಾದ ಜಿಲ್ಲಾ ಉಸ್ತುವಾರಿ ಮಂತ್ರಿಯವರು ಆರಂಭದ ಮೂರ್‍ನಾಲ್ಕು ದಿನಗಳಲ್ಲಿ ಕಾಣೆಯಾಗಿರುವುದು ಜನರ ಆಕ್ರೋಶ ಮೂಡಿಸಿದೆ.

ಕೊನೆಯ ಕ್ಷಣದಲ್ಲಿ ಜಿಲ್ಲೆಗೆ ಆಗಮಿಸಿದ ಮಂತ್ರಿಗಳು, ಅಲ್ಲಲ್ಲಿ ಭೇಟಿ ನೀಡಿ ಅಧಿಕಾರಿಗಳ ಸಭೆ ನಡೆಸಿ ಕೈ ತೊಳೆದುಕೊಂಡಿರುವ ಸಚಿವರು ಜಿಲ್ಲೆಯತ್ತ ಹೆಚ್ಚಿನ ಆಸಕ್ತಿ ನೀಡದ ಸಚಿವರು ಒಲ್ಲ... ಗಂಡಿನೊಂದಿಗೆ ಸಂಸಾರ ಎಂಬಂ... ನಡೆದುಕೊಳ್ಳುತ್ತಿದ್ದಾರೆ.

48 ತಾಸು ಗಿಡದ ಮೇಲೆ ಕುಳಿತ ಜನ: ನಲವತ್ತೆಂಟು ತಾಸು ಗಿಡದ ಮೇಲೆ ಕುಳಿತು. ಪ್ರಾ... ರಕ್ಷಣೆಗೆ ಗೋಗರೆದರು ಕೇಳುವವರಿಲ್ಲ. ಕ್ಷಣ ಕ್ಷಣಕ್ಕೂ ನೀರಿನ ಮಟ್ಟ ಹೆಚ್ಚುತ್ತಲೇ ಹೋಯ್ತು. ಇಂತಹ ಸ್ಥಿತಿಯ... ಕಗ್ಗತ್ತಲೆಯಲ್ಲಿಯೇ ಕಾಲ ಕಳೆ... ಘಟನೆ ರಾಯಚೂರು ತಾಲ್ಲೂ... ಬುರ್ದಿಪಾಟ ಗ್ರಾಮದ... ನಡೆದಿದೆ.

ಪುಟ 13

ಗುಲ್ಬರ್ಗಾ

ತತ್ತರಿಸಿದ ಜನತೆ

ರಾಜ್ಯದಲ್ಲಿ ಬಾರಿ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದಾಗಲೂ ಸರ್ಕಾರ ಸಕಾಲದಲ್ಲಿ ಎಚ್ಚೆತ್ತುಕೊಳ್ಳಲಿಲ್ಲ. ಪ್ರವಾಹದಲ್ಲಿ ಮುಳುಗುವವರಿಗೆ ನೆರವಿನ ಹಸ್ತ ಚಾಚಲಿಲ್ಲ. ಅಗತ್ಯ ಎಚ್ಚರ ತುರ್ತು ಕ್ರಮ ವಹಿಸದಿದ್ದರೆ ಎಷ್ಟೋ ಜೀವಹಾನಿ ಆಸ್ತಿಪಾಸ್ತಿ ತಪ್ಪಿಸಬಹುದಿತ್ತು.

ಸತ್ಯಬೋಧ ಕಾಗಲಕರ

ವರುಣನ ಆರ್ಭಟಕ್ಕೆ ಗುಲ್ಬರ್ಗಾ ಜಿಲ್ಲೆ ತಲ್ಲಣಿಸಿ ಹೋಗಿದೆ. ಕೃಷ್ಣಾ, ಭೀಮಾ, ಬೆಣ್ಣೆತೋರಾ, ಮುಲ್ಲಾಮರಿ, ಕಾಗಿಣಾ, ಕಮಲಾವತಿ ನದಿಗಳು ಉಕ್ಕಿ ಹರಿಯುತ್ತಿವೆ. ಜಿಲ್ಲೆಯಾದ್ಯಂತ ನದಿ ತೀರದ 57 ಗ್ರಾಮಗಳು ಜಲಾವೃತಗೊಂಡಿವೆ. 20514 ಮನೆಗಳು ಪ್ರವಾಹಕ್ಕೆ ಆಹುತಿಯಾಗಿವೆ. 35 ಸಾವಿರ ಕುಟುಂಬಗಳು ಮನೆ -ಮಠ ಕಳೆದುಕೊಂಡು ಸಂತ್ರಸ್ಥರಾಗಿದ್ದಾರೆ. 21 ಜನರು ಜೀವ ಕಳೆದುಕೊಂಡಿದ್ದಾರೆ. 547 ಜಾನುವಾರುಗಳು ಕೊಚ್ಚಿ ಹೋಗಿವೆ.

ಹಳಸಲು ಅನ್ನ

ಪ್ರವಾಹ ಇಷ್ಟೆಲ್ಲಾ ಅವಾಂತರ ಸೃಷ್ಟಿಸುತ್ತಿದ್ದರೂ ಜಿಲ್ಲಾಡಳಿತ ಮಾತ್ರ ಘೋರನಿದ್ರೆಯಲ್ಲಿತ್ತು. ಈ ಘೋರ ನಿದ್ರೆಯಿಂದ ಬಡಿದೆಳಿಸಬೇಕಾಗಿದ್ದ ಜಿಲ್ಲಾ ಉಸ್ತುವಾರಿ ಸಚಿವರು ಸುತ್ತೂರಿನಲ್ಲಿ ಪಾಠ ಕೇಳುವಲ್ಲಿ ತಲ್ಲೀನರಾಗಿದ್ದರು. ಇಡೀ ಗುಲ್ಬರ್ಗಾ ಜಿಲ್ಲೆಯ ಸಂತ್ರಸ್ತರ ಗೋಳನ್ನು ಕೇಳುವವರೇ ಇಲ್ಲದಂತಾಗಿತ್ತು.

ಗುಲ್ಬರ್ಗಾದಲ್ಲಿ ಜಿಲ್ಲೆಯ 35 ಸಾವಿರ ಸಂತ್ರಸ್ತ ಕುಟುಂಬಗಳ ಒಂದೂವರೆ ಲಕ್ಷ ಜನರಿಗೆ 73 ಗಂಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಗಂಜಿ ಕೇಂದ್ರಗಳು ಅವ್ಯವಸ್ಥೆಯ ಆಗರವಾಗಿವೆ. ಗಂಜಿ ಕೇಂದ್ರದಲ್ಲಿನ ಸಂತ್ರಸ್ತರಿಗೆ ಬೆಳಗಿನ ಉಪಹಾರ, ಮಧ್ಯಾಹ್ನ-ಸಂಜೆ ಊಟ, ಹಾಸಿಗೆ -ಹೊದಿಕೆ, ಮಕ್ಕಳಿಗೆ ಹಾಲು-ಮೊಟ್ಟೆ, ಸ್ತ್ರೀ-ಪುರುಷರಿಗೆ ಪ್ರತ್ಯೇಕ ಶೌಚಾಲಯ, ಶುದ್ಧವಾದ ಕುಡಿಯುವ ನೀರು ವಿತರಿಸಬೇಕು. ವಿಪರ್ಯಾಸವೆಂದರೆ ಜೇವರ್ಗಿ



ಪದವಿಪೂರ್ವ ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಗಂಜಿ ಕೇಂದ್ರದಲ್ಲಿ ಹಳಸಲು ಅನ್ನ ನೀಡಲಾಗಿದೆ. ತಾಲ್ಲೂಕು ಕೇಂದ್ರದಲ್ಲೇ ಗಂಜಿ ಕೇಂದ್ರಗಳ ಈ ಸ್ಥಿತಿಯಾದರೆ ಹೋಬಳಿ-ಗ್ರಾಮ ಮಟ್ಟದಲ್ಲಿನ ಗಂಜಿ ಕೇಂದ್ರಗಳ ಗತಿಯೇನು? ಸುರಪೂರ ತಾಲ್ಲೂಕಿನ ತಿಂಥಣಿ, ಗುಲ್ಬರ್ಗಾ ತಾಲ್ಲೂಕಿನ ಔರಾದ (ಕೆ) ಹಾಗೂ ಇನ್ನಿತರ ಕಡೆ ಗಂಜಿ ಕೇಂದ್ರ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದಕ್ಕೆ ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದಾರೆ.

ಸುರಪೂರ, ಶಹಾಪೂರ, ಜೇವರ್ಗಿ, ಯಾದಗಿರಿ ನದಿ ತೀರದ ರೈತರ ಸ್ಥಿತಿ ಚಿಂತಾಜನಕವಾಗಿದೆ. ಒಮ್ಮೆ ಬರಗಾಲ ಬಂದೆರಗಿದರೆ ಮಗದೊಮ್ಮೆ ಅತಿವೃಷ್ಟಿ ಬಂದೆರಗಿದೆ. ಇದರಿಂದಾಗಿ ಹಿಂಗಾರು ಮುಂಗಾರು ಬೆಳೆಗಳು ಸರ್ವನಾಶವಾಗಿವೆ. ರೈತ ಜರ್ಜರಿತನಾಗಿದ್ದಾನೆ. ಪರಿಹಾರಕ್ಕಾಗಿ ರಾಜ್ಯ ಸರ್ಕಾರದೆಡೆಗೆ ಮುಖ ಮಾಡಿದ್ದಾನೆ. ಗಂಜಿ ಕೇಂದ್ರದಲ್ಲಿರುವ ಸಂತ್ರಸ್ತ ಕುಟುಂಬವೊಂದಕ್ಕೆ ಕೇವಲ 500 ರೂ. ಧನ ಸಹಾಯ ನೀಡುತ್ತಿರುವ ರಾಜ್ಯ ಸರ್ಕಾರದ ಕ್ರಮದಿಂದಾಗಿ ಪರಿಹಾರ ತಮಗೆ ಮರಿಚಿಕೆಯಾದೀತು ಎಂಬ ಆತಂಕದಲ್ಲಿ ರೈತನಿದ್ದಾನೆ.

ಕ್ಯಾಮರ ಮುಂದೆ ಕಂಬನಿ

ಆಳಂದ ತಾಲ್ಲೂಕಿನ ವಿ.ಕೆ.ಸಲಗರ, ಅಂಬಲಗಾ, ಸುರಪೂರ ತಾಲ್ಲೂಕಿನ ಮಾಲಗತ್ತಿ, ಜೇವರ್ಗಿ ತಾಲ್ಲೂಕಿ ಹೆಗ್ಗಿನಾಳ ಹಾಗೂ ಹಾಲಗಡ್ಲಾ, ಯಾದಗಿರಿ ತಾಲ್ಲೂಕಿನ ಕಡ್ಲೂರ ಗ್ರಾಮಗಳ ಕೆರೆಗಳು ಪ್ರವಾಹಕ್ಕೆ ಒಡೆದು ಹೊಲಗಳಿಗೆ ನುಗ್ಗಿ ಕೋಟ್ಯಾಂತರ ರೂ.ಗಳ ನಷ್ಟವಾಗಿದೆ. ಇದುವರೆಗೆ ರಾಜ್ಯ ಸರ್ಕಾರ ಪರಿಹಾರದ ಭರವಸೆ ನೀಡಿಲ್ಲ. ನದಿ ತೀರದ ಹೊಲಗಳಲ್ಲಿ ರೈತರು ಅಳವಡಿಸಿದ್ದ ಪಂಪ್‌ಸೆಟ್‌ಗಳು ಪ್ರವಾಹಕ್ಕೆ ಕೊಚ್ಚಿ ಹೋಗಿವೆ.

ಸದ್ಯ ಸಂತ್ರಸ್ತರ ಸ್ಥಿತಿ ಡೋಲಾಯಮಾನವಾಗಿದೆ. ಪ್ರವಾಹ ಇಳಿಮುಖವಾಗುತ್ತಿದ್ದು, ಪ್ರವಾಹ ಪೀಡಿತ ಗ್ರಾಮಗಳು ನರಕಸದೃಶವಾಗಿವೆ. ಅಸ್ಥಿಪಂಜರದಂತಾದ ಗ್ರಾಮಗಳನ್ನು ನೋಡಿ ಮಮ್ಮಲ ಮರಗುತ್ತಿದ್ದಾರೆ. ಮನೆಗಳು ಬಿದ್ದಿದ್ದು, ಧಾನ್ಯ,ಪಾತ್ರೆ, ಬಟ್ಟೆ-ಬರೆ ಪ್ರವಾಹಕ್ಕೆ ಹರಿದು ಹೋಗಿವೆ. ಸುಸ್ಥಿತಿಯಲ್ಲಿರುವ ಮನೆಗಳಲ್ಲಿ ಮೊಣಕಾಲಷ್ಟು ಕೆಸರು ತುಂಬಿದೆ. ಇಡೀ ಜಲಾವೃತ ಗ್ರಾಮಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಿದೆ. ಕುಡಿಯಲು ಶುದ್ಧವಾದ ನೀರಿಲ್ಲ. ಇಂಥ ದಯನೀಯ ಪರಿಸ್ಥಿತಿಯಲ್ಲಿ ಜಿಲ್ಲಾಡಳಿತ ಮಾತ್ರ ಸುರಪೂರ ಎಪಿಎಂಸಿಯಲ್ಲಿ ತೆರೆಯಲಾಗಿದ್ದ ಗಂಜಿ ಕೇಂದ್ರ ಸೆ.4 ರಂದೇ ಮುಚ್ಚಿದೆ. ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳ ಕ್ಯಾಮರಾ ಮುಂದೆ ಕಂಬನಿ ಮಿಡಿಯುವ ಸಚಿವರು-ಶಾಸಕರು- ಅಧಿಕಾರಿಗಳು ನಂತರ ಇತ್ತ ಹಾಯುವುದೇ ಇಲ್ಲವೆಂದು ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಭಿಕ್ಷೆಯಂತಹ ಪರಿಹಾರ

ಅಡುಗೆ ಮಾಡಲು



ಪಾತ್ರೆಗಳಿಲ್ಲ, ಸೌದೆಗಳಿಲ್ಲ. ಧಾನ್ಯಗಳಂತೂ ಇಲ್ಲವೇ ಇಲ್ಲ. ಇಂತಹದರಲ್ಲಿ 500 ರೂ. ಪರಿಹಾರ ನೀಡುವ ಜಿಲ್ಲಾಡಳಿತ ಕ್ರಮ ಖಂಡನೀಯವಾಗಿದೆ ಎಂದು ತಾಲ್ಲೂಕು ಪಂಚಾಯತ್ ಸದಸ್ಯ ಶರಣಬಸಪ್ಪ ಮಮಶೆಟ್ಟಿ ಆಕ್ರೋಶ ವ್ಯಕ್ತಪಡಿಸುತ್ತಾರೆ. ಸಂತ್ರಸ್ತರಿಗೆ ಪಡಿತರ ವಿತರಣಾ ವ್ಯವಸ್ಥೆ ಮೂಕ ಸೀಮೆಎಣ್ಣೆ, ಬಟ್ಟೆ, ಹೊದಿಕೆ-ಹಾಸಿಗೆ ಅಕ್ಕಿ ಗೋಧಿ ಜೋಳ ಬೇಳೆ ಆರು ತಿಂಗಳಿಗೆ ಆಗುವಷ್ಟು ವಿತರಿಸಬೇಕೆಂದು ಆಗ್ರಹಿಸುತ್ತಾರೆ.



ನಿರಾಶ್ರಿತರಿಗೆ ಆಶ್ರಯ ಮನೆ ಕಟ್ಟಿಸಿಕೊಟ್ಟರೆ ಮುಂಬರುವ ನೆರೆಗೆ ಮತ್ತೇ ಜಲಸಮಾಧಿಯಾಗುತ್ತದೆ. ಅದಕ್ಕಾಗಿ ಆಶ್ರಯ ಮನೆ ಬದಲಾಗಿ ಪ್ರವಾಹ ತಡೆದುಕೊಳ್ಳುವ ಸುಸಜ್ಜಿತ ಮನೆ ಕಟ್ಟಿಸಿಕೊಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಮಹಿಬೂಬಪಾ ಕುರಿಕೋಟಾ ಆಗ್ರಹಿಸಿದ್ದಾರೆ.

ಸಾಕಷ್ಟು ಹಾನಿ ತಡೆಯಬಹುದಿತ್ತು

ಕುಂಭದ್ರೋಣ ಮಳೆ ಹಾಗೂ ಮಹಾರಾಷ್ಟ್ರದಲ್ಲಿ ಕೃಷ್ಣಾ ನದಿಗೆ ಕಟ್ಟಲಾಗಿರುವ ಕೊಯ್ನಾ ಅಣೆಕಟ್ಟಿನಿಂದ ಬಿಟ್ಟ ನೀರು ಗುಲ್ಬರ್ಗಾ ಜಿಲ್ಲೆ ತಲುಪಲು 4 ದಿನ ಬೇಕು. ಅಷ್ಟು ಹೊತ್ತಿಗೆ ಜಿಲ್ಲಾಡಳಿತ ಕೃಷ್ಣಾ ನದಿ ತೀರದ ಗ್ರಾಮಸ್ಥರಿಗೆ ಸುದ್ದಿ ಮುಟ್ಟಿಸಿ- ಡಂಗೂರ ಹೊಡಿಸಿ ಜಾಗೃತರನ್ನಾಗಿ ಮಾಡಿದ್ದರೆ ಹೆಚ್ಚಿನ ಅನಾಹುತ ತಪ್ಪಿಸಬಹುದಾಗಿತ್ತು. ನಡುಗಡ್ಡೆಯಲ್ಲಿದ್ದವರು ಸುರಕ್ಷಿತ ಸ್ಥಳಕ್ಕೆ ಬರುತ್ತಿದ್ದರು. ಜಿಲ್ಲಾಡಳಿತದ ತಪ್ಪನ್ನು ಜಿಲ್ಲಾ ಉಸ್ತುವಾರಿ ಸಚಿವ ಲಕ್ಷ್ಮಣ ಸವದಿ ಒಪ್ಪಿಕೊಳ್ಳಬೇಕಾಗಿ ಬಂತು. ಒಪ್ಪಿಕೊಂಡರು.

ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪನವರು ಹೆಲಿಕ್ಯಾಪ್ಟರ್ ಲ್ಯಾಂಡ್ ಮಾಡದೆ ಜಿಲ್ಲೆಯ ವೈಮಾನಿಕ ಸಮೀಕ್ಷೆ ನಡೆಸಿರುವುದು, ಪ್ರತಿದಿನ ನೂರು-ಇನ್ನೂರು ಕೋಟಿ ರೂ. ಬಿಡುಗಡೆ ಮಾಡಿದ್ದೇನೆ ಎಂಬ ಹೇಳಿಕೆಯಿಂದ ಸಂತ್ರಸ್ತರು ರೋಸಿ ಹೋಗಿದ್ದಾರೆ. ಕೋಟಿಗಟ್ಟಲೇ ಹಣ ಎಲ್ಲಿದೆ ಎಂದು ಪ್ರಶ್ನಿಸತೊಡಗಿದ್ದಾರೆ. ಗುಲ್ಬರ್ಗಾ ಪ್ರಾದೇಶಿಕ ಆಯುಕ್ತರು ಗಂಜಿ ಕೇಂದ್ರದಲ್ಲಿರುವ ಸಂತ್ರಸ್ತ ಕುಟುಂಬವೊಂದಕ್ಕೆ ಕೇವಲ ರೂ.500 ಪರಿಹಾರ ಧನ ನೀಡಲು ಆದೇಶಿಸಿರುವುದರಿಂದ ಯಡಿಯೂರಪ್ಪ ಸರ್ಕಾರದ ಬಣ್ಣ ಬಯಲಾಗಿದೆ. ಗುಲ್ಬರ್ಗಾ ಜಿಲ್ಲೆಯಾದ್ಯಂತ ಪ್ರವಾಹ ಮರಣಮೃದಂಗ ಬಾರಿಸುತ್ತಿದ್ದರೆ ಅತ್ತ ದಾಬಸಪೇಟೆಯಲ್ಲಿ ಮುಖ್ಯಮಂತ್ರಿಗಳ ಜೊತೆಗೂಡಿ ಸಚಿವ ರೇವು ನಾಯಕ ಬೆಳಮಗಿ, ಡಾ:ಡಿ.ಎಂ. ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಶೀಲ ನಮೋಶಿ ಸನ್ಮಾನ ಸ್ವೀಕರಿಸುತ್ತಿದ್ದುದ್ದು ದುರ್ದೈವದ ಸಂಗತಿ.

ಇದುವರೆಗೂ ಜಿಲ್ಲೆಯಾದ್ಯಂತ ಪ್ರವಾಹದಿಂದ ಎಷ್ಟು ಹಾನಿಗೊಳಗಾಗಿದೆ ಎಂಬ ಮಾಹಿತಿ ಕಲೆ ಹಾಕುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ. ಒಂದು ಅಂದಾಜಿನ ಪ್ರಕಾರ 4 ಸಾವಿರ ಕೋಟಿ ರೂ.ಗೂ ಅಧಿಕ ಹಾನಿ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಜನತೆಯ ಬದುಕನ್ನು ಮತ್ತೆ ಕಟ್ಟಿಕೊಡುವುದಕ್ಕೆ ಕೇಂದ್ರ, ರಾಜ್ಯ ಸರ್ಕಾರಗಳ ಹಾಗೂ ಜನತೆಯ ದೊಡ್ಡ ಪ್ರಮಾಣದ ಬೆಂಬಲ ಬೇಕಾಗಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ


ಆರೆಸ್ಸೆಸ್‌ನ 'ಭಾರತ - ಭಾರತಿ' ಪುಸ್ತಕ ಸಂಪದ

ದೇಶಪ್ರೇಮ ಎಂದರೆ ಮುಸ್ಲಿಂ ದ್ವೇಷವೇ?

— ಆರ್.ರಾಮಕೃಷ್ಣ —

ಇಲ್ಲಿ ಮುಸ್ಲಿಂ ದ್ವೇಷವನ್ನೇ ದೇಶಪ್ರೇಮ ಎಂದು ಬಿಂಬಿಸಲಾಗಿದೆ. ಮುಸ್ಲಿಂ ದ್ವೇಷದಿಂದ ಕುರುಡಾಗಿ ಸಂಘ ಪರಿವಾರ ಹೇಗೆ ಸ್ವಾತಂತ್ರ್ಯ ಹೋರಾಟದಿಂದ ವಿಮುಖವಾಯಿತು ಎಂಬುದು ಈ ಪುಸ್ತಕಗಳಲ್ಲೇ ಸಾಕ್ಷಿ ಇದೆ.

ಸದಾಕಾಲ ದೇಶ ಪ್ರೇಮ ದೇಶಭಕ್ತಿ, ತ್ಯಾಗ ಬಲಿದಾನ ಎಂದು ಊಳಿಡುವ ಸದಾ ಕಾಲ ಈ ಬಗ್ಗೆಯೇತಗಡು ಬಡಿಯುವ ಆರೆಸ್ಸೆಸ್ ದೇಶದ ಸುದೀರ್ಘ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರವೇನು? ಅದು ಸ್ವಾತಂತ್ರ್ಯ ಹೋರಾಟಗಾರರ ಮಹಾನ್ ಆಶಯಗಳಿಗೆ ದ್ರೋಹ ಬಗೆದು ಸ್ವಾತಂತ್ರ್ಯ ಚಳುವಳಿಗೆ ಬೆನ್ನು ತಿರುಗಿಸಿ ನಿಂತಿತ್ತು. ಇನ್ನೂ ಸರಿಯಾಗಿ ಹೇಳಬೇಕೆಂದರೆ ಸಾಮ್ರಾಜ್ಯಶಾಹಿ ಸುಲಿಗೆ ಕೋರ ಬ್ರಿಟಿಷರ 'ಏಜೆಂಟ' ರಂತೆ ವರ್ತಿಸಿದ ಆರೆಸ್ಸೆಸ್‌ಗೆ ಸಂಘ ಪರಿವಾರಕ್ಕೆ ಉದಾಹರಣೆಗಾಗಿ ತೋರಿಸಲು ಕೂಡ ಬ್ರಿಟಿಷ್ ಆಡಳಿತದೆದುರು ಎದೆಕೊಟ್ಟು ರಾಜಿರಹಿತ ಹೋರಾಟ ನಡೆಸಿದ ಒಬ್ಬ ಹೋರಾಟಗಾರರು ಇಲ್ಲ. ಇದನ್ನು ಸಿದ್ಧ ಮಾಡಲು ಯಾವ ಚಾರಿತ್ರಿಕ ದಾಖಲೆ ಬೇಕಿಲ್ಲ. ಸ್ವತಃ ಆರೆಸ್ಸೆಸ್‌ನ ನಿಯಂತ್ರಣ 'ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ' ಹೊರ ತಂದಿರುವ ಸಾವರ್‌ಕರ್, ಆರೆಸ್ಸೆಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡ್ಗೆವಾರ್, ಮಾಧವರಾವ್ ಸದಾಶಿವ ಗೋಳ್ವಾಲ್ಕರ್ ಅವರ ಕುರಿತ ಪುಸ್ತಕಗಳೇ ಇದಕ್ಕೆ ಸಾಕ್ಷಿ ಆಧಾರ. ಇಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಎಂದಾಗ ಅದು ಇಲ್ಲಿ ಬಹುತೇಕ 20ನೇ ಶತಮಾನದ ಮೊದಲ ಭಾಗ ಅಂದರೆ ಹೆಚ್ಚೆಂದರೆ 100 ವರ್ಷಗಳ ಇತಿಹಾಸ. ಇಷ್ಟು ಹತ್ತಿರದ ಇತಿಹಾಸದ ಕುರಿತು ಎಷ್ಟು ತಾನೇ ಸುಳ್ಳು ಹೇಳಲು ಸಾಧ್ಯ? ಅದಕ್ಕೂ ಒಂದು ಮಿತಿ ಇದೆ ಅಲ್ಲವೇ?



ಮಹಾತ್ಮ ಗಾಂಧಿ ಕೊಲೆ ಆರೋಪಿ

ಸಂಘ ಪರಿವಾರದ 'ಆರಾಧ್ಯ ದೈವ'ಗಳಾದ ಈ ಮುಖಂಡರ ಜೀವನದಲ್ಲಿ ಸುಳ್ಳೇ ಸುಳ್ಳೇ ಸೇರಿಸಲಾದ ದೇಶಪ್ರೇಮ, ರಾಷ್ಟ್ರ ಭಕ್ತಿ ಎಂಬ ಮಾತಿನ ತೋರಣವನ್ನು ಕಿತ್ತು ಎಸೆದರೆ ಇವರ ಜೀವನದಲ್ಲಿ ಉಳಿಯುವುದು ಮುಸ್ಲಿಂ ದ್ವೇಷ, ಕೋಮುವಾದದ ಚಟುವಟಿಕೆಗಳು ಮಾತ್ರ. ವಾಸ್ತವವಾಗಿ ಅದೊಂದೆ ಈ 'ಮಹಾಪುರುಷ' ರ ಜೀವನದ ಸಾರಾಂಶ.


ಸರಿಸಾಟಿಯೇ ಇಲ್ಲದ ಮಹಾನ್ ದೇಶಭಕ್ತ ಎನ್ನಲಾಗುವ ಗುರೂಜಿ ಅಂದರೆ ಗೋಲ್ವಾಲ್ಕರ್ ಜೀವನವನ್ನೇ ನೋಡೋಣ. ಇದೇ ಪುಸ್ತಕದ ಪ್ರಕಾರ 1906ರಲ್ಲಿ ಹುಟ್ಟಿ 1973ರಲ್ಲಿ ತೀರಿಕೊಂಡ ಮಾಧವರಾವ್ ಸದಾಶಿವ ಗೋಲ್ವಾಲ್ಕರ್ 67 ವರ್ಷಗಳ ಜೀವನದಲ್ಲಿ ಗುರೂಜಿಯವರು ಪೋಲೀಸ್ ಬಂಧನಕ್ಕೆ ಗುರಿಯಾದದ್ದು ಕೇವಲ 2 ಬಾರಿ. ಆ ಎರಡೂ ಬಾರಿಯೂ ಕೂಡ ಅವರನ್ನು ಬಂಧಿಸಿದ್ದು, ಮಹಾತ್ಮಗಾಂಧಿಯವರ ಹತ್ಯೆಯ ಆರೋಪಿಯಾಗಿ. ಸ್ವತಂತ್ರ ಭಾರತದ ಸರ್ಕಾರ. ಬ್ರಿಟಿಷ್‌ರ ಸರ್ಕಾರವಲ್ಲ. ಇವರ ಜೀವಮಾನದಲ್ಲೇ ಎಲ್ಲಿಯೂ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಕುರಿತು ದಾಖಲೆ ಸ್ವತಃ ಈ ಪುಸ್ತಕದಲ್ಲೂ ಇಲ್ಲ.

1934 ರಲ್ಲಿ ಆರೆಸ್ಸೆಸ್‌ನ ಕೇಂದ್ರೀಯ ಶಾಖೆಯ ಕಾರ್ಯನಿರ್ವಾಹಕರಾದ ಈ ಗುರೂಜಿ 1940 ರಲ್ಲಿ ಹೆಡ್ಗೆವಾರ್ ನಿಧನಾನಂತರ ಆರೆಸ್ಸೆಸ್‌ನ ಸರ ಸಂಘ ಚಾಲಕರೇ ಆಗುತ್ತಾರೆ. ಈತ ಸ್ವಾತಂತ್ರ್ಯಕ್ಕಾಗಿ 1947ರವರೆಗೆ ಒಂದೇ ಒಂದು ಲಾಠಿ ಏಟು ತಿನ್ನಲಿಲ್ಲ. ಒಂದು ಪೋಲೀಸ್ ಮೊಕದ್ದಮೆಯ ದಾಖಲೆ ಇಲ್ಲಿ ಸಿಗುವುದಿಲ್ಲ. ಜೈಲು ವಾಸ, ಸ್ವಾತಂತ್ರ್ಯಕ್ಕಾಗಿ ಭೂಗತ ಜೀವನದ ಪ್ರಶ್ನೆಯಂತೂ ಇಲ್ಲವೇ ಇಲ್ಲ. ಇದು ಯಾವ ಪರಿಯ ಸ್ವಾತಂತ್ರ್ಯ ಹೋರಾಟವೋ?! ಈತ ಅದ್ಯಾವ ಪರಿ ದೇಶಭಕ್ತನೋ?

'ಅಂತಿಮ ತೀರ್ಮಾನ' ಮುಸ್ಲಿಂ ದ್ವೇಷ

ಇನ್ನೂ ಆರೆಸ್ಸೆಸ್ ಸಂಸ್ಥಾಪಕ ಹೆಡ್ಗೆವಾರರ ಜೀವನ ಪುಟ ತಿರುವಿದರೆ ಅವರು ಕಾಂಗ್ರೆಸ್ ಕಾರ್ಯಕರ್ತರಾಗಿ ಕೆಲವೊಂದು ಸ್ವಾತಂತ್ರ್ಯ ಹೋರಾಟದ ಚಟುವಟಿಕೆಯಲ್ಲಿ ಪಾಲ್ಗೊಂಡರೆಂಬ ಉಲ್ಲೇಖಗಳು ಇಲ್ಲಿವೆ. ಆದರೆ ಇವರ ಎದೆಯಲ್ಲಿ ಕುದಿಯುತ್ತಿದ್ದುದು ಮುಸ್ಲಿಂ ದ್ವೇಷ, ಹಿಂದುತ್ವದ ಕುದಿ.

1925ರಲ್ಲಿ ಹೆಡ್ಗೆವಾರ್ ಮಹಾರಾಷ್ಟ್ರದ ನಾಗಪುರದಲ್ಲಿ ಆರೆಸ್ಸೆಸ್ ಅನ್ನು ಆರಂಭಿಸಿದರು. ಅದಕ್ಕೆ ಈ ಪುಸ್ತಕ ಕೊಡುತ್ತಿರುವ ಕಾರಣ ಆರೆಸ್ಸೆಸ್‌ನ ದೇಶ ದ್ರೋಹಕ್ಕೆ ಜೀವಂತ ಉದಾಹರಣೆಯಾಗಿದೆ. ಸ್ವಾತಂತ್ರ್ಯ ಹೋರಾಟ ಬೆಳೆದು ಬಂದಂತೆ "ಬ್ರಿಟಿಷರು ಭಾರತೀಯರು ಹಿಂದೂ ಮುಸ್ಲಿಂ ಎಂದು ವಿಭಜಿಸುವ ತಂತ್ರ ಹೂಡಿದರು. ಈ ಎಲ್ಲವನ್ನು ಗಮನಿಸಿದ ಡಾಕ್ಟರ್ (ಹೆಡ್ಗೆವಾರ್) ಒಂದು ಅಂತಿಮ ತೀರ್ಮಾನಕ್ಕೆ ಬಂದರು.....



ಬ್ರಿಟಿಷರ ಅಧಿಪತ್ಯದ ಮೊಗವನ್ನು ಕಿತ್ತೊಗೆಯಬೇಕಾದರೆ ನಾವು ಮುಖ್ಯವಾಗಿ ಹಿಂದೂಗಳ ಮೇಲೆ ವಿಶ್ವಾಸವಿಡಬೇಕು. ನಾವು ಅವರಲ್ಲಿ ದೇಶ ಪ್ರೇಮ ಶಿಸ್ತು, ಧೈರ್ಯವನ್ನು ತುಂಬಬೇಕು. ನಂತರ ಮಾತ್ರವೇ ಮುಸ್ಲಿಮರು ತಮ್ಮ ಪ್ರತ್ಯೇಕತೆಯ ಪ್ರವೃತ್ತಿಯನ್ನು ಬಿಡುತ್ತಾರೆ." ಆಹಾ ಎಂತಹ ಅದ್ಭುತ ತೀರ್ಮಾನ. ಬ್ರಿಟಿಷರೂ ಹಿಂದೂ-ಮುಸ್ಲಿಮರನ್ನು ವಿಭಜಿಸಲು ಹೊರಟಿದ್ದಾರೆ. ಅದನ್ನು ಗಮನಿಸಿದ ಹೆಡ್ಗೆವಾರ್‌ರವರು ಹಿಂದೂಗಳನ್ನು ಸಂಘಟಿಸಿ ಅವರಲ್ಲಿ ಧೈರ್ಯ, ಸಾಹಸ ತುಂಬಿ ಆ ಮೂಲಕ ಮುಸ್ಲಿಮರನ್ನು ಬಗ್ಗಿಸಲು ಹೊರಟಿದ್ದಾರೆ. ಅಂದರೆ ಹೆಡ್ಗೆವಾರರೂ ಹಿಂದೂ ಮುಸ್ಲಿಮರನ್ನು ವಿಭಜಿಸಲು ಹೊರಟಿದ್ದಾರೆ. ಇದೇ ಅಲ್ಲವೇ ಬ್ರಿಟಿಷರಿಗೆ ಬೇಕಾಗಿದ್ದು.



ಆರೆಸ್ಸೆಸ್‌ನ ಈ ಪುಸ್ತಕವೇ ಸಾರುವಂತೆ ಇದೇ ಆರೆಸ್ಸೆಸ್‌ನ ಸ್ಥಾಪನೆಯ ಹಿನ್ನೆಲೆ. ಹಿಂದೂ-ಮುಸ್ಲಿಂ ವಿಭಜನೆ ಸೃಷ್ಟಿಸುವ ಬ್ರಿಟಿಷ್ ತಂತ್ರಗಾರಿಕೆಗೆ ಪೂರಕವಾಗೇ ಸ್ಥಾಪಿತವಾಗಿದ್ದು ಆರೆಸ್ಸೆಸ್. ಹೆಡ್ಗೆವಾರ್ ನಿಜವಾದ ದೇಶಪ್ರೇಮಿಯಾಗಿದ್ದರೆ, ಹಿಂದೂ-ಮುಸ್ಲಿಂ ಐಕ್ಯತೆಯನ್ನು ಕಾಪಾಡುವ ಮೂಲಕ ಬ್ರಿಟಿಷರ ತಂತ್ರವನ್ನು ವಿಫಗೊಳಿಸಲು ಹೋರಾಡಬೇಕಿತ್ತು. ಡಾ: ಹೆಡ್ಗೆವಾರ್ ಮುಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ದಾಖಲೆ ಈ ಪುಸ್ತಕದಲ್ಲಿ ಮುಂದೆ ಬರುವುದೇ ಒಂದೇ ಬಾರಿ. ಅದು 1930 ರ ಅಸಹಕಾರ ಚಳುವಳಿಯಲ್ಲಿ. ಹೆಡ್ಗೆವಾರ್ ಉದ್ದೇಶವೇನು?

ಇದೇ ಪುಸ್ತಕವೇ ಅದನ್ನೂ ಹೇಳುತ್ತದೆ. ಅವರು ಜೈಲು ಪಾಲಾಗಿದ್ದು, ಜೈಲಿನಲ್ಲಿ ಸಿಗುವ ದೇಶದ ಬೇರೆ ಬೇರೆ ಭಾಗಗಳ ಸ್ವಾತಂತ್ರ್ಯ ಹೋರಾಟಗಾರರಿಗೆ ಹಿಂದುತ್ವದ ಪಾಠ ಹೇಳಲು!!

1933 ರಲ್ಲಿ ಆರೆಸ್ಸೆಸ್ ಪರವಾಗಿ ಸ್ವತಃ ಹೆಡ್ಗೆವಾರ್ ಘೋಷಿಸುತ್ತಾರೆ. "ಸಂಘವು ರಾಜಕೀಯದಿಂದ ದೂರವಿದೆ. ನಮ್ಮ ಸಂಘಟನೆ ಯಾರ ವಿರುದ್ಧವೂ ಇಲ್ಲ (ಬ್ರಿಟಿಷರ ವಿರುದ್ಧವೂ ಇಲ್ಲ!?) ಯಾರ ಬಗೆಗೂ ವೈರುತ್ವವಿಲ್ಲದೆ ಸಂಘವು ಹಿಂದೂ ಸಮಾಜವನ್ನು ಬಲಿಷ್ಠಗೊಳಿಸಲು ಸಮರ್ಥಗೊಳಿಸಲು ಪ್ರಯತ್ನಿಸುತ್ತಿದೆ."

ಅಂದರೆ ಸ್ವಾತಂತ್ರ್ಯ ಹೋರಾಟ, ಚಳುವಳಿ ಯಾವುದೂ ಇಲ್ಲ. ಎಲ್ಲದಕ್ಕೂ ಎಳ್ಳು, ನೀರು.

ರಣ ಹೇಡಿಯೇ ರಾಷ್ಟ್ರಭಕ್ತ

ಆರೆಸ್ಸೆಸ್ ಮಹಾನ್ ರಾಷ್ಟ್ರಭಕ್ತ, ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಎಂದು ಕೊಂಡಾಡುವವರಲ್ಲಿ ವಿನಾಯಕ ದಾಮೋದರ್ ಸಾರ್ವಕರ್ ಪ್ರಮುಖರು. ತಿಪ್ಪೆಯನ್ನು ಎಷ್ಟೆಲ್ಲಾ ಸಾರಿಸಿದರೂ ಮತ್ತೆ ಹೊಲಸು ಹೊರಗೆ ಕಾಣುವಂತೆ ಈ ರಣಹೇಡಿಯ ಕುರಿತು ಪುಸ್ತಕವು ಎಷ್ಟೇ ಹಾಡಿ ಹೊಗಳಿ ಎಷ್ಟೋ ವಿಷಯ ತೇಲಿಸಿ ಮರೆ ಮಾಚಲು ಯತ್ನಿಸಿದರೂ ಅದು ಸಾಧ್ಯವಾಗದೇ ಈ ಪುಸ್ತಕವೇ ಬ್ರಿಟಿಷರಿಗೆ ಶರಣಾದ ಈ ವೀರನ ಬದುಕನ್ನು ತೆರೆದಿಡುತ್ತದೆ. ಮುದ್ರಿಸಿದ್ದನ್ನೆಲ್ಲಾ ಮುಗ್ಧವಾಗಿ ಓದಿಕೊಂಡು ಹೋಗದೇ ಕೊಂಚ ನಿಂತು ಪ್ರಶ್ನಿಸಿಕೊಳ್ಳುವ ವ್ಯವಧಾನವಿದ್ದರೆ ಸಾಕು(ಶಾಲಾ ಮಕ್ಕಳಿಂದ ಈ ಮಟ್ಟದ ವಿಶ್ಲೇಷಣೆ, ಚಿಂತನೆ ನಿರೀಕ್ಷಿಸುವುದು ಕಷ್ಟವಾಗಬಹುದು)

ಸಾವರ್‌ಕರ್ ಯೌವ್ವನದಲ್ಲಿ ತಮ್ಮ ಬ್ರಿಟಿಷ್ ವಿರೋಧಿ ಚಟುವಟಿಕೆ ಬರಹಗಳ ಕಾರಣದಿಂದ ಶಿಕ್ಷೆಗೆ ಗುರಿಯಾಗಿ ಅಂಡಮಾನ್ ದ್ವೀಪದ ಜೈಲಿನಲ್ಲಿದ್ದರು. ಅವರು ಒಮ್ಮೆ ಚಲಿಸುವ ಹಡಗಿನಿಂದ ಶೌಚಾಲಯದ ಕಿಂಡಿಯಿಂದ ಧುಮುಕಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ್ದರಂತೆ. ಇವೆಲ್ಲಾ ಸಾಕಷ್ಟು ಪ್ರಚಾರ ಪಡೆದಿರುವ ವಿಚಾರ. ಸಾವರ್‌ಕರ್ ವಿಚಾರದಲ್ಲಿ ಹೆಚ್ಚು ಪ್ರಚಾರವಾಗದೇ ಮರೆ ಮಾಚಲಾದ ಎಷ್ಟೋ ಕೃತ್ಯಗಳಿವೆ. ಏನು ಆಧಾರ ಈ ಮಾತಿಗೆ. ಇದೇ ಆರೆಸ್ಸೆಸ್‌ನ ಪುಸ್ತಕಗಳು!! .

1948 ರ ಮಹಾತ್ಮಗಾಂಧಿ ಕೊಲೆಯ ಪಿತೂರಿ ಹೆಣೆದ ಪ್ರಧಾನ ಆರೋಪಿ ವಿ.ಡಿ.ಸಾವರ್ಕರ್. ಸಾಕ್ಷ್ಯಾಧಾರಗಳ ಕೊರತೆಯಿಂದಾಗಿಯಷ್ಟೇ ಸಾವರ್‌ಕರ್ ಈ ಪ್ರಕರಣದಲ್ಲಿ ಶಿಕ್ಷೆಯಿಂದ ಬಚಾವಾದರು. ಪುಸ್ತಕವು ಇದನ್ನು ಸುಳ್ಳು ಆರೋಪ ಎನ್ನುತ್ತದೆ.

ಇದಕ್ಕೆ ಮುಂಚೆ ಆಜನ್ಮ ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾದ ಸಾವರ್‌ಕರ್ ಜೈಲಿನಿಂದ ಹೊರಗೆ ಬಂದದ್ದು ಹೇಗೆ? 'ಸಾವರ್ಕರ್‌ರ ತೀವ್ರ ಅನಾರೋಗ್ಯದಿಂದ ಭಾರತದಲ್ಲೆಲ್ಲಾ ಜನಕ್ಕೆ ಕಳವಳವಾಯಿತು. ಎಲ್ಲೆಡೆಯಿಂದಲೂ ಸಾರ್ವರ್‌ಕರ್ ಬಿಡುಗಡೆಗೆ ಒತ್ತಾಯ ಬಂದಿತು' ಎನ್ನುತ್ತದೆ ಪುಸ್ತಕ. ವಾಸ್ತವವೆಂದರೆ ಈ ಒತ್ತಾಯ ಬಂದದ್ದು ಸ್ವತಃ ಸಾವರ್‌ಕರ್‌ರಿಂದ. ಜೈಲುವಾಸದ ಅವಧಿಯಲ್ಲಿ ಬ್ರಿಟಿಷರಿಗೆ ಸಾವರ್‌ಕರ್ ಮೂರು ಬಾರಿ ಪತ್ರ ಬರೆದು ತಮ್ಮನ್ನು ಬಿಡುಗಡೆ ಮಾಡಿದರೆ

ಪುಟ 14ಕೆ

ಚೀನಾ ದೇಶ ಬಂಡವಾಳಶಾಹಿ ಹಾದಿ ಹಿಡಿದಿದೆಯೇ?

ಚೀನಾದ ನವ ಪ್ರಜಾಪ್ರಭುತ್ವ ಕ್ರಾಂತಿಗೆ 60 ವರ್ಷ ತುಂಬಿದ ಈ ಸಂದರ್ಭದಲ್ಲಿ ಚೀನಾದ ಕುರಿತು ಭಾರತದಲ್ಲೂ, ಜಗತ್ತಿನಲ್ಲೂ ವ್ಯಾಪಕವಾದ ಚರ್ಚೆಗಳು ನಡೆಯುತ್ತಿವೆ.

ಚೀನಾ ಜಗತ್ತಿನ ಒಂದು ಬೃಹತ್ ಆರ್ಥಿಕ, ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿದೆ. ಆರೋಗ್ಯ, ಶಿಕ್ಷಣ, ವಿಜ್ಞಾನ ತಂತ್ರಜ್ಞಾನ, ವಾಣಿಜ್ಯ, ಕ್ರೀಡೆ, ಇತ್ಯಾದಿ ಕ್ಷೇತ್ರಗಳಲ್ಲಿ ಚೀನಾ ಸಾಧಿಸುತ್ತಿರುವ ತೋರುತ್ತಿರುವ ಪ್ರಗತಿ ಇಡೀ ಜಗತ್ತಿನ ಗಮನ ಸೆಳೆದಿದೆ.

ಚೀನಾ ದೇಶ. ಜನರ ಕೊಳ್ಳುವ ಶಕ್ತಿಯ ದೃಷ್ಟಿಯಿಂದ ಇಂದು ಜಗತ್ತಿನ ಎರಡನೇ ಅತಿ ದೊಡ್ಡ ಅರ್ಥಿಕತೆಯಾಗಿ ಹೊರ ಹೊಮ್ಮಿದೆ. ಕಳೆದ ಒಲಿಂಪಿಕ್ಸ್‌ನಲ್ಲಿ ಚೀನಾ ಅಮೇರಿಕಾವನ್ನು ಹಿಂದಿಕ್ಕಿ ಪ್ರಥಮ ಸ್ಥಾನಕ್ಕೇರಿತು.

ಚೀನಾವು ಇಷ್ಟರಲ್ಲೇ ತನ್ನ ಗಗನ ಯಾತ್ರಿಗಳನ್ನು ಚಂದ್ರನ ಅಂಗಳದಲ್ಲಿ ಇಳಿಸುವ ಸಿದ್ಧತೆಯಲ್ಲಿದೆ. ಇಡೀ ಜಗತ್ತೇ ಇತ್ತೀಚಿನ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವಾಗಲೂ ಚೀನಾ ಬಿಕ್ಕಟ್ಟನ್ನು ಯಶಸ್ವಿಯಾಗಿ ಎದುರಿಸುವ ಲಕ್ಷಣ ತೋರುತ್ತಿದ್ದು, ಅದು 2009 ರಲ್ಲಿ ವಾರ್ಷಿಕ ಶೇ. 7.7 ರ ಬೆಳವಣಿಗೆ ದಾಖಲಿಸಿದೆ.

ಇಷ್ಟೆಲ್ಲಾ ಅಗಾಧ ಪ್ರಗತಿ ಮತ್ತು ಬೆಳವಣಿಗೆಯ ಮೂಲ ಕಾರಣ, ಮೂಲ ಆಧಾರ ಯಾವುದು? ಈ ಕುರಿತು ಮಾತ್ರ ಜಗತ್ತಿನಾದ್ಯಂತ ವ್ಯಾಪಕ ತಪ್ಪು ಕಲ್ಪನೆಗಳು ಹರಡಿವೆ. ಉದ್ದೇಶ ಪೂರ್ವಕವಾದ ಅಪಪ್ರಚಾರವೂ ನಡೆದಿದೆ.


ಮೊದಲನೆಯದಾಗಿ ಚೀನಾ ದೇಶ ತನ್ನ ಮಾರ್ಕ್ಸ್‌ವಾದಿ, ಲೆನಿನ್‌ವಾದಿ, ಮಾವೋವಾದಿ ದಾರಿಯನ್ನು ಹಾಗೂ ಸಮಾಜವಾದಿ ನೀತಿಯನ್ನು ಕೈಬಿಟ್ಟು ಬಂಡವಾಳಶಾಹಿ ಪಥಕ್ಕೆ ಹೊರಳಿದ್ದರಿಂದ ಇದೇ ಸಾಧ್ಯವಾಗಿದೆ, ಉದಾರೀಕರಣ ಮತ್ತು ಜಾಗತೀಕರಣದ ನೀತಿಯನ್ನು ಅಪ್ಪಿಕೊಂಡು ವಿದೇಶಿ ಬಂಡವಾಳವನ್ನು ಆಹ್ವಾನಿಸಿರುವುದರಿಂದ ಇಂತಹ ಪ್ರಗತಿ ಸಾಧ್ಯವಾಗುತ್ತಿದೆ ಎಂಬುದು ಇಂತಹ ಒಂದು ಪ್ರಚಾರ. ಇದರ ಮೂಲ ಉದ್ದೇಶವೇ ಬೇರೆ.

ಪ್ರಗತಿಪರರಲ್ಲೂ ಪ್ರಶ್ನೆ

ಎಷ್ಟೋ ಜನ ಎಡ ಚಳುವಳಿಯ ಸಂಗಾತಿಗಳು, ಹಿತೈಷಿಗಳು, ಪ್ರಗತಿಪರರಿಗೂ ಕೂಡ ಚೀನಾ ದೇಶದ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳುವುದು ಗೊಂದಲಕಾರಿ ಅನಿಸಿದ್ದು, ಅಂತಹವರೂ ಸಹ ತಮ್ಮ ಆತಂಕಗಳನ್ನು ವ್ಯಕ್ತಪಡಿಸುವುದಿದೆ. ಚೀನಾದ ಭವಿಷ್ಯದ ದಾರಿ ಏನು ಎಂಬುದಂತೂ ದೊಡ್ಡ ಪ್ರಶ್ನೆಯಾಗಿ ಹಲವರನ್ನು ಕಾಡುತ್ತಿದೆ. ತೋರಿಕೆಯ, ಮೇಲು ಮೇಲಿನ ಅಂಶಗಳನ್ನು ಆಧರಿಸಿ ತೀರ್ಮಾನಿಸದೇ ವಿಷಯದ ಆಳಕ್ಕಿಳಿದು ನೋಡಿದಲ್ಲಿ ಈ ಪ್ರಚಾರದಲ್ಲಿನ ಎಷ್ಟೋ ಗೊಂದಲಗಳು ಪರಿಹರಿಯುತ್ತವೆ.

ರಷ್ಯಾದ ಸಮಾಜವಾದಿ ಕ್ರಾಂತಿ ಹಾಗೂ ಫ್ಯಾಸಿಸಂ ವಿರುದ್ಧದ ಅದರ ಚಾರಿತ್ರಿಕ ವಿಜಯ ಚೀನಾ, ಉತ್ತರ ಕೊರಿಯಾ, ಕ್ಯೂಬಾ, ವಿಯೆಟ್ನಾಂಗಳಲ್ಲಿ ಕ್ರಾಂತಿಗೆ ಸ್ಫೂರ್ತಿ ನೀಡಿದರೂ ಸಹ ಈ ದೇಶಗಳು ಕೈಗಾರೀಕರಣ ಹಾಗೂ ಉತ್ಪಾದನಾ ಸಾಧನಗಳ ಬೆಳವಣಿಗೆಯ ದೃಷ್ಟಿಯಿಂದ ನೋಡಿದರೆ ಸಾಕಷ್ಟು ಹಿಂದುಳಿದ ಆರ್ಥಿಕತೆಯ ದೇಶವಾಗಿದ್ದವು. ಅವು ಅರೆ ವಸಾಹತುಶಾಹಿ, ಅರೆಪಾಳೇಗಾರಿ [illegible]ಶಗಳಾಗಿದ್ದವು.

> **ಚೀನಾ ದೇಶದ ಸಮಾಜವಾದಿ ಹಾದಿ ಬಿಟ್ಟಿದೆ. ಬಂಡವಾಳಶಾಹಿ ಹಾದಿ ಹಿಡಿದಿದೆ ಎನ್ನುವವರಿದ್ದಾರೆ. ಈ ಕುರಿತು ಸಿದ್ಧಾಂತ ಒರೆಗಲ್ಲಿಗೆ ಹಚ್ಚಿ ನೋಡಿದಾಗ.....**



ರಷ್ಯಾದಲ್ಲಿ ಕ್ರಾಂತಿಯ ನಂತರ 'ಕಮ್ಯುನಿಸಂ' ತತ್ವದಂತೆ ಪ್ರಭುತ್ವ ಅಂದರೆ ಸರ್ಕಾರವೇ ಎಲ್ಲವನ್ನು ಉತ್ಪಾದಿಸುವುದು ಹಾಗೂ ಪ್ರಭುತ್ವವೇ ಎಲ್ಲವನ್ನೂ ವಿತರಿಸುವಂತೆ ಆರ್ಥಿಕ ವ್ಯವಸ್ಥೆಯನ್ನು ಬೆಳೆಸಲು ಪ್ರಯತ್ನಿಸಿ ನೋಡಿದರು. ಅದು ವಿಫಲವಾಯಿತು. ಸ್ವತಃ ಲೆನಿನ್ ಈ ಹಾದಿಯ ವಿಫಲತೆಯ ಅನುಭವದ ಕುರಿತು ಬರೆದಿದ್ದಾರೆ.

ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಕೆಲಸ ಮಾಡುವುದು, ಪ್ರತಿಯೊಬ್ಬರೂ ತಮ್ಮ ಪರಿಶ್ರಮಕ್ಕೆ ತಕ್ಕಂತೆ ಪ್ರತಿಫಲ ಪಡೆಯುವುದು, ಇದು ಸಮಾಜವಾದಿ ವ್ಯವಸ್ಥೆಯ ಒಂದು ಮೂಲಭೂತ ಕಲ್ಪನೆ. ಉತ್ಪಾದನಾ ಸಾಧನಗಳು ಸಾಕಷ್ಟು ಬೆಳವಣಿಗೆ ಹೊಂದದೆ, ಅಂದರೆ ಕೃಷಿ, ಕೈಗಾರಿಕೆ, ಇತ್ಯಾದಿ ರಂಗಗಳಲ್ಲಿ ಗಣನೀಯವಾದ ಸಮೃದ್ಧವಾದ ಪ್ರಮಾಣದಲ್ಲಿ ಉತ್ಪಾದನೆ ನಡೆಯುವಂತಹ ಹಂತಕ್ಕೆ ಆರ್ಥಿಕ ವ್ಯವಸ್ಥೆ ಬೆಳೆಯದೇ ಹೋದಲ್ಲಿ ಸಮಾಜವಾದ ತತ್ವಗಳನ್ನು ಆಚರಣೆಗೆ ತರುವುದು ಸಾಧ್ಯವೇ ಇಲ್ಲ.

ಸಮತಾವಾದ-ಕಮ್ಯುನಿಸಂ ಎಂಬುದು ಸಮಾಜವಾದಕ್ಕಿಂತಲೂ ಉನ್ನತವಾದ ಬೆಳವಣಿಗೆಯ ಹಂತ 'ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದುಡಿಯುವುದು-ಪ್ರತಿಯೊಬ್ಬರೂ ತಮ್ಮ ಅಗತ್ಯಕ್ಕೆ ತಕ್ಕಂತೆ ಪಡೆದುಕೊಳ್ಳುವುದು, ಇದು ಕಮ್ಯುನಿಸಂನ ಪರಿಕಲ್ಪನೆ. ಈ ಹಂತಕ್ಕೆ ಒಂದೇ ಬಾರಿ ನೆಗೆಯುವುದು ಸಾಧ್ಯವಿಲ್ಲ. ಸಮಾಜವಾದವು ಕಮ್ಯುನಿಸಂಗೆ ಪೂರ್ವಭಾವಿ ಹಂತ. ಈ ಸಮಾಜವಾದದ ಹಂತಕ್ಕೆ ಕೂಡ ಹಿಂದುಳಿದ ಆರ್ಥಿಕತೆಗಳು ಒಂದೇ ಬಾರಿಗೆ ನೆಗೆಯಲು ಸಾಧ್ಯವಿಲ್ಲ. ಸಮಾಜವಾದಿ ಹಂತವನ್ನು ತಲುಪುವ ಮುಂಚೆ ಹಲವು ಹಂತಗಳಿವೆ. ಈ ಹಂತಗಳ ನಿರ್ದಿಷ್ಟ ವಿವರಗಳು ಆಯಾಯ ದೇಶದ, ಆಯಾಯ ಆರ್ಥಿಕತೆಯ ನಿರ್ದಿಷ್ಟ ಪರಿಸ್ಥಿತಿಯನ್ನು ಆಧರಿಸಿರುತ್ತವೆ.

ಬಂಡವಾಳಶಾಹಿಯ 'ಬಳಕೆ'

ಹಿಂದುಳಿದ ಆರ್ಥಿಕತೆಯಿಂದ ಸಮಾಜವಾದದ ಕಡೆಗೆ ಬೆಳವಣಿಗೆಯ ಹಾದಿಯಲ್ಲಿ 'ಬಂಡವಾಳ ಶಾಹಿ' ಯು ಅಗತ್ಯ.

ಇಲ್ಲಿ 'ಬಂಡವಾಳಶಾಹಿ ಅಗತ್ಯ' ಎಂದಾಕ್ಷಣ ಶ್ರಮಿಕ ವರ್ಗದ ಅಧಿಪತ್ಯವನ್ನು ಕೈಬಿಟ್ಟು 'ಬಂಡವಾಳಶಾಹಿ ವ್ಯವಸ್ಥೆ'ಯನ್ನು ಸ್ಥಾಪಿಸುವುದು ಎಂಬುದಲ್ಲ. 'ಪ್ರಭುತ್ವ ಬಂಡವಾಳಶಾಹಿ' ಮೂಲಕ ಉತ್ಪಾದನೆಯ ಸಮೃದ್ಧಿ, ಉತ್ಪಾದನಾ ಸಾಧನಗಳ ಬೆಳವಣಿಗೆ ಸಾಧಿಸುವ ಪ್ರಯತ್ನದಲ್ಲಿ ಶ್ರಮಿಕ ವರ್ಗದ ಪ್ರಭುತ್ವವೇ ಬಂಡವಾಳಶಾಹಿಯನ್ನು ಬಳಸಿಕೊಳ್ಳುವುದು ಎಂದು ಅರ್ಥ.

ಬಂಡವಾಳಶಾಹಿ ಅಧಿಪತ್ಯದ ವ್ಯವಸ್ಥೆಯಲ್ಲಿ 'ಪ್ರಭುತ್ವ ಬಂಡವಾಳಶಾಹಿ' ಎನ್ನುವುದಕ್ಕೂ ಶ್ರಮಿಕ ವರ್ಗದ ಅಧಿಪತ್ಯದಲ್ಲಿ ಪ್ರಭುತ್ವ ಬಂಡವಾಳಶಾಹಿ ಎನ್ನುವುದಕ್ಕೆ ಬಹಳ ವ್ಯತ್ಯಾಸವಿದೆ. ಅವೆರಡು ಭಿನ್ನವಾದವು. ಅಂದರೆ ಭಾರತದಂತಹ ದೇಶದಲ್ಲಿ ಪ್ರಭುತ್ವ ಬಂಡವಾಳಶಾಹಿ ಎನ್ನುವುದಕ್ಕೂ ಚೀನಾದಂತಹ ದೇಶದಲ್ಲಿ ಪ್ರಭುತ್ವ ಬಂಡವಾಳಶಾಹಿ ಎನ್ನುವುದಕ್ಕೂ ಮೂಲಭೂತ ವ್ಯತ್ಯಾಸವಿದೆ.

ಚೀನಾ ಕ್ರಾಂತಿಯ ನಂತರದ ಮೂರು ದಶಕಗಳ ಬೆಳವಣಿಗೆಯನ್ನು ಚೀನಾ ಕಮ್ಯುನಿಸ್ಟ್ ಪಕ್ಷ ಆಳವಾದ ವಿಮರ್ಶೆಗೆ ಒಳಪಡಿಸಿತು. ಚೀನಾದ ಶ್ರಮಿಕ ವರ್ಗದ [illegible] ಬೆಳವಣಿಗೆ ಹಾಗೂ ಉತ್ಪಾದನೆಯಲ್ಲಿ ಸಮೃದ್ಧಿ ಅನಿವಾರ್ಯ. ಇಲ್ಲವಾದರೆ ಸಮಾಜದಲ್ಲಿ ತೀವ್ರಗೊಳ್ಳುವ ಬಿಕ್ಕಟ್ಟಿನಿಂದಾಗಿ ಶ್ರಮಿಕವರ್ಗದ ಕ್ರಾಂತಿಯನ್ನು ದಕ್ಕಿಸಿಕೊಳ್ಳಲಾಗದು ಎಂದು ಅದು ಕಂಡು ಕೊಂಡಿತು.

'ತೆರೆದ ಬಾಗಿಲು'

ಇದರ ಫಲವೇ 1978ರಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷ ಅಂಗೀಕರಿಸಿದ ನೀತಿ. 'ಆರ್ಥಿಕ ಅಭಿವೃದ್ಧಿ' ಈ ನೀತಿಯ ಪ್ರಧಾನ ಗುರಿ. 'ಮಾರ್ಕ್ಸ್‌ವಾದ -ಲೆನಿನ್‌ವಾದ- ಮಾವೋವಾದ'ಗಳ ಸಮಾಜವಾದಿ ದಾರಿಯನ್ನು ಕೈಬಿಡದೇ ಶ್ರಮಿಕ ವರ್ಗದ ಸರ್ವಾಧಿಕಾರದ ಸಿದ್ಧಾಂತದಿಂದ ದೂರವಾಗದೇ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಎಂಬುದರಲ್ಲಿ ಯಾವುದೇ ವಿಚಲನೆ ಇಲ್ಲದೆ ಆರ್ಥಿಕ ಸುಧಾರಣೆಗಳನ್ನು ಹಾಗೂ ತೆರೆದ ಬಾಗಿಲ ನೀತಿಗಳನ್ನು ಜಾರಿಗೆ ತರುವುದು.

ಚೀನಾ ಕಮ್ಯುನಿಸ್ಟ್ ಪಕ್ಷವು ತನ್ನ ದೇಶದ ಬೆಳವಣಿಗೆಯ ಹಂತವನ್ನು ಕುರಿತು 'ಸಮಾಜವಾದದ ಪ್ರಾಥಮಿಕ ಘಟ್ಟ' ಎಂದು ಹೆಸರಿಸಿದೆ. ಮತ್ತು ಸಮಾಜವಾದಿ ವ್ಯವಸ್ಥೆಯ ಕಡೆಗೆ ಸಾಗುವ ಹಾದಿಯಲ್ಲಿ ಮಾರುಕಟ್ಟೆ ಆರ್ಥಿಕತೆಯನ್ನು ಬಳಸಿಕೊಳ್ಳುವ ದುಡಿಸಿಕೊಳ್ಳುವ ಪರಿಕಲ್ಪನೆಯ ಆಧಾರದಲ್ಲಿ 'ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ' ಎಂಬ ಪರಿಕಲ್ಪನೆಯನ್ನು ಅಳವಡಿಸಿಕೊಂಡಿದೆ. 'ಸಮಾಜವಾದದ ಪ್ರಾಥಮಿಕ ಘಟ್ಟ' ಎಂಬುದಾಗಲಿ, 'ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ' ಎಂಬುದಾಗಲೀ ಚೀನಾ ಕಮ್ಯುನಿಸ್ಟ್‌ಪಕ್ಷವೇ ರೂಪಿಸಿಕೊಂಡು ಹೆಸರಿಸಿದ ಪರಿಕಲ್ಪನೆಗಳೇ ಆದರೂ ಇದಕ್ಕೆ ಆಧಾರ ಮಾರ್ಕ್ಸ್‌ವಾದ, ಲೆನಿನ್‌ವಾದದ ಮೂಲಭೂತ ಸಿದ್ಧಾಂತ. ರಷ್ಯಾ ಕ್ರಾಂತಿಯ ನಂತರದ ಚಾರಿತ್ರಿಕ ಅನುಭವ ಹಾಗೂ ಸ್ವತಃ ಚೀನಾ ದೇಶದ ಮೂರು ದಶಕಗಳ ಪ್ರಾಯೋಗಿಕ ಅನುಭವ.

1978ರ ನಂತರದ ಸುಧಾರಣೆಗಳನ್ನು ನೋಡಿ ಚೀನಾ ಕಮ್ಯುನಿಸ್ಟ್ ಪಕ್ಷ ಮಾವೋ ಚಿಂತನೆಗಳಿಂದ ದೂರ ಸರಿಯಿತು ಎನ್ನುವವರಿದ್ದಾರೆ. ಅದು ಸಹ ಸತ್ಯವಲ್ಲ. 'ಸಾಂಸ್ಕೃತಿಕ ಕ್ರಾಂತಿ'ಯ ಕಾಲದ ಕೆಲವು ತಪ್ಪುಗಳನ್ನು ತಿದ್ದುಕೊಂಡದ್ದು ಬಿಟ್ಟರೆ ಕಮ್ಯುನಿಸ್ಟ್ ಪಕ್ಷ ಮಾವೋವಾದದ ಅಡಿಪಾಯದ ಮೇಲೆಯೇ ತನ್ನ 'ಆರ್ಥಿಕ ಪ್ರಗತಿ'ಯ ಕಟ್ಟಡವನ್ನು ನಿರ್ಮಿಸಲು ಹೊರಟಿದೆ.

ಚೀನಾ ದೇಶ ಎಷ್ಟೆಲ್ಲಾ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಿದಾಗಲೂ, ಉತ್ಪಾದನಾ ಸಾಧನಗಳ ಮೇಲೆ ಖಾಸಗಿ ಹಿಡಿತಕ್ಕೆ ಅವಕಾಶ ಮಾಡಿಕೊಟ್ಟಿದ್ದಾಗಲೂ ಒಟ್ಟು ಆರ್ಥಿಕತೆಯಲ್ಲಿ ಪ್ರಧಾನ ಪಾತ್ರ ಹಾಗೂ ಅಧಿಪತ್ಯ ಸಾರ್ವಜನಿಕ ಬಂಡವಾಳದ್ದೆ, ಸಂಸ್ಥೆಗಳದ್ದೇ, ಚೀನಾ ಕಮ್ಯುನಿಸ್ಟ್ ಪಕ್ಷ ಈ ಪ್ರಶ್ನೆಯನ್ನು ಎಚ್ಚರದಿಂದ ನಿರ್ವಹಿಸುತ್ತಿದೆ.

ಹೊಸ ಸಮಸ್ಯೆ-ಸವಾಲುಗಳು :

ಚೀನಾದ ತೆರೆದ ಬಾಗಿಲ ನೀತಿ, ಹಾಗೂ ಆರ್ಥಿಕ ಸುಧಾರಣೆಗಳು ಉತ್ಪಾದನಾ ಸಾಧನಗಳ ತೀವ್ರ ಬೆಳವಣಿಗೆ ಹಾಗೂ ವೇಗವಾದ ಆರ್ಥಿಕ ಪ್ರಗತಿಯನ್ನು ತರುತ್ತಿದ್ದರೂ ಚೀನಾ ದೇಶದೊಳಗೆ ಅದು ಹೊಸ

ಪುಟ 14

ಅಕ್ಟೋಬರ್ 13ರಂದು ನಡೆಯುತ್ತಿರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಜನಪರ ಚಳುವಳಿಯನ್ನು ಪ್ರತಿನಿಧಿಸುವ ವಿವಿಧ ಪಕ್ಷಗಳ 'ಆರ್.ಎಲ್.ಡಿ.ಎಫ್' ಕೂಟವು ಉತ್ತಮ ಪ್ರಾತಿನಿಧ್ಯ ಗಳಿಸಿ ರಾಜ್ಯ ರಾಜಕಾರಣದಲ್ಲಿ ಮುಖ್ಯ ಪಾತ್ರ ವಹಿಸಬಹುದಾದ ನಿರೀಕ್ಷೆ ಹುಟ್ಟಿಸಿದೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆ

ಚಳುವಳಿಗಳ ಪ್ರಾತಿನಿಧ್ಯದ ನಿರೀಕ್ಷೆ

ಮಹಾರಾಷ್ಟ್ರದ ಇಡೀ ಬೆಳವಣಿಗೆ ಟ್ರೆಂಡ್ ಏನೆಂದರೆ (ವಿಶೇಷವಾಗಿ 1995-99 ಅವಧಿಯ ಶಿವಸೇನೆ ಮತ್ತು ಬಿಜೆಪಿ ಹಾಗೂ 1999-2009ರ ಕಾಂಗ್ರೆಸ್ ಎನ್‌ಸಿಪಿ ಅಧಿಕಾರದ ಅವಧಿಯಲ್ಲಿ) ದುಡಿಯುವ ವರ್ಗದ ವಿರುದ್ಧ ಮತ್ತು ಬಂಡವಾಳಶಾಹಿ, ಬಿಲ್ಡರ್‌ಗಳು, ಸಕ್ಕರೆ ಉದ್ಯಮಿಗಳು ಮತ್ತು ಶಿಕ್ಷಣ ಕ್ಷೇತ್ರದ ಮಾಫಿಯಾಗಳ ಪರವಾಗಿರುವುದಾಗಿದೆ. ಹಾಗಾಗಿ ಕೃಷಿ ಬಿಕ್ಕಟ್ಟು ಮತ್ತು ರೈತರ ಆತ್ಮಹತ್ಯೆಗಳು ಪ್ರಸಕ್ತ ಚುನಾವಣೆಯಲ್ಲಿನ ಪ್ರಮುಖ ವಿಷಯವಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಕೇಂದ್ರದ ಅಂಕಿಅಂಶಗಳ ಅನುಸಾರ 1995-2007ರ ಅವಯಲ್ಲಿ ರಾಜ್ಯದಲ್ಲಿ ಪ್ರಮುಖವಾಗಿ ವಿದರ್ಭ ಪ್ರದೇಶದಲ್ಲಿ 40,666 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಅವಧಿಯಲ್ಲಿ ಇಡೀ ದೇಶದಲ್ಲೇ ಇದು ಅತ್ಯಧಿಕ ಸಂಖ್ಯೆಯಾಗಿದೆ. ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಪ್ರಕಟಿಸಿದ ಪರಿಹಾರ ಪ್ಯಾಕೇಜ್‌ಗಳು ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡುವಂತಹ, ನೀರಾವರಿ ಸೌಲಭ್ಯ ಒದಗಿಸುವ, ಸುಲಭವಾಗಿ ಹಣಕಾಸಿನ ನೆರವು ಸಿಗಬೇಕಾದಂತಹ ಯಾವುದೇ ಮೂಲಭೂತ ಸಮಸ್ಯೆಗಳನ್ನು ನಿವಾರಿಸುವಲ್ಲಿ ವಿಫಲವಾಗಿದೆ. ಹಾಗಾಗಿ ಪರಿಹಾರ ಪ್ಯಾಕೇಜ್‌ಗಳು ಮೂಲ ಸಮಸ್ಯೆಯನ್ನು ನಿವಾರಿಸುವಲ್ಲಿ ವಿಫಲವಾಗಿವೆ.

ಮತ್ತೊಂದೆಡೆ ಬೆಲೆ ಏರಿಕೆ ಸಾಮಾನ್ಯ ಜನರನ್ನು ಭಾರಿ ಸಂಕಷ್ಟಕ್ಕೆ ಗುರಿ ಮಾಡಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ರೇಷನ್ ವ್ಯವಸ್ಥೆ ಅದೋಗತಿಗೆ ತಲುಪಿದೆ. ರಾಜ್ಯದಲ್ಲಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿರುವುದು ಕೃಷಿ ಕಾರ್ಮಿಕರನ್ನು ಕಿತ್ತುತಿನ್ನುತ್ತಿರುವ ಮತ್ತೊಂದು ಪ್ರಮುಖ ಸಮಸ್ಯೆಯಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಕೆಲಸವನ್ನು ಮಾಡುತ್ತಿಲ್ಲ. ಒಂದು ವೇಳೆ ಅಲ್ಪ ಸ್ವಲ್ಪ ಕೆಲಸವಾಗಿದ್ದರೆ ಅಲ್ಲಿ ಭಾರಿ ಭ್ರಷ್ಟಾಚಾರ ತುಂಬಿತುಳುಕುತ್ತಿದೆ.



ಆರ್ಥಿಕ ಬಿಕ್ಕಟ್ಟು ಆರಂಭಕ್ಕೆ ಮೊದಲೇ ರಾಜ್ಯದಲ್ಲಿ 20 ಲಕ್ಷ ಕಾರ್ಮಿಕರನ್ನು ಕೆಲಸದಿಂದ ಕಿತ್ತು ಹಾಕಲಾಗಿತ್ತು. ಬಿಕ್ಕಟ್ಟು ಆರಂಭಗೊಂಡ ನಂತರವಂತೂ ಉದ್ಯೋಗ ಕಡಿತ ಎಲ್ಲೆ ಮೀರಿತು. ಖಾಯಂ ನೌಕರರನ್ನೂ ಕಿತ್ತೊಗೆಯಲಾಯಿತು. ಅವರ ಸ್ಥಳದಲ್ಲಿ ಕಡಿಮೆ ವೇತನಕ್ಕೆ ಸಿಗುವವರನ್ನು ನೇಮಕ ಮಾಡಿಕೊಳ್ಳಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ 12 ರಿಂದ 16 ಗಂಟೆ ವಿದ್ಯುತ್ ಕಡಿತಗೊಳಿಸಲಾಗುತ್ತಿದ್ದರೆ ನಗರ ಪ್ರದೇಶದಲ್ಲಿ ಈ ಪ್ರಮಾಣ 4 ರಿಂದ 6 ಗಂಟೆಗಳಷ್ಟಿದೆ. ವಿದ್ಯುತ್ ಸಮಸ್ಯೆ ಎಲ್ಲ ವರ್ಗದ ಜನರನ್ನೂ ಹಿಂಡುತ್ತಿರುವ ಪಿಡುಗಾಗಿದೆ.

ರಿಪಬ್ಲಿಕನ್ ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್ (ಆರ್‌ಎಲ್‌ಡಿಎಫ್) :

ಮಹಾರಾಷ್ಟ್ರ ರಾಜ್ಯದ ರಚನೆಯ ಚಿನ್ನದ ಮಹೋತ್ಸವ ವರ್ಷದಲ್ಲಿ ಈ ಚುನಾವಣೆಗಳು ನಡೆಯುತ್ತಿವೆ. ಸಂಯುಕ್ತ ಮಹಾರಾಷ್ಟ್ರ ಸಮಿತಿ ನೇತೃತ್ವದಲ್ಲಿ ಭಾರಿ ಹೋರಾಟಗಳನ್ನು ನಡೆಸಲಾಗಿದೆ. ಈ ಸಮಿತಿಗೆ ನಾಲ್ಕು ಪ್ರಮುಖ ಶಕ್ತಿಗಳಾದ ಅವಿಭಜಿತ ಕಮ್ಯೂನಿಸ್ಟ್ ಪಕ್ಷ, ಆರ್‌ಪಿಐ, ರೈತ ಮತ್ತು ಕಾರ್ಮಿಕರ ಪಕ್ಷ ಮತ್ತು ಪ್ರಜಾ ಸಮಾಜವಾದಿ ಪಾರ್ಟಿ (ಮಾಜಿ ಸಮಾಜವಾದಿಗಳು) ನೇತೃತ್ವ ನೀಡಿದ್ದವು. ಈ ಹೋರಾಟದ ಫಲವಾಗಿ 1960ರ ಮೇ 1ರಂದು ಮಹಾರಾಷ್ಟ್ರ ಸ್ಥಾಪನೆಯಾಯಿತು. ಈ ಹೋರಾಟದಲ್ಲಿ ಆಗಿನ ಕಾಂಗ್ರೆಸ್ ನಡೆಸಿದ ಗೋಲಿಬಾರ್‌ನಲ್ಲಿ 105 ಮಂದಿ ಬಲಿಯಾದರು. 50 ವರ್ಷಗಳ ನಂತರ ಈ ನಾಲ್ಕು ಶಕ್ತಿಗಳು ಒಂದೆಡೆ ಸೇರಿ ಆರ್‌ಎಲ್‌ಡಿಎಫ್ ರಚಿಸಿವೆ. ಈ ರಂಗ ಮತದಾರರ ಮೇಲೆ ಈಗಾಗಲೇ ತನ್ನ ಪ್ರಭಾವವನ್ನು ಬೀರಿದೆ. ರಿಪಬ್ಲಿಕನ್ ಪಕ್ಷದ ಜನಸಮೂಹ ಮತ್ತು ಎಡ ಪಕ್ಷಗಳ ಸಾಂಪ್ರದಾಯಿಕ ಜನಸಮೂಹ ಈಗಾಗಲೇ ಹಲವಾರು ಕ್ಷೇತ್ರಗಳಲ್ಲಿ ಮುಂದಿವೆ. ಮಾಧ್ಯಮಗಳು ಈ ರಂಗವನ್ನು ನಕಾರಾತ್ಮಕವಾಗಿ ಬಿಂಬಿಸುತ್ತಿವೆ. ಆದರೆ ಅದು ವಾಸ್ತವವಲ್ಲ. ಗವಾಯ್ ರಂಗದಿಂದ ಹೊರಬರಲು ಕಾಂಗ್ರೆಸ್ ಒತ್ತಡ ಹೇರಿದ್ದರೂ ಆ ಪಕ್ಷದ ಅಧ್ಯಕ್ಷರಾದ ಗೌತಮ್ ಬಾಳೇರಾವ್ ನಿರ್ಣಯ ಜಾರಿಗೊಳಿಸಿದ್ದು ಗವಾಯ್ ರಂಗದಲ್ಲಿ ಮುಂದುವರೆ ದಿರುವುದಾಗಿ ದೃಢೀಕರಿಸಿದ್ದಾರೆ.

ಎಂಎನ್‌ಎಸ್ ಬೀರಬಹುದಾದ ಪರಿಣಾಮ?

ಆರಂಭದಿಂದಲೂ ಕಾಂಗ್ರೆಸ್ ಮತ್ತು ಎನ್‌ಸಿಪಿ ರಾಜ್ ಠಾಕ್ರೆ ನೇತೃತ್ವದ ಎಂ.ಎನ್.ಎಸ್.ಅನ್ನು ಬೆಂಬಲಿಸುತ್ತಾ ಬಂದಿವೆ. ವಾಸ್ತವವಾಗಿ ಎಂಎನ್‌ಎಸ್ ಹಿಂಸಾಸಕ್ತ ಕೃತ್ಯಗಳಲ್ಲಿ ತೊಡಗಲು ಇವೆರಡೂ ಪಕ್ಷಗಳು ಶಕ್ತಿಯನ್ನು ತುಂಬುತ್ತಿವೆ. ಹಾಗಾಗಿ ಎಷ್ಟೇ ಗಲಭೆಗಳನ್ನು ನಡೆಸಿದರೂ ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ.





ಕಮ್ಯೂನಿಸ್ಟ್ ಪಕ್ಷದ ನೆಲೆಯನ್ನು ಒಡೆಯಲು 1960ರಲ್ಲಿ ಕಾಂಗ್ರೆಸ್ ಪಕ್ಷ ಶಿವಸೇನೆಯನ್ನು ಬೆಂಬಲಿಸಿದಂತೆ ಈಗ ಶಿವಸೇನೆಯನ್ನು ಒಡೆಯಲು ಕಾಂಗ್ರೆಸ್ ಪಕ್ಷ ಎಂಎನ್‌ಎಸ್‌ಗೆ ಬೆಂಬಲಿಸುತ್ತಿದೆ. ಇದರಿಂದ ವಿರೋಧ ಪಕ್ಷಗಳ ಮತ ವಿಭಜನೆಯಾಗಿ ತನಗೆ ಹೆಚ್ಚು ಸ್ಥಾನ ಲಭಿಸಲಿದೆ ಎಂಬುದು ಕಾಂಗ್ರೆಸ್ ಎನ್‌ಸಿಪಿ ತಂತ್ರವಾಗಿದೆ.

ಇತ್ತೀಚಿನ ಕೋಮು ಘರ್ಷಣೆ:

ವಿಧಾನ ಸಭೆ ಚುನಾವಣೆಯಲ್ಲಿ ಲಾಭ ಗಳಿಸಲು ಸಾಂಗ್ಲಿ ಮತ್ತು ಕೊಲ್ಹಾಪುರಗಳಲ್ಲಿ ಕೋಮು ಗಲಭೆಗಳನ್ನು ಸೃಷ್ಟಿಸುವುದು ಒಂದು ಪಿತೂರಿಯಾಗಿತ್ತು. ಈ ಗಲಭೆಗಳನ್ನು ರಾಜ್ಯದ ವಿವಿಧ ಪ್ರದೇಶಗಳಿಗೂ ಹಬ್ಬಿಸಲು ತಂತ್ರ ರೂಪಿಸಲಾಯಿತು. ಆದರೆ ಸರಿಯಾದ ಸ್ಪಂದನೆ ದೊರೆಯದೆ ವಿಫಲಗೊಂಡರು. ಆಶ್ಚರ್ಯ ಎಂದರೆ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲೇ ಇಲ್ಲ. ಮೀರಜ್, ಸಾಂಗ್ಲಿ ಮತ್ತು ಇಚಲ್‌ಗಂಜ್‌ಗಳಲ್ಲಿ ಎಂಟು ದಿನ ನಿಷೇದಾಜ್ಞೆ ಜಾರಿಯಲ್ಲಿದ್ದರೂ ಸರ್ಕಾರ ಕೈಕಟ್ಟಿ ಕುಳಿತಿತ್ತು.

ಪ್ರಮುಖ ಬಂಡವಾಳಶಾಹಿ ಪಕ್ಷಗಳಲ್ಲಿನ ಬಂಡಾಯಗಾರರ ಹಣೆಬರಹ

ಈ ಪಕ್ಷಗಳಲ್ಲಿ ಯಾವುದೇ ಬಂಡಾಯ ಚುನಾವಣೆಯಲ್ಲೂ ಅಭ್ಯರ್ಥಿಗಳು ಇದ್ದೇ ಇರುತ್ತಾರೆ. ಆದರೆ ಈ ಬಾರಿ ವಿಶೇಷ ಏನೆಂದರೆ ಬಂಡಾಯದ ಪ್ರಮಾಣ ಹೆಚ್ಚಾಗಿದೆ. ಶಿವಸೇನೆಯಲ್ಲಂತೂ ಅಧಿಕವಾಗಿದೆ. ಬಾಳ ಠಾಕ್ರೆ ಈ ಸಮಸ್ಯೆಯನ್ನು ನಿವಾರಿಸಲು ಸಾಧ್ಯವೇ ಇಲ್ಲದಂತಾಗಿದೆ.

ತ್ರಿಶಂಕು ವಿಧಾನ ಸಭೆ ಸಾಧ್ಯತೆ

ಕಾಂಗ್ರೆಸ್-ಎನ್‌ಸಿಪಿಯ ಜನವಿರೋಧಿ ಆಡಳಿತದಿಂದಾಗಿ ಜನತೆ ಬೇಸರಗೊಂಡಿದ್ದಾರೆ. ಈ ಎಲ್ಲ ನೀತಿಗಳನ್ನು ಬಿಜೆಪಿ ಶಿವಸೇನೆ ಮೈತ್ರಿ ಸರ್ಕಾರ ಇದ್ದಾಗಲೇ ಜಾರಿಗೆ ತಂದಿರುವುದರಿಂದ ಅವರೂ ಸಹ ಜನರಲ್ಲಿ ವಿಶ್ವಾಸ ಮೂಡಿಸುವಲ್ಲಿ ವಿಫಲರಾಗಿದ್ದಾರೆ. ಎಂಎನ್‌ಎಸ್ ಶಿವಸೇನಾ ಬಿಜೆಪಿ ಮತಗಳನ್ನು ವಿಭಜಿಸುವುದರಿಂದ ಹಾಗೂ ರೈತರು, ದಲಿತರು ಮತ್ತು ಬುಡಕಟ್ಟು ಜನರ ನಡುವೆ ಆರ್‌ಎಲ್‌ಡಿಎಫ್ ಉತ್ತಮ ಸ್ಪಂದನೆ ಹೊಂದಿರುವುದರಿಂದ ತ್ರಿಶಂಕು ವಿಧಾನಸಭೆ ಸಾಧ್ಯತೆಗಳಿವೆ.

ಬುಡಕಟ್ಟು ಜನರ ಮೀಸಲು ಸ್ಥಾನಗಳು

ಶಾಮರಾವ್ ಪರುಳೇಕರ್ ಮತ್ತು ಗೋದಾವರಿ ಪರುಳೇಕರ್ ನೇತೃತ್ವದಲ್ಲಿ 1945ರಲ್ಲಿ ನಡೆದ ಐತಿಹಾಸಿಕ ಆದಿವಾಸಿ ಆಂದೋಲನ ಬುಡಕಟ್ಟು ಜನರ ನಡುವೆ ಅಸ್ತಿಭಾರವನ್ನು ಸ್ಥಾಪಿಸಿದೆ. ಅಂದಿನಿಂದಲೂ ಸಿಪಿಐ(ಎಂ) ಹೋರಾಟವನ್ನು ಮುಂದುವರೆಸುತ್ತಾ ಬಂದಿದೆ. ಭೂಮಿ, ಕೂಲಿ, ಉದ್ಯೋಗ, ಸಾರ್ವಜನಿಕ ವಿತರಣಾ ವ್ಯವಸ್ಥೆಯಂತಹ ವಿಷಯಗಳ ಕುರಿತು ನಿರಂತರವಾಗಿ ಹೋರಾಟ ನಡೆಸುತ್ತಾ ಬರಲಾಗಿದೆ. ಹಾಗಾಗಿಯೇ ಬುಡಕಟ್ಟು ಜನರ ನಡುವೆ ಬಲಿಷ್ಠ ಅಸ್ತಿಭಾರ ಇದೆ. ಈಗಿರುವ ಮೂವರು ಸಿಪಿಐ(ಎಂ) ಶಾಸಕರಲ್ಲಿ ಇಬ್ಬರು ಬುಡಕಟ್ಟು ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದವ ರಾಗಿದ್ದಾರೆ. ಥಾಣೆ ಮತ್ತು ನಾಸಿಕ್ ಜಿಲ್ಲೆಯ ಈ ಕ್ಷೇತ್ರಗಳಲ್ಲಿ ಪಕ್ಷ 3 ದಶಕಗಳಿಂದಲೂ ನಿರಂತರವಾಗಿ ಜಯಗಳಿಸುತ್ತಾ ಬಂದಿದೆ. ಒಟ್ಟು 20 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಈಗ ಸಿಪಿಐ(ಎಂ) ಗೆ ಮೂವರು ಶಾಸಕರಿದ್ದಾರೆ. ಜೆಡಿ(ಎಸ್) ಸಮಾಜವಾದಿ ಪಕ್ಷ ಮುಂತಾಗಿ 1[illegible] ಪಕ್ಷಗಳಿರುವ ಈ ರಂಗದ ರ್‍ಯಾಲಿಗೆ ಮುಂಬೈಯಲ್ಲಿ ಸೆ.12 ರಂದು 1 ಲಕ್ಷ ಜನ ಸೇರಿದ್ದರು ಎನ್ನುವುದು ಹೊಸ ಉತ್ಸಾಹದಾಯಕ ಸುದ್ದಿಯಾಗಿದೆ. ಕೂಟವು ರಾಜ್ಯದ ಎಲ್ಲಾ ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಬೋಫೋರ್ಸ್ ಹಗರಣ ಎಂಬುದೇ ಇಲ್ಲವಂತೆ!

ಎರಡು ದಶಕಗಳಿಂದ ದೇಶದಲ್ಲಿ ದೊಡ್ಡ ಸುದ್ದಿ ಮಾಡಿದ್ದ ಬೊಫೋರ್ಸ್ ಹಗರಣದ ಕೇಸನ್ನು ಮುಚ್ಚುವಂತೆ ಕೇಳಿ ಅಕ್ಟೋಬರ್ 3 ರಂದು ಸಿಬಿಐ ದೆಹಲಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದೆ. ಮುಚ್ಚಲು ಅದು ಕೊಟ್ಟಿರುವ ಕಾರಣ ಈ ಹಗರಣದಲ್ಲಿ ಸಿಲುಕಿದ್ದ ಇಟಾಲಿಯನ್ ವರ್ತಕ ಕ್ವಟ್ರೋಚಿಯನ್ನು ಭಾರತದ ವಶಕ್ಕೆ ಪಡೆಯುವ ಪ್ರಯತ್ನಗಳೆಲ್ಲಾ ವಿಫಲವಾಗಿವೆ ಎಂಬುದು. ಅಷ್ಟೇ ಅಲ್ಲ, ಬೊಫೋರ್ಸ್‌ನೊಂದಿಗೆ ಅವರ ತೋಫುಗಳ ಖರೀದಿಗೆ ಒಪ್ಪಂದ ಮಾಡಿಕೊಳ್ಳುವಾಗ ಮಧ್ಯವರ್ತಿಗಳು ಇರಬಾರದು ಎಂಬ ಶರತ್ತೇನೂ ಇರಲಿಲ್ಲವಂತೆ. ಸಿಬಿಐಗೆ ಈ 'ಸತ್ಯ' ಗೊತ್ತಾಗಲು 20 ವರ್ಷಗಳು ಬೇಕಾಯಿತೇ ಎಂದು ದೇಶದ ಜನ ಕೇಳುವಂತಾಗಿದೆ. ವಾಸ್ತವವಾಗಿ 1987 ರಲ್ಲಿ 64 ಕೋಟಿ ರೂ.ಗಳ ಲಂಚದ ಈ ಹಗರಣ ಬಯಲಿಗೆ ಬಂದಂದಿನಿಂದ ಕೇಂದ್ರದಲ್ಲಿನ ಕಾಂಗ್ರೆಸ್ ನೇತೃತ್ವದ ಸರಕಾರಗಳು ಇದನ್ನು ಮುಚ್ಚಿ ಹಾಕಲು ಪ್ರತಿಯೊಂದು ಹಂತದಲ್ಲೂ ಪ್ರಯತ್ನಿಸಿದ್ದು, ಸಿಬಿಐ ಇಜರ ಗಂಭೀರ ತನಿಖೆ ನಡೆಸದಂತೆ ಮಾಡಿದ್ದು ಕೊನೆಗೂ ಇದು ನೆರವೇರಿದಂತಾಗಿದೆ.

★

ರಾಹುಲ್ ಗಾಂಧಿಯ ಮೇಲ್ಪಂಕ್ತಿ ತಂದ ಮುಜುಗರ

ಉತ್ತರ ಪ್ರದೇಶದಲ್ಲಿ ದಲಿತರ ಮನೆಗಳಿಗೆ ಹಠಾತ್ ಭೇಟಿ ನೀಡಿ ಅವರೊಂದಿಗೆ ಇದ್ದು ಅವರ ಬವಣೆಗಳನ್ನು 'ಅರ್ಥಮಾಡಿಕೊಳ್ಳುವ' ರಾಹುಲ್ ಗಾಂಧಿಯವರ ಪ್ರಯತ್ನ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿದೆ. ಇದರಿಂದ 'ಸ್ಫೂರ್ತಿ' ಗೊಂಡ ಉ.ಪ್ರ. ಕಾಂಗ್ರೆಸ್ ಮುಖಂಡರ ದಂಡೇ ಈ ಗಾಂಧಿ ಜಯಂತಿಯ ದಿನದಂದು ದಲಿತರ ಮನೆಗಳಿಗೆ 'ಭೇಟಿಯಿಟ್ಟ' ಪರಿ ಸ್ವತಃ ರಾಹುಲ್ ಗಾಂಧಿಯವರಿಗೆ ಮುಜುಗರ ತಂದಿದೆಯಂತೆ. ದಲಿತರ ಮನೆಗಳಲ್ಲಿ 'ಪ್ರವಾಸ'ಕ್ಕೂ ಈಗ ಮಾರ್ಗ-ನಿರ್ದೇಶನಗಳನ್ನು ರೂಪಿಸಲಾಗುತ್ತಿದೆಯಂತೆ. ಕೆಲವು ಮುಖಂಡರು ತಮ್ಮದೇ ಅಡುಗೆಯವರನ್ನು, ಕೆಲವರು ತಮ್ಮ ಊಟವನ್ನು, ಇನ್ನು ಕೆಲವರು ತಟ್ಟೆಗಳನ್ನೂ ಕೂಡಾ ತಮ್ಮೊಂದಿಗೆ ಒಯ್ದರಂತೆ! ರಾಹುಲ್ ಗಾಂಧಿಯವರು ಕಾಂಗ್ರೆಸ್ ಮುಖಂಡರ ಈ 'ಸಂಸ್ಕೃತಿ'ಯನ್ನು ಆ ಮೂಲಕ ತಮ್ಮ ಪಕ್ಷದ ಸ್ವರೂಪವನ್ನು ಕೂಡಾ 'ಅರ್ಥಮಾಡಿಕೊಳ್ಳಲು' ಪ್ರಯತ್ನಿಸಬಹುದು. ಒಬ್ಬ ಯುವ ರಾಜಕಾರಣಿಯಾಗಿ ತಾವು ಕಲಿಯುತ್ತಿರುವುದಾಗಿ ಅವರು ಹೇಳಿದ್ದಾರೆ.

★

ಹರ್ಯಾಣಾದಲ್ಲೂ ಕೋಟ್ಯಾಧೀಶ್ವರರು ಚುನಾವಣಾ ಕಣದಲ್ಲಿ

ಈ ಬಾರಿ ಹರ್ಯಾಣಾ ವಿಧಾನ ಸಭಾ ಚುನಾವಣೆಯ ಅಭ್ಯರ್ಥಿಗಳಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಕೋಟ್ಯಾಧೀಶ್ವರರು. ಇವರಲ್ಲಿ ಹೆಚ್ಚಿನವರು ಪ್ರಧಾನ ರಾಜಕೀಯ ಪಕ್ಷಗಳವರು. ದಿನ ಬೆಳಗಾದರೆ 'ಆಮ್ ಆದ್ಮಿ'ಯ ಮಂತ್ರ ಜಪಿಸುವ ರಾಹುಲ್ ಗಾಂಧಿಯವರ ಕಾಂಗ್ರೆಸ್ ಪಕ್ಷ ಇದರಲ್ಲಿ ಎಲ್ಲರಿಗಿಂತಲೂ ಮುಂದೆ. ಅದರ ಅಭ್ಯರ್ಥಿಗಳಲ್ಲಿ 80 ಶೇಕಡಾ ಮಂದಿ ಕೋಟ್ಯಾಧೀಶ್ವರರು(90ರಲ್ಲಿ 72 ಮಂದಿ). 2005ರಲ್ಲಿ ಒಟ್ಟು ಅಭ್ಯರ್ಥಿಗಳಲ್ಲಿ 19ಶೇ. ಮಂದಿಯ ಆಸ್ತಿ ಮಾತ್ರ 1ಕೋಟಿ ರೂ. ದಾಟಿತ್ತು. ಒಂದು ದಶಕದ 'ಅರ್ಥಿಕ ಉತ್ಕರ್ಷದ' ಫಲ?

★

ಪ್ರತಿ 15 ಸೆಕೆಂಡಿಗೆ ಒಂದು ಮಗು ಸಾವಪ್ಪುತ್ತಿದೆ

ಆದರೆ ಈ 'ಅರ್ಥಿಕ ಉತ್ಕರ್ಷ'ದ ನಂತರವೂ ಭಾರತದಲ್ಲಿ ಹಸುಳೆಗಳ ಸಾವಿನ ದರ ನಾಚಿಕೆಗೇಡಿನದ್ದು ಎಂದು ಮಕ್ಕಳ ಆರೋಗ್ಯದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಂತರ್ರಾಷ್ಟ್ರೀಯ ಸಂಘಟನೆಯ ಇತ್ತೀಚಿನ ವರದಿಯಿಂದ ಮತ್ತೆ ಬೆಳಕಿಗೆ ಬಂದಿದೆ. 'ಮಕ್ಕಳನ್ನು ಉಳಿಸಿ' ಎಂಬ ಸಂಘಟನೆಯ ಪ್ರಕಾರ ಈಗಲೂ ಪ್ರತಿ ವರ್ಷ 4ಲಕ್ಷ ಮಕ್ಕಳು ಹುಟ್ಟಿದ 24 ಗಂಟೆಯೊಳಗೆ ಸಾಯುತ್ತವೆ. ಪ್ರತಿವರ್ಷ 20 ಲಕ್ಷ ಮಕ್ಕಳು ಸಾಯುತ್ತಿವೆ. ಅಂದರೆ ಪ್ರತಿ 15 ಸೆಕೆಂಡಿಗೆ ಒಂದರಂತೆ. ಇಷ್ಟೊಂದು ಪ್ರಮಾಣದಲ್ಲಿ ಜಗತ್ತಿನ ಬೇರಾವ ದೇಶದಲ್ಲೂ ಹಸುಳೆಗಳು ಸಾವಪ್ಪುತ್ತಿಲ್ಲ. ಮಕ್ಕಳ ಸಾವಿನ ದರ ಸಾವಿರಕ್ಕೆ 72. ಅತಿ ಬಡದೇಶಗಳಲ್ಲಿ ಒಂದಾದ ನೆರೆಯ ಬಾಂಗ್ಲಾದೇಶದಲ್ಲೂ ಇಷ್ಟೊಂದು ಪ್ರಮಾಣದಲ್ಲಿ ಮಕ್ಕಳ ಸಾವು ಸಂಭವಿಸುತ್ತಿಲ್ಲ. ಇವುಗಳಲ್ಲಿ 90 ಶೇಕಡಾದಷ್ಟು ಸುಲಭವಾಗಿ ತಡೆಯಬಹುದಾದ ಕಾಯಿಲೆಗಳಿಂದ ಸಾಯುತ್ತಿವೆ.

ಯುಪಿಎ II ದರ್ಬಾರ್‌ನಲ್ಲಿ



★

ಮಾಧ್ಯಮಿಕ ಶಿಕ್ಷಣ ರಂಗದಲ್ಲೂ....

ಈ ವಾರ ಭಾರತದ ಪ್ರಗತಿಯ ಸ್ವರೂಪವನ್ನು ಸೂಚಿಸುವ ಇನ್ನೊಂದು ವರದಿಯೂ ಪ್ರಕಟವಾಗಿದೆ. ಇದು ಭಾರತದ ಆಳರಸರು ಬಹಳವಾಗಿ ನಂಬುವ ವಿಶ್ವಬ್ಯಾಂಕಿನದೇ ವರದಿ. ಮಾಧ್ಯಮಿಕ ಶಿಕ್ಷಣದ ವಯೋಗುಂಪಿನ ಮಕ್ಕಳಲ್ಲಿ 40 ಶೇಕಡಾ ಮಾತ್ರ ಶಾಲೆ ಸೇರುತ್ತಾರೆ. ಪೂರ್ವ ಏಶ್ಯಾದ ದೇಶಗಳಲ್ಲಿ ಇದು 70ಶೇ. ಮತ್ತು ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ 80ಶೇ. ಅಷ್ಟೇ ಅಲ್ಲ ದೇಶದೊಳಗೂ ಮೇಲಿನ ಆದಾಯ ಗುಂಪು ಮತ್ತು ಕೆಳಗಿನ ಆದಾಯ ಗುಂಪಿನಲ್ಲಿ ಮಾಧ್ಯಮಿಕಶಾಲೆ ಪ್ರವೇಶಿಸುವ ಮಕ್ಕಳ ಪ್ರಮಾಣದಲ್ಲಿ 40ಶೇ. ಅಂತರವಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆಯೂ 20 ಶೇ. ಅಂತರವಿದೆ. 1000 ಮಕ್ಕಳಿಗೆ ಒಂದು ಮಾಧ್ಯಮಿಕ ಶಾಲೆಯೂ ಇರದ ಜಿಲ್ಲೆಗಳ ಪ್ರಮಾಣ 27ಶೇ.

ಎಲ್ಲಕ್ಕೂ ಮಿಗಿಲಾಗಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನ 2009ರಲ್ಲಿ ಮತ್ತಷ್ಟು ಕೆಳಗಿಳಿದಿದೆ-128ರಿಂದ 134ನೇಸ್ಥಾನಕ್ಕೆ. ರಾಹುಲ್ ಗಾಂಧಿಯವರು ಇದಕ್ಕೆ ಮಾಯಾವತಿಯವರನ್ನು ದೂರುವಂತಿಲ್ಲ. ಇದು ಅವರ ಪಕ್ಷದ ಆಳ್ವಿಕೆಯ ಬಳುವಳಿಯೇ ಎಂಬುದನ್ನೂ ಅವರು ಕಲಿಯಬೇಕಾಗಿದೆ.

★

ಭಾರತದ ಆರೋಗ್ಯ ವ್ಯವಸ್ಥೆ ಅಮೆರಿಕಾದ ನಕಲು

ಹೀಗೆಂದವರು ಭಾರತದ ಜ್ಞಾನ ಆಯೋಗದ ಅಧ್ಯಕ್ಷ ಸಾಮ್ ಪಿತ್ರೋಡಾ. ಇದು ಬಹಳ ವೆಚ್ಚದಾಯಕವಾದ, ಜನಗಳ ಸಾಮರ್ಥ್ಯಕ್ಕೆ ಮೀರಿದ ವ್ಯವಸ್ಥೆ -ಒಂದು ಸರಳವಾದ ವ್ಯವಸ್ಥೆ ತರಬೇಕು ಎಂದೂ ಅವರು ಹೇಳಿದ್ದಾರೆ. ಅವರನ್ನು ಈಗ ಮೂಲರಚನೆ, ನವೀನೀಕರಣ ಮತ್ತು ಮಾಹಿತಿ ಕುರಿತು ಪ್ರಧಾನ ಮಂತ್ರಿಗಳಿಗೆ ಪ್ರಧಾನ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ- ನವ-ಉದಾರೀಕರಣದ ಅಧ್ವರ್ಯುಗಳಾದ ನಮ್ಮ ಪ್ರಧಾನಿಗಳಿಗೆ.

★

ಮಳೆ ನೆರವಾಗಲಿಲ್ಲ, ಪವಾರ್...?

"ಪ್ರೀತಿಯ ರೈತರೇ, ಈ ವರ್ಷ ಮಳೆ ನಮ್ಮ ನೆರವಿಗೆ ಬಂದಿಲ್ಲ. ಆದರೆ ನಾವು ನೆರವಾಗುತ್ತೇವೆ." - ಇದು ಮರಾಠಿ ಪತ್ರಿಕೆಯೊಂದರಲ್ಲಿ ಕೇಂದ್ರ ಕೃಷಿ ಮಂತ್ರಾಲಯ ಪ್ರಕಟಿಸಿದ ಜಾಹಿರಾತು. ಮಹಾರಾಷ್ಟ್ರದಲ್ಲೀಗ ವಿಧಾನ ಸಭಾ ಚುನಾವಣೆಗಳು ನಡೆಯುತ್ತಿವೆ. ಈ ಜಾಹೀರಾತು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು ಚುನಾವಣಾ ಆಯೋಗ ಎನ್‌ಸಿಪಿ ಯ ಅಧ್ಯಕ್ಷರೂ ಆಗಿರುವ ಶರದ್ ಪವಾರ್ ಅವರಿಗೆ ನೋಟೀಸು ಕೊಟ್ಟಿದೆ.

ನೆರೆ ಸಂತ್ರಸ್ತರಿಗೆ ನೆರವು ನೀಡಲು ಸಿಪಿಐ(ಎಂ) ಮನವಿ

ಪ್ರವಾಹದ ಅನಾಹುತಗಳ ಕುರಿತು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅದನ್ನು ರಾಷ್ಟ್ರೀಯ ವಿಪತ್ತು ಎಂದು ಪರಿಗಣಿಸಬೇಕೆಂದು ಮತ್ತು ಸೂಕ್ತ ಪರಿಹಾರಕ್ಕೆ ಮುಂದಾಗಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಪ್ರಕೃತಿ ವಿಕೋಪದಿಂದಾಗಿ ಜನತೆ ಅತ್ಯಂತ ದಾರುಣ ಸ್ಥಿತಿಯಲ್ಲಿದ್ದಾರೆ. ಇಂತಹ ಸ್ಥಿತಿಯಲ್ಲಿ ನೆರವು ನೀಡಿ, ಬದುಕು ಪುನರ್‌ನಿರ್ಮಾಣ ಮಾಡಬೇಕಿದೆ. ಆದ್ದರಿಂದ ರಾಜ್ಯದಾದ್ಯಂತ ಪಕ್ಷದ ಎಲ್ಲಾ ಘಟಕಗಳು,ಸದಸ್ಯರು, ಹಿತೈಷಿಗಳು ನಿಧಿ ಮತ್ತು ವಸ್ತುಗಳನ್ನು ಸಂಗ್ರಹಿಸಿ ಸಂತ್ರಸ್ತರಿಗೆ ನೆರವು ನೀಡಲು ಸಿಪಿಐ(ಎಂ) ರಾಜ್ಯಸಮಿತಿ ಕರೆ ನೀಡಿದೆ.

ಇದನ್ನು ಪಕ್ಷದ ರಾಜ್ಯ ಸಮಿತಿಗೆ ತಲುಪಿಸುವುದು ಅಥವಾ ಸಂಪರ್ಕಿಸುವುದು.

ಕೊಚ್ಚಿಹೋದ ಬದುಕು...

8 ರಿಂದ

"ಎರಡು ದಿನ ರಕ್ಷಣೆಗೆ ಮೊರೆಯಿಟ್ಟರೂ ಉಪಯೋಗವಿಲ್ಲ. ಗಿಡದ ಮೇಲೆ 48 ತಾಸು ಕಳೆದವು. ಒಂದು ವರ್ಷದ ಮಗುವನ್ನು ಆ ತೊಟ್ಟಿಲಿನಲ್ಲಿಯೇ ಸುತ್ತಿಕೊಂಡು ಗಿಡದ ಮೇಲೆ ಕುಳಿತಿದ್ದೆವು" ಎಂದು ಬದುಕುಳಿದು ಬಂದ ಮಹಿಳೆ ವೆಂಕಟರಮಣಮ್ಮ ತನ್ನ ನೋವಿನ ಸಂಗತಿಯನ್ನು ಸ್ಥಳಗಳಿಗೆ ಭೇಟಿ ನೀಡಿದ ಸಿಪಿಐ(ಎಂ) ಹಾಗೂ ಪ್ರಾಂತ ರೈತ ಸಂಘದ ತಂಡ ಗ್ರಾಮಕ್ಕೆ ಭೇಟಿ ನೀಡಿದಾಗ ಹೇಳಿಕೊಂಡರು.

ಒಂದು ದಿನ ಕಳೆದ ಬಳಿಕ ಗಿಡದ ಮೇಲೆ ಕುಳಿತಾಗ ಎಲ್ಲೋ ದೂರದಲ್ಲಿ ಸಂಚರಿಸುವುದು ಕಾಣುತ್ತಿತ್ತು. ಆದರೆ ಅವರಿಗೆ ನಾವು ಕಾಣುತ್ತಿರಲಿಲ್ಲ. ಪ್ರಾಣಕ್ಕಾಗಿ ಗಂಟಲು ಹರಿಯುವಂತೆ ಎಲ್ಲರೂ ಚೀರುತ್ತಿದ್ದೆವು. ಮಳೆ, ಗಾಳಿ, ಕಾರ್ಗತ್ತಲು. ಆದರೆ ಧೈರ್ಯಗೆಟ್ಟಿರಲಿಲ್ಲ. ಎದೆಯ ಮಟ್ಟಕ್ಕೆ ನೀರು ಹರಿಯುತ್ತಿತ್ತು. ಧೈರ್ಯ ಮಾಡಿ ನಡೆಯುತ್ತಾ ಕೈ-ಕಾಲು ಬಡಿಯುತ್ತ ಮೂರು ಕಿ.ಮೀ. ಸಾಗಿದ ಬಳಿಕ ನಾರದಗಡ್ಡೆ ಚನ್ನಬಸಮೇಶ್ವರ ದೇವಸ್ಥಾನ ಕಂಡಿತು. ಅಲ್ಲಿಯೇ ಆಶ್ರಯಪಡೆದೆವು. ಅಲ್ಲಿ ನಮ್ಮಂತೆ ಇಪ್ಪತ್ತು ಜನರಿದ್ದರು. ಅವರನ್ನು ಕಾಪಾಡಿ ಎಂದು ಪುಣೆಯ ಸೇನಾ ಪಡೆಯ ವಿಪತ್ತು ನಿರ್ವಹಣಾ ಘಟಕದ ಯೋಧರಿಂದ ರಕ್ಷಣೆಗೊಂಡ ಮಹಿಳೆ ವೆಂಕಟರಮಣಮ್ಮ ಕಣ್ಣೀರಿಟ್ಟರು.

ಸಂತ್ರಸ್ತರ ಆಕ್ರೋಶ: ಮೂರು ದಿನಗಳ ಕಾಲ ನಿರಂತರ ಸುರಿದ ಭಾರಿ ಮಳೆಯಿಂದ ಜಲಾವೃತಗೊಂಡ ಜನರಿಗೆ ಪರಿಹಾರ ಒದಗಿಸುವಲ್ಲಿ ನಿರ್ಲಕ್ಷ್ಯವಹಿಸಿದ ಜಿಲ್ಲಾಡಳಿತ ವಿರುದ್ಧ ರೊಚ್ಚಿಗೆದ್ದ ತಲಮಾರಿಯ ಜನ ಗ್ರಾಮಕ್ಕೆ ತೆರಳಿದ್ದ ಶಾಸಕ ರಾಯಪ್ಪನಾಯಕ ಮತ್ತು ತಹಶೀಲ್ದಾರ್ ಸೂರ್ಯನಾರಾಯಣರ ಮೇಲೆ ಹಲ್ಲೆಗೆ ಯತ್ನಿಸಿ 3 ವಾಹನಗಳಿಗೆ ಬೆಂಕಿ ಹಚ್ಚಿದ ಪ್ರಕರಣ ನಡೆದಿದೆ.

3 ದಿನಗಳಿಂದ ಗ್ರಾಮ ಜಲಾವೃತಗೊಂಡು ಜನ ಸಾಯುವ ಸ್ಥಿತಿಯಲ್ಲಿದ್ದರೂ ಯಾವೊಬ್ಬ ಅಧಿಕಾರಿಯು ಸುಳಿಯಲಿಲ್ಲ. ಜನ ಪ್ರತಿನಿಧಿಗಳು ಬರಲಿಲ್ಲ. ಈಗ ಪರಿಹಾರದ ನಾಟಕವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಜನ ಗ್ರಾಮಕ್ಕೆ ಯಾವ ಪ್ರತಿನಿಧಿಗಳು ಪತ್ರಕರ್ತರಿಗೂ ದಿಗ್ಬಂಧನ ಹಾಕಿದ್ದರು.

ಸಿಪಿಐ(ಎಂ) ಸಂಗಾತಿಗಳನ್ನೊಳಗೊಂಡ ಇತರೆ ಸಂಘಟನೆಗಳ ಮುಖಂಡರ ನಿಯೋಗವೊಂದು ಇದೇ ಸಂದರ್ಭದಲ್ಲಿ ಗ್ರಾಮಕ್ಕೆ ತೆರಳಿ ಆಹಾರ ವಿತರಿಸಿ ಸಾಂತ್ವನ ಹೇಳಿದಾಗ ಜನರು ಸಮಾಧಾನಗೊಂಡರು. ಈ ಇದರ ನಂತರ ಈಗ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲರೂ ಇಲ್ಲಿಯೇ ಬಿಡಾರ ಹೂಡಿದ್ದಾರೆ.

ದೇಶಪ್ರೇಮ ಎಂದರೆ......

ಪುಟ 10ರಿಂದ

ಮುಂದೆ ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ಪಾಲ್ಗೊಳ್ಳದೇ ಬ್ರಿಟಿಷ್ ಸರ್ಕಾರಕ್ಕೆ ವಿಧೇಯನಾಗಿರುತ್ತೇನೆ ಎಂದು ಬೇಡಿಕೊಂಡಿದ್ದಕ್ಕೆ ಖಚಿತ ದಾಖಲೆಗಳಿವೆ.

1924ರಲ್ಲಿ 'ತಾತ್ಯಾ(ಸಾವರ್‌ಕರ್) ರನ್ನು ಕಾರಾಗೃಹದಿಂದ ಬಿಡುಗಡೆ ಮಾಡಿದರು. ಆದರೆ ಅವರು ರತ್ನಗಿರಿ ಜಿಲ್ಲೆಯನ್ನು ಬಿಟ್ಟು ಹೊರಗೆ ಹೋಗಕೂಡದು ಎಂಬ ನಿರ್ಬಂಧವನ್ನು ಹೇರಲಾಯಿತು. ಅವರು ಯಾವುದೇ ರಾಜಕೀಯ ಕಾರ್ಯವನ್ನು ಕೈಕೊಳ್ಳಬಾರದು ಎಂಬ ನಿರ್ಬಂಧವೂ ಹಾಕಲ್ಪಟ್ಟಿತು' ಎಂದಿದೆ ಪುಸ್ತಕ.

ಬ್ರಿಟಿಷರು ಹಾಕಿದ ಈ ಷರತ್ತನ್ನು ಸಾವರ್‌ಕರ್ ಪಾಲಿಸುತ್ತಾರೆ. ಗುಪ್ತ ಕೋಮುವಾದಿ ಚುಟವಟಿಕೆ ಹೊರತುಪಡಿಸಿ, ಸ್ವಾತಂತ್ರ್ಯ ಹೋರಾಟ ಅಥವಾ ರಾಜಕೀಯ ಚಟುವಟಿಕೆಗಳಲ್ಲಿ ಅವರು ಪಾಲ್ಗೊಳ್ಳುವುದಿಲ್ಲ!! ಇದನ್ನು ಸಹ ಇದೇ ಪುಸ್ತಕವೇ ಹೇಳಿದೆ.

''1937ರಲ್ಲಿ ಸಾವರ್‌ಕರ್ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಲಾಯಿತು. ಆ ನಂತರ ಸಾವರ್ಕರ್ ಸಕ್ರಿಯ ರಾಜಕಾರಣದಲ್ಲಿ ಧುಮುಕಿದರು" ಎನ್ನುತ್ತದೆ ಪುಸ್ತಕ. ಹಡಗಿನ ಕಿಂಡಿಯಿಂದ ಹಾರಿದ ವೀರ ಈಗ ಬ್ರಿಟಿಷರ ನಿರ್ಬಂಧ ಪಾಲಿಸಿದ್ದೇಕೆ? ಕ್ಷಮಾದಾನ ಬೇಡಿದ ಮೂರು ಅರ್ಜಿಗಳೇ ಈ ನಡವಳಿಕೆಗಳ ಹಿಂದಿನ ಮೂಲ ಪ್ರೇರಣೆ ಅಲ್ಲವೇ?.

ಅದು ಗೋಲ್ವಾಲ್ಕರ್ ಇರಲಿ, ಹೆಡ್ಗೆವಾರ್ ಇರಲಿ ಸಾರ್ವರ್‌ಕರ್ ಇರಲಿ.... ರಾಷ್ಟ್ರಾದ್ಯಂತ ಸಂಚರಿಸಿದರು. ರಾಷ್ಟ್ರಪ್ರೇಮ ಜಾಗೃತಗೊಳಿಸಿದರು.... ಇತ್ಯಾದಿ ಮಾತುಗಳೇನಾದರೂ ಕಂಡು ಬಂದರೆ ಆಗ ಅಲ್ಲಿ ನಾವು ಮುಸ್ಲಿಂ ದ್ವೇಷ ಹರಡಿದರು. ಕೋಮುವಾದಿ ಹಿಂದುತ್ವದ ವಿಷ ಹರಡಿದರು ಎಂದೇ ಓದಿಕೊಳ್ಳಬೇಕು.

ಮುಸ್ಲಿಂ ದ್ವೇಷ

ಅಂಡಮಾನ್ ಕಾರಾಗೃಹದಲ್ಲಿ ಮುಸಲ್ಮಾನರಿಗೆ ನಮಾಜ್ ಮಾಡಲು ಬಿಡುತ್ತಿದ್ದರು. ಹಿಂದೂಗಳಿಗೆ ಪೂಜೆ ಮಾಡಿಕೊಳ್ಳಲು ಬಿಡುತ್ತಿರಲಿಲ್ಲ ...(ಸಾವರ್‌ಕರ್ ಪುಸ್ತಕ)

ನಾವು ಶಾಂತಿಯಿಂದ ಇದ್ದು ಉಳಿದವರೊಡನೆ ಸರಿಯಾಗಿ ನಡೆದುಕೊಂಡರೆ ಇತರರು ನಮ್ಮೊಡನೆ ಹಾಗೇ ನಡೆದುಕೊಳ್ಳುತ್ತಾರೆಂದು ಭರವಸೆಯೇನು?.. (ಗೋಲ್ವಾಲ್ಕರ್ ಪುಸ್ತಕ)

ಒಬ್ಬ ಮನುಷ್ಯ ನಮ್ಮ ರಾಷ್ಟ್ರದಾಚೆಗಿನ ತತ್ವಗಳಿಂದ ಸ್ಫೂರ್ತಿ ಪಡೆಯುವುದು ಇನ್ನೂ ಹೆಚ್ಚಿನ ದ್ರೋಹವಲ್ಲವೇ?...(ಗೋಲ್ವಾಲ್ಕರ್ ಪುಸ್ತಕ)

ಹೀಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಅನ್ಯ ಧರ್ಮಿಯರನ್ನು ಅದರಲ್ಲಿಯೂ ಮುಸ್ಲಿಮರನ್ನು ಶತ್ರುಗಳೆಂದು, ದೇಶ ದ್ರೋಹಿಗಳೆಂದು ಬಿಂಬಿಸುವ ಮಾತುಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಜಾಣ್ಮೆಯಿಂದ ನಾಜೂಕಾಗಿ ಸೇರಿಸಲಾಗಿದೆ. ಮುಗ್ಧ ಮಕ್ಕಳ ಮನಸ್ಸಿನಲ್ಲಿ ಈ ವಿಷ ಸೇರಿದರೆ ಅದನ್ನು ತೆಗೆಯುವುದು ಸುಲಭದ ಕೆಲಸವಲ್ಲ. ಇದು ನಿಜಕ್ಕೂ ಅಪಾಯಕಾರಿಯಾದ ಆತಂಕಕಾರಿಯಾದ ವಿಷಯ.

ಮಹಾರಾಷ್ಟ್ರದಲ್ಲಿ ಸಾವರ್‌ಕರ್ ಸ್ಥಾಪಿಸಿದ 'ಅಭಿನವ ಭಾರತ' ಸಂಘಟನೆ ಈಗಲೂ ಸಕ್ರಿಯವಾಗಿದೆ. ಮುಗ್ಧ ಮುಸ್ಲಿಮರನ್ನು ಬಾಂಬ್ ಸ್ಫೋಟಿಸಿ ಕೊಂದ ಪ್ರಕರಣದಲ್ಲಿ ಬಂಧಿತರಾಗಿರುವ ಸಂನ್ಯಾಸಿನಿ ಪ್ರಗ್ನಾಸಿಂಗ್ ಕರ್ನಲ್ ಪುರೋಹಿತ ಮುಂತಾದವರೆಲ್ಲಾ ಇದೇ ಸಂಘಟನೆಗೆ ಸೇರಿದವರು. ಇನ್ನೂ ಆರೆಸ್ಸೆಸ್ ಕಿಡಿಹಾಕಿ ತಿದಿಯೂದಿ ಹೊತ್ತಿಸಿದ ಕೋಮುಗಲಭೆಗಳ ಲೆಕ್ಕವುಂಟೆ?

ಕೊನೆಯದಾಗಿ ಸಾವರ್‌ಕರ್ ಬದುಕಿನ ಕೊನೆಗಾಲದ ಬಗೆಗೆ ಪುಸ್ತಕದಲ್ಲಿ ಬರೆಯಲಾಗಿರುವುದನ್ನು ನೋಡಿದರೆ ಈ ಹಿಂದುತ್ವ ವೀರರ ಜೀವನ ದೃಷ್ಟಿ, ಆರೆಸ್ಸೆಸ್‌ನ ವಂಚಕತನ ಎರಡೂ ಒಟ್ಟೊಟ್ಟಿಗೆ ಮನವರಿಕೆಯಾಗುತ್ತದೆ.



ಮಹಾತ್ಮ ಗಾಂಧಿ ಹತ್ಯೆಯ ಆರೋಪಿಗಳ ಸಾಲಿನಲ್ಲಿ ಸಾವರ್ಕರ್

"....ತಾತ್ಯಾರ ಶರೀರ ಸವೆದಿತ್ತು. ಅನಾರೋಗ್ಯ ಮನೆ ಮಾಡಿತ್ತು. ಅವರಿಗೆ ಜೀವನದಲ್ಲಿ ಇನ್ನಾವ ಆಸೆ ಆಕಾಂಕ್ಷೆಗಳು ಉಳಿದಿರಲಿಲ್ಲ. ಹಿಂದೂಗಳಿಗೆ ಹಿಂದೂ ಎಂಬ ಹೆಸರನ್ನು ನೀಡಿದ ಸಿಂಧೂ ನದಿ, ಹಿಂದೂಗಳಿಗೆ ವೇದಗಳನ್ನಿತ್ತ ಆರ್ಯಾವರ್ತ ಪ್ರದೇಶ ಭಾರತದ ಹೊರಗೆ ಉಳಿದು ಪಾಕಿಸ್ತಾನ ಎಂಬ ಬೇರೆಯೇ ರಾಷ್ಟ್ರ ನಿರ್ಮಾಣವಾದದ್ದು ಅವರಿಗೆ ಸಹ್ಯವಾಗಿರಲಿಲ್ಲ. **ಉಳಿದೆಲ್ಲಾ ವಿಷಯಗಳಲ್ಲಿ ಸಂತೃಪ್ತಿ ಲಭಿಸಿತ್ತು.** ತಮ್ಮ ಜೀವನದ ಕೊನೆಗಾಲದಲ್ಲಿ ಸಾವರ್‌ಕರ್ ಅನ್ನವ ವರ್ಜಿಸಿದರು 1966ರ ಫೆಬ್ರವರಿ 26 ರ ಅಸುನೀಗಿದರು..."

ಇದು ಪುಸ್ತಕ ಸಾರುವ ವಿಷಯ. 'ಉಳಿದೆ ವಿಷಯಗಳಲ್ಲಿ ಸಂತೃಪ್ತಿ ಲಭಿಸಿತ್ತು' ಎಂದರೇ 'ಸಾವರ್‌ಕರ್ ಅಸ್ಪೃಶ್ಯತೆ ವಿರುದ್ಧ ಹೋರಾ ಟೊಂಕ ಕಟ್ಟಿದರು' ಎಂದು ಪುಸ್ತಕದ ಮಧ್ಯದಲ್ಲೇ ಒಂದು ಮಾತು ತುರುಕಲಾಗಿದೆ. ಹಾಗಿದ್ದರೆ ದೇಶದ ಹೋಗಲಿ ಕನಿಷ್ಠ ಮಹಾರಾಷ್ಟ್ರದ ಅಸ್ಪೃಶ್ಯತೆಯ ಹೀನ ಆಚರಣೆಗಳು ನಿಂತಿದ್ದ

ಸ್ವಾತಂತ್ರ್ಯ ಹೋರಾಟಗಾರರ ಕನಸು ಈಡೇರಿದ್ದವೇ. ದೇಶದ ಹಸಿವು, ಬಡ ನಿರುದ್ಯೋಗ ನಿವಾರಣೆಯಾಗಿದ್ದವೇ?

1966 ರ ಕಾಲಘಟ್ಟ ಎಂದರೆ ದೇಶ ಆಹಾರಕ್ಕಾಗಿ ಆಹಾಕಾರ ಎದ್ದಿದ್ದ ವ ಅಂತಹ ಕಾಲದಲ್ಲಿ ಈ ಮಹಾನ್ ದೇ 'ಉಳಿದೆಲ್ಲಾ ವಿಷಯಗಳಲ್ಲಿ ಸಂತೃಪ್ತಗೊ ನಿರುಮ್ಮಳನಾಗಿ, ನೆಮ್ಮದಿಯ ಸಾಯಬೇಕಾದರೆ ಇವರ ದೇಶಪ್ರೇಮದ ಎಂಥದ್ದು!

ದೇಶದ ಸ್ವಾತಂತ್ರ್ಯಕ್ಕಾಗಿ, ಜನರ ಬದು ಬದಲಾವಣೆಗಾಗಿ ನಗು ನಗುತ್ತಾ ನೇಣುಗಂಬ ಭಗತ್‌ಸಿಂಗ್, ರಾಜಗುರು, ಸುಖದೇ ಅವರಂತಹ ಅಮರ ತ್ಯಾಗಿಗಳಿಗಿಂತಲೂ ದ್ವ ಕೋಮುವಾದವನ್ನೇ ಉಸಿರಾಡಿ ದೇಶ ವಿಭ ಕುಮ್ಮಕ್ಕು ನೀಡಿ ಸ್ವಾತಂತ್ರ್ಯ ಚಳುವಳಿಗೆ ದ್ರೋಹಮ ಹಿಂದುತ್ವವಾದಿಗಳನ್ನು ದೊಡ್ಡದಾಗಿ ಮರೆಸುತ್ತಿ ಆರೆಸ್ಸೆಸ್ ಮತ್ತು ಸಂಘ ಪರಿವಾರದ ನಿಜ ತತ್ವ, ಸಿದ್ಧಾಂತ, ಗುರಿ ಏನೆಂದು ಇದರಿಂದಲಾ ಅರ್ಥಮಾಡಿಕೊಳ್ಳುವುದು ಸಾಧ್ಯವಾಗಬೇಕು.

ನೈತಿಕ ಪೊಲೀಸ್‌ಗಿರಿ...

ಪುಟ 5 ರಿಂದ

ಬಿಡುಗಡೆಗೊಳಿಸಿದ್ದೇವೆ. ಹುಡುಗಿಯನ್ನು ಮನೆಯವರ ಜೊತೆಗೆ ಎಚ್ಚರಿಕೆ ನೀಡಿ ಕಳುಹಿಸಲಾಗುವುದು ಎಂದು ಹೊಣೆಹೊತ್ತು ಕೊಂಡಿದ್ದಾನೆ. PFI ನ ಕರಾಳ ಮುಖವನ್ನು ಕಂಡ ವರದಿಗಾರರು ಬೆಚ್ಚಿಬಿದ್ದಿದ್ದಾರೆ. ಸುದ್ದಿ ಜಿಲ್ಲೆಯಲ್ಲಿ ಸಂಚಲನವನ್ನು ಮೂಡಿಸಿತು. PFI ಯನ್ನು ಯಾವತ್ತೂ ಸಮರ್ಥಿಸುವ, ಜಾತ್ಯಾತೀತ ಸಂಘಟನೆಯೆಂದು ಸರ್ಟಿಫಿಕೇಟ್ ಕೊಡುವ ಕೆಲ ಜಾತ್ಯಾತೀತ ಬುದ್ಧಿ ಜೀವಿಗಳು ಗಲಿಬಿಲಿಗೊಂಡು ಹೊಣೆ ಹೊತ್ತುಕೊಂಡದ್ದಕ್ಕೆ ತರಾಟೆಗೆ ತೆಗೆದುಕೊಂಡಿದ್ದಾರೆ. ಪೊಲೀಸರು ಅಥಾವುಲ್ಲಾ ಮತ್ತು ಕಾರ್ಯಕರ್ತರ ಬೆನ್ನು ಬಿದ್ದಿದ್ದಾರೆ. ಮರುದಿವಸ ಹೆಚ್ಚಿನ ಪತ್ರಿಕೆಗಳು PFI ನ ಘನಂದಾರಿ ಕೃತ್ಯವನ್ನು ವರದಿ ಮಾಡಿವೆ. ಅದರಲ್ಲೂ ಯಾವತ್ತೂ ಹಿಂದೂ ತಾಲಿಬಾನಿಗಳ ಕೃತ್ಯವನ್ನು ಬಯಲಿಗೆಳೆಯುವಲ್ಲಿ, ಜಾತ್ಯಾತೀತತೆಯನ್ನು ಎತ್ತಿಹಿಡಿಯುವಲ್ಲಿ ಮುಂಚೂಣಿಯಲ್ಲಿರುವ 'ದಿ ಹಿಂದೂ' ಮತ್ತು 'ಕರಾವಳಿ ಅಲೆ' ಪತ್ರಿಕೆಗಳು PFI ನ ನೈತಿಕ ಪೊಲೀಸ್‌ಗಿರಿಯನ್ನು ಆದ್ಯತೆಯಲ್ಲಿ ಪ್ರಕಟಿಸಿವೆ. ಜೊತೆಯಲ್ಲಿ ಹೊಣೆಹೊತ್ತುಕೊಂಡ ಅಥಾವುಲ್ಲನ ಹೇಳಿಕೆಯನ್ನು ಪ್ರಕಟಿಸಿವೆ. ಪತ್ರಿಕೆ ಪ್ರಕಟವಾಗುತ್ತಿದ್ದಂತೆಯೇ ಇಷ್ಟರವರೆಗೆ ಗುಪ್ತವಾಗಿ ನಡೆಯುತ್ತಿದ್ದ, ಎಲ್ಲರಿಗೂ ಗೊತ್ತಿದ್ದ ಸತ್ಯಸಾಕ್ಷ ಸಮೇತ ಬಹಿರಂಗವಾಗಿದ್ದನ್ನು ಕಂಡು ಮುಸ್ಲಿಂ ತೀವ್ರವಾದಿಗಳು ಮೈ ಪರಚಿಕೊಳ್ಳತೊಡಗಿದ್ದಾರೆ. ತಮ್ಮ ಸಹಭಾಗಿಗಳ ಮುಖವಾಡ ಕಳಚಿ ಬಿದ್ದುದನ್ನು ಕಂಡು ಕೋಮು ಸೌಹಾರ್ದ ವೇದಿಕೆಯ 'ಜಾತ್ಯಾತೀತ'ರು KFD ಯನ್ನು ಸಮರ್ಥಿಸಿಕೊಳ್ಳಲು ಪರದಾಡುತ್ತಿದ್ದಾರೆ. ಈ ಘಟನೆಯನ್ನು ಖಂಡಿಸಿ 'ಕೋಮು ಸೌಹಾರ್ದ ವೇದಿಕೆ' ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯಲ್ಲಿ PFI ನ ಹೆಸರನ್ನು ಸೇರಿಸದೆ ಮುಸ್ಲಿಂ ಯುವಕರ ಗುಂಪಿನ ಕೃತ್ಯವನ್ನು ಖಂಡಿಸುತ್ತೇವೆ ಎಂದು ಹೇಳಿರುವುದು PFI ಯನ್ನು ರಕ್ಷಿಸಿ ಮುಸ್ಲಿಂ ಸಮುದಾಯದ ಮೇಲೆ ಹೊಣೆಯನ್ನು ಜಾರಿಸಿದಂತಾಗಿದೆ.

ಜಾರಿಕೊಳ್ಳುವ ಯತ್ನ

ಒಟ್ಟು ಬೆಳವಣಿಗೆಯನ್ನು ಎದುರಿಸಲಾಗದೆ PFI ನ ನಾಯಕರು ಮರುದಿವಸ ಪತ್ರಿಕಾಗೋಷ್ಠಿ ಕರೆದು ಘಟನೆಗೂ ತಮಗೂ ಸಂಬಂಧವಿಲ್ಲ. ಕರಾವಳಿ ಅಲೆ, ಹಿಂದೂ ಪತ್ರಿಕೆಗಳು ಸುಳ್ಳು ಬರೆದಿವೆ, ಸಂಘಟನೆಯ ಮೇಲೆ ಸಂಚು ಹೂಡಲಾಗಿದೆ ಎಂದು ಕರುಣಾಜನಕವಾಗಿ ಸತ್ಯದ ತಲೆಯ ಮೇಲೆ ಹೊಡೆದಂತೆ ಅಲವತ್ತುಕೊಂಡಿದ್ದಾರೆ. ಕರಾವಳಿ ಅಲೆ ಮತ್ತು ಹಿಂದೂ ಪತ್ರಿಕೆಗಳ ವರದಿಗಾರರು ಅವತ್ತಿನ ಮಾತುಕತೆಯ ವಿವರಗಳನ್ನು ಸವಿವರವಾಗಿ ಹೇಳಿದಾಗ ನಿರುತ್ತರರಾದ ಮುಸ್ಲಿಂ ತೀವ್ರವಾದಿ PFIಗಳು ತಾವು ಹೇಳುತ್ತಿರುವುದೇ ಪರಮ ಸತ್ಯ ಎಂಬಂತೆ ಎದ್ದು ಹೋಗಿದ್ದಾರೆ.

ಒಟ್ಟು ಈ ಘಟನೆ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ. ಜಿಲ್ಲೆಯ ಸ್ಫೋಟಕ ಪರಿಸ್ಥಿತಿ, ಸ್ಪರ್ಧೆಗೆ ಬಿದ್ದಿರುವ ಮತೀಯ ವಾದಿಗಳ ಮೇಲಾಟ, ಹಿಂದೂ ಮುಸ್ಲಿಂ ತಾಲಿಬಾನಿಗಳ ನಿತ್ಯದ ರಗಳೆಯಿಂದಾಗಿ ಅಂಚಿಗೆ ತಳ್ಳಲ್ಪಡುತ್ತಿರುವ ಜನರನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳು, ಹಿಂದುತ್ವವಾದಿಗಳ ಕೋಮುವಾದದ ವಿರುದ್ಧ ಹೋರಾಡಬೇಕಾದ ಕೆಲ ಜಾತ್ಯಾತೀತವಾದಿಗಳು ಮುಸ್ಲಿಂ ಕೋಮು ಗಳಾದ PFI ಗಳನ್ನು ಜೊತೆಯಲ್ಲಿಟ್ಟು ತೀವ್ರವಾದಿಗಳನ್ನು ಜಾತ್ಯಾತೀತ ಹೆಸ ಸಮರ್ಥಿಸಿಕೊಳ್ಳುತ್ತಿರುವುದು, ಮುಸ್ಲಿಂ ಸಾ ಪೊಲೀಸರಿಂದಾಗುತ್ತಿರುವ ಕೋಮು ಧ್ರುವೀಕ ತೀವ್ರತೆ ಇವೆಲ್ಲ ಪ್ರಶ್ನೆಗಳು ದುತ್ತನೆ ಎದ್ದು ನಿ ನೈಜ ಜಾತ್ಯಾತೀತರು PFI ನಿಂದ ಸರಿಯತೊಡಗಿದ್ದಾರೆ. ಬುದ್ಧಿಜೀವಿಗಳು ಇನ್ನಾ ಮುಸ್ಲಿಂ ಕೋಮುವಾದದ ವಿರುದ್ಧ ದೃಢ ನಿಲ ತೆಗೆದುಕೊಳ್ಳಬೇಕಾಗಿದೆ. ಮುಸ್ಲಿಂ ಸಮುದಾ ಹಿರಿಯರು, ಪ್ರಜ್ಞಾವಂತರು PFI ನ ಕಾ ಬಾಹಿರ, ಅವಿವೇಕಿ ಕೃತ್ಯಗಳಿಂದ ಸಂಘ ಪರಿ ಕೋಮುವಾದ ಇನ್ನಷ್ಟು ಬಲಿಷ್ಠವಾಗು ಅರಿತುಕೊಂಡು ತಮ್ಮ ಸಮುದಾಯದ ಜನತೆಗೆ ದಾರಿತಪ್ಪದಂತೆ ಮಾರ್ಗದ ಮಾಡಬೇಕಿದೆ. ಏನೇ ಆದರೂ ಬಹು ಯಾವುದೇ ಕೋಮುವಾದದ ಬಲಿಪ ಯಾವತ್ತೂ ಅಲ್ಪಸಂಖ್ಯಾತರು ಮತ್ತು ಅಮಾ ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬ

ದಸರಾ ಹಬ್ಬ ಮುಗಿದಿದೆ. ಆದರೆ ಅಜೀರ್ಣವಾಗುವಷ್ಟು 'ಹಬ್ಬದೂಟ' ಉಂಡವರನ್ನು ವಿಚಾರಿಸುವವರು ಯಾರು?

ದಸರೆಯ ಹೊತ್ತಿಗೆ ಬಂದ 'ಗುಂಟುಕಳ್ಳ'ರು

ಅಂತೂ ದಸರೆ ಹಾಗೂ ಅದರ ಗುಂಗು ಮುಗಿದಿದೆ. ಹತ್ತು ದಿನಗಳ ಕಾಲ ನಡೆದ ನಾಡಹಬ್ಬ ಎಂದು ಬಿಂಬಿಸಲಾಗುವ ಆಳುವ ಸರ್ಕಾರದ ಅಸಹ್ಯ ವಿಜೃಂಭಣೆಗೆ ತೆರೆಬಿದ್ದಿತೆಂಬುದೇ ಕೊನೆಗೆ ಸಮಾಧಾನ. ದಸರೆಗೆಂದೇ ನೀಡಲಾದ 10 ಕೋಟಿ.ರೂ.ಗಳ ಅನುದಾನದಲ್ಲಿ ಅಷ್ಟಿಷ್ಟು ಖರ್ಚಾಗಿ ಉಳಿದ ಬಹುತೇಕ ಹಣ ಬಿಜೆಪಿ ಹಿರಿಕಿರಿ ನಾಯಕರ ಜೇಬು ಸೇರಿದೆ. ದಸರಾ ಉಪಸಮಿತಿಗಳಲ್ಲಿ ಉಸ್ತುವಾರಿ ಸಚಿವೆ ಶೋಭ ಕರುಂದ್ಲಾಜೆಯ ಹಿಂದೆ ಮುಂದೆ ಸುತ್ತುವ ಮಂದಿ ಮಾಗಧರು ಸ್ಥಾನಗಿಟ್ಟಿಸಿ ಸ್ಥಳೀಯ ಶಾಸಕರಾದ ರಾಮದಾಸ್ ಹಾಗೂ ಶಂಕರಲಿಂಗೇಗೌಡರ ಅನುಯಾಯಿಗಳು ಹೊರಗುಳಿಯುವಂತಾಗಿ ಪಕ್ಷದಲ್ಲಿಯೇ ಎರಡು ಬಣಗಳ ತಿಕ್ಕಾಟ ಬಹಿರಂಗಜ್ಞಾಹೀರಾಯಿತು. ಈ ಇಬ್ಬರೂ ಶಾಸಕರು ದಸರೆಯ 'ಶೋಭಾಯಾತ್ರೆ' ಯಿಂದ ಹೊರಗುಳಿದರು.

...ಲಗಳ್ಳನಿಂದ ಉದ್ಘಾಟನೆ

ದಸರೆಯ ಆಚರಣೆಯ ಅಪಸವ್ಯ ಅದರ ಉದ್ಘಾಟನೆಯಿಂದಲೇ ಆರಂಭವಾಯಿತೆನ್ನಬಹುದು. ...ಜೆಪಿಯ ಸ್ಥಳೀಯ ರಾಜಕಾರಣಿಗಳಿಗೆ ರಿಯಲ್ ಎಸ್ಟೇಟ್ ಉದ್ಯಮದ ಜೊತೆ ಅವಿನಾಭಾವ ಸಂಬಂಧವಿರುವುದರಿಂದ ನೆಲಗಳ್ಳ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್‌ನನ್ನೇ ಉದ್ಘಾಟನೆಗೆ ...ಸಲಾಗಿತ್ತು. ಅಮಲೇರಿದ ಕಣ್ಣುಗಳಿಂದ ಆ ಗುರು ...ನು ಮಾತನಾಡಿದನೋ ತಿಳಿಯದಾಗಲಿಲ್ಲ. ಆದರೆ ...ತನ ವಿದೇಶಿ ಭಕ್ತ ವೃಂದ ಹುಚ್ಚೆದ್ದು ಕುಣಿದು ಸುದ್ದಿ ಮಾಡಿತು.

ಯಡಿಯೂರಪ್ಪ ನವರ ಸಂಪುಟದ ಬಹುತೇಕ ಸಚಿವರು ಹಲವಾರು ಕಾರ್ಯಕ್ರಮಗಳನ್ನು ಉದ್ಘಾಟಿಸುವರೆಂದು ಹೇಳಲಾಗುತ್ತಿತ್ತಾದರೂ ಯಾರೂ ಬರದೇ ಒಂದೇ ದಿನ ಹದಿಮೂರು ಕಾರ್ಯಕ್ರಮಗಳನ್ನು ಉದ್ಘಾಟಿಸಿ ಜಿಲ್ಲಾ ಉಸ್ತುವಾರಿ ... ಶೋಭಾ ಕರಾಂದ್ಲಾಜೆ ದಾಖಲೆ ಸ್ಥಾಪಿಸಿದರು.

...ಾಟಿ

ದಸರಾ ಉತ್ಸವಕ್ಕೆ ಪೂರ್ವಭಾವಿಯಾಗಿ ...ೂರು ನಗರದ ಪ್ರಮುಖ ವೃತ್ತಗಳಲ್ಲಿ ಬಣ್ಣದ ...ೋಲಿ ಬಿಡಿಸಲು ಸಂಘ ಪರಿವಾರಕ್ಕೆ ಹತ್ತಿರವಾದ 'ಸಂಜೆ 5' ಎನ್ನುವ, ಇನ್ನೂ ಪ್ರಕಟಣೆಯೇ ಆಗಿರದ ಪತ್ರಿಕಾ ಬಳಗಕ್ಕೆ ಲಕ್ಷಗಟ್ಟಲೇ ಹಣ ಸಂದಾಯ ಮಾಡಲಾಗಿದೆ ಎನ್ನುವ ಆಪಾದನೆ ಮೂಲಕ ಪ್ರಾರಂಭವಾದ ಭ್ರಷ್ಟಾಚಾರದ ಪರ್ವ ದಸರೆ ಮುಗಿದರೂ ನಿಂತಿಲ್ಲ. ಅರಮನೆಯ ಆವರಣದಲ್ಲಿ ವೇದಿಕೆ, ಪೆಂಡಾಲ್ ನಿರ್ಮಿಸಲು ಕಳೆದ ವರ್ಷ 27 ಲಕ್ಷಕ್ಕೆ ಗುತ್ತಿಗೆ ನೀಡಲಾಗಿತ್ತು. ಈ ವರ್ಷ 46ಲಕ್ಷ ನಿಗದಿ ಮಾಡಿ ಬೆಂಗಳೂರಿನ ಸಂಸ್ಥೆಯೊಂದಕ್ಕೆ ನೀಡಲಾಗಿದೆ. ಆ ಸಂಸ್ಥೆಯವರು ಮೈಸೂರಿನ ವರೊಬ್ಬರಿಗೆ ಅದೇ ಕೆಲಸವನ್ನು 27 ಲಕ್ಷಕ್ಕೆ ಉಪಗುತ್ತಿಗೆ ನೀಡಿ 19 ಲಕ್ಷ ನಿರಾಯಾಸ ಲಾಭ ಮಾಡಿದರು.

ಪ್ರತಿಯೊಂದರಲ್ಲೂ ಕಮಿಷನ್ ಬಾಚಿದ ಉಪ ಸಮಿತಿಯವರು ಲಕ್ಷಗಟ್ಟಲೇ ಲೂಟಿ ಮಾಡಿದ್ದಾರೆ. ಸಾಂಸ್ಕೃತಿಕ ವೇದಿಕೆಗಳನ್ನು ಹೊಗಳಿಕೆಯ ಅಟ್ಟವಾಗಿಸಿ ಕೊಂಡು ಉಪಸಮಿತಿಗಳ ವತಿಯಿಂದ ನಗರದ ತುಂಬಾ ಬಾರಿ ಫ್ಲೆಕ್ಸ್‌ಗಳನ್ನು ಹಾಕಿಸಿ ಮಿಂಚಿದ್ದಾರೆ.

ಯುವದಸರಾ ನಡೆದ ಮಹಾರಾಜ ಕಾಲೇಜು ಮೈದಾನದ ಬೃಹತ್ ವೇದಿಕೆಯ ಮೇಲೆ ಪ್ರದರ್ಶಿಸಲಾಗಿದ್ದ ಭಾರಿಗಾತ್ರದ ಯಡಿಯೂರಪ್ಪ, ಶೋಭಾ ಕರಂದ್ಲಾಜೆಯವರ ಭಾವಚಿತ್ರ ಯುವಜನರ 'ಕುಹಕ'ಕ್ಕೆ ಅವಕಾಶ ನೀಡಿತು. ಇವೆಲ್ಲಾ ಬೇಕಿತ್ತೇ?

ಇಂಥಾ ಹೊತ್ತಲ್ಲಿ ಹಬ್ಬ ಹೇಗೆ?

ಕಳೆದ ವರ್ಷದಿಂದ ಪ್ರಾರಂಭವಾದ ರೈತ ದಸರಾ ಈ ವರ್ಷವೂ ಆಸಕ್ತಿಕರವಾಗಿರಲಿಲ್ಲ. ಇರಲಾದರೂ ಹೇಗೆ ಸಾಧ್ಯ. ರಾಜ್ಯಾದ್ಯಂತ ಬರಗಾಲ, ರೈತರ ಬಗೆಹರಿಯದ ಸಂಕಷ್ಟಗಳು, ಆತ್ಮಹತ್ಯೆಗಳ ಸರಣಿ, ರೈತರ ಎದೆಗೆ ಬಂದೂಕು ಹಿಡಿದ ಬಿಜೆಪಿ ಸರ್ಕಾರವಿರುವಾಗ ರೈತರು ಹಬ್ಬ ಆಚರಿಸುವುದಾದರೂ ಹೇಗೆ? ಯಡಿಯೂರಪ್ಪನವರಿಗೆ ರೈತ ಪರ ಮುಖ್ಯಮಂತ್ರಿ ಎನ್ನುವ ಮುಖವಾಡ ತೊಡಿಸಲಷ್ಟೇ ಬಳಕೆಯಾದ ಈ ಕಾರ್ಯಕ್ರಮದಲ್ಲಿ ರೈತರನ್ನು ಕೇಳುವವರೇ ಇಲ್ಲದೇ ಅವರು ಅವ್ಯವಸ್ಥೆಗಳ ಬಗ್ಗೆ, ಅನಾದರಗಳ ಬಗ್ಗೆ ಪತ್ರಿಕೆಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯದ್ದು ಪೋಲಿಸ್ ರಾಜ್ಯ ಎಂದು ಮತ್ತೊಮ್ಮೆ ದಸರೆಯಲ್ಲಿ ಸಾಬೀತಾಯಿತು. ಅರಮನೆಯ ಆವರಣದಲ್ಲಿ ಕಾರ್ಯಕ್ರಮದ ಛಾಯಾಚಿತ್ರ ತೆಗೆಯಲು ಹೋಗಿದ್ದ 'ಸಂಜೆವಾಣಿ' ಪತ್ರಿಕೆಯ ಚಂದ್ರು ಮೇಲೆ ಎಸಿಪಿಯೊಬ್ಬರು ಏರಿ ಹೋಗಿ ಹಲ್ಲೆ ಮಾಡಿದ ಘಟನೆ ನಡೆಯಿತು. ಅದನ್ನು ಪ್ರತಿಭಟಿಸಿ ಪತ್ರಕರ್ತರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ನಡೆಸಿ ತಮಗೆ ನೀಡಲಾಗಿದ್ದ ಪಾಸುಗಳನ್ನು ಉಸ್ತುವಾರಿ ಸಚಿವೆಯ ಮುಂದೆ ಎಸೆದರು. ಸರಿಪಡಿಸಲಾಗುವುದು ಎಂದು ಸಚಿವೆ, ಜಿಲ್ಲಾಧಿಕಾರಿ ಭರವಸೆ ನೀಡಿದರೂ ಜಂಬೂಸವಾರಿಯಂದು ಮತ್ತೆ ಪತ್ರಕರ್ತರ ಮೇಲೆ ಪೋಲೀಸರು ಏರಿ ಹೋದ ಘಟನೆ ಮರುಕಳಿಸಿತು.

'ಖಾಲಿ' ಪ್ರದರ್ಶನ

ಇನ್ನೂ ದಸರಾ ವಸ್ತುಪ್ರದರ್ಶನದ್ದೇ ಒಂದು ಕತೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷನೂ, ನಗರ ಬಿಜೆಪಿ ಅಧ್ಯಕ್ಷನೂ ಆಗಿರುವ ಬಿ.ಪಿ. ಮಂಜುನಾಥ್ ಮೈಸೂರು ದಸರಾ ವಸ್ತು ಪ್ರದರ್ಶನವನ್ನು ದೆಹಲಿಯ ಪ್ರಗತಿ ಮೈದಾನದಂತೆ ವರ್ಷವಿಡೀ ನಡೆಸುವ ಭೋಂಗು ಬಿಡುತ್ತಿದ್ದರೆ ಉದ್ಘಾಟನೆಯ ದಿನ ವಸ್ತು ಪ್ರದರ್ಶನ ಖಾಲಿ ಖಾಲಿಯಾಗಿತ್ತು. ಕಳೆದ ವರ್ಷ ವಸ್ತು ಪ್ರದರ್ಶನದಲ್ಲಿ ವೈಷ್ಣೋದೇವಿಯ ನಕಲು ದೇವಸ್ಥಾನ ನಿರ್ಮಿಸಿ ಅಮಾಯಕ ಜನರಿಂದ ಹಣ ಲೂಟಿ ಮಾಡಿದ್ದ ಮಾರವಾಡಿಯೊಬ್ಬನಿಗೆ ಈ ವರ್ಷವೂ ಅಮರನಾಥದ ನಕಲು ಸೃಷ್ಟಿಸಿ 30 ರೂ. ಪ್ರವೇಶದರ ವಸೂಲಿಗೆ ಅವಕಾಶ ನೀಡಲಾಗಿದೆ.

ಅ 'ಪಾರದರ್ಶಕತೆ'

ದಸರೆಯ ಖಾಸಗಿ ಪ್ರಾಯೋಜಕತ್ವಕ್ಕೆ ಸೆಪ್ಟೆಂಬರ್ 3 ರಂದು ಟೆಂಡರ್ ಕರೆಯಲಾಗಿತ್ತು. ಆದರೆ ಅದಕ್ಕೂ ಮೊದಲೇ ಆಗಸ್ಟ್ 25 ರಂದು 93.5 ಎಫ್‌ಎಂ ರೇಡಿಯೋಗೆ ಪ್ರಾಯೋಜಕತ್ವ ವಹಿಸುವ ಆದೇಶ ನೀಡಲಾಗಿದ್ದು ಇಡೀ ವ್ಯವಸ್ಥೆಯ ಅಪಾರದರ್ಶಕತೆಗೆ ಹಿಡಿದ ಕನ್ನಡಿಯಾಗಿದೆ.

ದಸರೆ ಪ್ರಾರಂಭವಾಗುವ ಕೆಲವೇ ದಿನಗಳ ಮೊದಲು ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ರಾಜೇಂದ್ರರವರು ಪ್ರವಾಸಿಗರ ನೀರಸ ಪ್ರತಿಕ್ರಿಯೆಗೆ ಆತಂಕ ವ್ಯಕ್ತಪಡಿಸುತ್ತಾ. ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಕೋಮುಗಲಭೆಯಿಂದ ಜನ ಭಯಬೀತರಾಗಿ ಇತ್ತ ತಲೆ ಹಾಕುತ್ತಿಲ್ಲ ಎಂದು ಹೇಳಿದರು. ಅವರ ಪ್ರಕಾರ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಪ್ರವಾಸಿಗರು ಹೋಟೆಲ್‌ಗಳಲ್ಲಿ ತಂಗುವ ಪ್ರಮಾಣದಲ್ಲಿ ಶೇ.60 ರಷ್ಟು ಕುಸಿತವಾಗಬಹುದು. ಈ ನಡುವೆ ಆನೆ ಅಂಬಾರಿಇತ್ಯಾದಿಗಳೇನೋ ನಡೆದವು. ಆದರೆ ಮಾವುತನ್ನೊಬ್ಬ ಆನೆ ಕಾಲ್ತುಳಿತಕ್ಕೆ ಸಿಕ್ಕಿ ಸತ್ತಿದ್ದು ಅಬ್ಬರದಲ್ಲಿ ಸುದ್ದಿಯಾಗಲೇ ಇಲ್ಲ.

ಜನರೇನೋ ಬಂದರು, ಬಂದವರು ಸಂಜೆ ವಾಪಸ್ ಹೋದರು. ಜನರನ್ನು ಜಗಮಗಿಸುವ ದೀಪಗಳಿ ಗೊಡ್ಡಿ ಕತ್ತಲಲ್ಲಿ ಗಂಟು ಹೊಡೆದ ಕಳ್ಳರ ಕೇಕೆ ಇನ್ನೂ ನಿಂತಿಲ್ಲ. ಸರ್ಕಾರವೇ ಹೇಳುವಂತೆ ಇಂದು 400ನೇ ದಸರಾ ಆಚರಣೆ. ಈ ಬಾರಿಯ ಜಂಬೂಸವಾರಿಯಲ್ಲಿ ಆನೆ ಬಲರಾಮನ ಮೇಲಿನ ಅಂಬಾರಿಯಲ್ಲಿ ಶೋಭಕ್ಕ ಕೂರಲಿಲ್ಲ ಎನ್ನುವದಷ್ಟೇ ಸಮಾಧಾನ.

■ ಎಂ.ವಿಜಯಕುಮಾರ್
ಮೈಸೂರು

...ಚೀನಾ ಹಾದಿ...

...ಟ 11 ರಿಂದ

...ಾಸ ಸಮಸ್ಯೆ, ಸವಾಲುಗಳನ್ನು ಸೃಷ್ಟಿಸುವುದು ...ನಿರೀಕ್ಷಿತವೇ ಆಗಿತ್ತು. ಚೀನಾ ದೇಶ ಅಂತಹ ...ಸವಾಲನ್ನು ಈಗ ಎದುರಿಸುತ್ತಿದೆ.

ಆರ್ಥಿಕ ಬೆಳವಣಿಗೆಯ ಜೊತೆ ಜೊತೆಗೆ ಅಲ್ಲಿ ...ರ್ಥಿಕ ಅಸಮಾನತೆಯ ಪ್ರಮಾಣ ಬೆಳೆಯುತ್ತಿದೆ. ...ರ್ಥಿಕ ಸುಧಾರಣೆಗಳ ಪರಿಣಾಮವಾಗಿ ಕೆಲಸ ...ಳೆದುಕೊಳ್ಳುವ ಕಾರ್ಮಿಕರ ಸಂಖ್ಯೆ ತೀವ್ರವಾಗಿ ...ಳೆಯುತ್ತಿದೆ. ಸರ್ಕಾರವು ಕೆಲಸ ಕಳೆದುಕೊಳ್ಳುವ ...ರ್ಮಿಕರಿಗೆ ಹೊಸ ಕೌಶಲ್ಯಗಳ ತರಬೇತಿಯನ್ನು ...ಡಿ ಪರ್ಯಾಯ ಉದ್ಯೋಗಕ್ಕೆ ಪ್ರಯತ್ನಿಸುತ್ತಿದೆ. ...ದ್ಯೋಗಿಗಳಿಗೆ ಗಣನೀಯ ಪ್ರಮಾಣದ ...ನಿರುದ್ಯೋಗ ಭತ್ಯೆಯನ್ನು ನೀಡುತ್ತಿದೆ. ಆದರೂ ...ನಿರುದ್ಯೋಗವು ಒಂದು ಗಂಭೀರ ಸವಾಲಾಗಿದೆ. ಬೆಳೆಯುತ್ತಿರುವ ಭ್ರಷ್ಟಾಚಾರ ಮತ್ತೊಂದು ಬಹುಮುಖ್ಯ ಸವಾಲಾಗಿದೆ.

'ಸಮರ' ನಡೆದಿದೆ

ಸಮಾಜದಲ್ಲಿ ಬೆಳೆಯುತ್ತಿರುವ ಅಸಮಾನತೆ ಕೊನೆಗೆ ಎಲ್ಲಿಗೆ ಮುಟ್ಟಬಹುದು? ಅದು ಹೊಸ ಬಂಡವಾಳಶಾಹಿ ವರ್ಗದ ಬೆಳವಣಿಗೆ ಕಾರಣವಾಗಬಹುದೇ? ಉತ್ಪಾದನಾ ಸಾಧನಗಳ ತೀವ್ರಗತಿಯ ಬೆಳವಣಿಗೆಗೆ 'ಪ್ರಭುತ್ವ ಬಂಡವಾಳ ಶಾಹಿ' ದಾರಿಯನ್ನು ಪ್ರತಿಪಾದಿಸುವಾಗಲೇ ಲೆನಿನ್ ಈ ಅಪಾಯಗಳ ಕುರಿತು ಎಚ್ಚರಿಸಿದ್ದಾರೆ.

ಈ ಪ್ರಕ್ರಿಯೆಯನ್ನು ಅವರು 'ಯುದ್ಧ' ಎಂದೇ ಕರೆದಿದ್ದಾರೆ. ಈ ಯುದ್ಧದಲ್ಲಿ ಗೆಲ್ಲುವವರು ಯಾರು? ಯಾರು ಮೇಲುಗೈ ಸಾಧಿಸುತ್ತಾರೆ ಎಂಬುದು ಪ್ರಶ್ನೆ. ಶ್ರಮಿಕ ವರ್ಗದ ನೇತೃತ್ವದ ಪ್ರಭುತ್ವ ತನ್ನ ಮೇಲ್ಮೆಯನ್ನು ಮೇಲುಗೈಯನ್ನು ಉಳಿಸಿಕೊಳ್ಳಬೇಕು. ಲೆನಿನ್ ಇದನ್ನೇ ಪ್ರತಿಪಾದಿಸಿದ್ದಾರೆ. ಅದು ನಿಜವಾದ ಸವಾಲು. ಬಂಡವಾಳಶಾಹಿ ಮೇಲುಗೈ ಸಾಧಿಸಲು ಅವಕಾಶವಾದರೆ ಅಲ್ಲಿಗೆ ಸಮಾಜವಾದದ ಕಡೆಗಿನ ಪಯಣ ಮುಗಿಯುತ್ತದೆ.

ಈ ಒಟ್ಟು ಪ್ರಕ್ರಿಯೆಯಲ್ಲಿ ಹಿಡಿಯಷ್ಟು ಆಸ್ತಿವಂತ ಬಂಡವಾಳಗಾರರು ಹುಟ್ಟಿಕೊಳ್ಳಬಹುದೇ ಹೊರತು ಪ್ರಬಲ 'ಬಂಡವಾಳಶಾಹಿ ವರ್ಗ' ಹುಟ್ಟಿಕೊಳ್ಳಲಾರದು ಎಂಬುದು 1978ರ ಸುಧಾರಣೆಗಳ ಪ್ರಮುಖ ಶಿಲ್ಪಿ ಡೆಂಗ್ ಕ್ಸಿಯೋಪಿಂಗ್ ಅವರ ವಿಶ್ವಾಸ.

ಚೀನಾ ಕ್ರಾಂತಿಯ 60ನೇ ವರ್ಷಾಚರಣೆಯ ಸಂಭ್ರಮದ ಸಂದರ್ಭದಲ್ಲಿ ಚೀನಾ ಅಗಾಧ ಪ್ರಗತಿಯ ಸಾಕ್ಷಿಯಾಗಿ ಸೈನಿಕ ಕವಾಯತು, ಪ್ರದರ್ಶನ ನಡೆದಿದೆ. 'ಸೌಹಾರ್ದಯುತ ಜಗತ್ತಿನ' ತಮ್ಮ ಆಶಯವನ್ನು ಚೀನಾ ಘೋಷಿಸಿದೆ. ಚೀನಾದ ಅಧ್ಯಕ್ಷರಾದ ಹು ಜಿಂಟಾವೋ ಚೀನಾದ ಸಮಾಜವಾದಿ ಮಾರ್ಗದ ಪ್ರಯಾಣವನ್ನು ದೃಢವಾಗಿ ಮತ್ತೊಮ್ಮೆ ಘೋಷಿಸಿದ್ದಾರೆ. 'ಚೀನಾದ ಗುಣ ಲಕ್ಷಣಗಳೊಂದಿಗೆ ಸಮಾಜವಾದ' ಎನ್ನುವುದು ಚೀನಾ ಕಮ್ಯುನಿಸ್ಟ್ ಪಕ್ಷದ ಹಳೆಯ ಘೋಷಣೆ 'ಕಮ್ಯುನಿಸಂ' ಎಂದರೆ ಬಡತನವನ್ನು ಎಲ್ಲರನ್ನೂ ಸಮಾನವಾಗಿ ಹಂಚುವುದು ಎಂದು ಕಮ್ಯುನಿಸ್ಟ್, ವಿರೋಧಿಗಳು ಗೇಲಿ ಮಾಡುವುದಿದೆ. ಕಮ್ಯುನಿಸಂ ಎಂದರೆ ಸಮೃದ್ಧಿಯನ್ನು ಸಮಾನವಾಗಿ ಹಂಚುವುದು ಎಂದಾಗಬೇಕಾದರೆ ಚೀನಾ ಇಂದು ಎದುರಿಗೊಂಡಿರುವ ಸವಾಲನ್ನು ಎದುರಿಸಲೇಬೇಕು. ಜಯ ಶ್ರಮಿಕ ವರ್ಗಕ್ಕೇ ದೊರಕಲಿದೆ ಎಂದು ಆಶಿಸೋಣ.

(ಇದು ಸೀತಾರಾಮ ಯೆಚೂರಿಯವರ ಲೇಖನದ ಸಂಗ್ರಹಾನುವಾದ. ಮೂಲ ಲೇಖನಕ್ಕೆ ಇಂಗ್ಲಿಷ್ ಬಲ್ಲವರು 'ಪೀಪಲ್ಸ್ ಡೆಮಾಕ್ರಸಿ'ಯ ಸೆಪ್ಟೆಂಬರ್ 28, 2009 ರ ಸಂಚಿಕೆ ನೋಡಿ.)

JANASHAKTHI KANNADA VARA PATRIKE OCT. 18, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007



■ ನಕುಲ

ಕಾಂಚಿವರಂ : ಸ್ವಾತಂತ್ರ್ಯಪೂರ್ವದ ನೇಕಾರರ ಬದುಕಿನ ಬವಣೆಯ ಚಿತ್ರ

2007ರ ಸಾಲಿನ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾದ ತಮಿಳಿನ 'ಕಾಂಚಿವರಂ' ಸ್ವಾತಂತ್ರ್ಯ ಪೂರ್ವದಲ್ಲಿನ ಕೈಮಗ್ಗ ನೇಕಾರರ ದಾರುಣ ಸ್ಥಿತಿಯ ಚಿತ್ರಣವನ್ನು ಕೊಡುವ ಚಿತ್ರ. ಅದರಲ್ಲಿನ ಮುಖ್ಯಪಾತ್ರ ನಿರ್ವಹಿಸಿದ ಪ್ರಕಾಶ್ ರಾಜ್(ರೈ) ಅತ್ಯುತ್ತಮ ನಟನೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಪ್ರಿಯದರ್ಶನ್ ಈ ಚಿತ್ರದ ನಿರ್ದೇಶಕರು.

1920 ರಿಂದ 1948 ರವರೆಗಿನ, ಅಂದರೆ ಗಾಂಧೀಜಿ ಹತ್ಯೆಯವರೆಗಿನ ಕಾಲಘಟ್ಟದ ನಡುವೆ ನಡೆಯುವ ಕಥೆಯಿದು. ಅಂದಿನ ವಾತಾವರಣದ ಸೃಷ್ಟಿಗೆ ಕತ್ತಲೆ-ನೆರಳನ್ನೇ ಹೆಚ್ಚು ಆಶ್ರಯಿಸಿರುವ ನಿರ್ದೇಶಕರು, ಅಲ್ಪ ಬಜೆಟ್ಟಿನಲ್ಲಿಯೇ ಪರಿಣಾಮಕಾರಿ ಚಿತ್ರಣ ಕಟ್ಟಿಕೊಡುವಲ್ಲಿ ಶ್ರಮಿಸಿದ್ದಾರೆ. ಅದಕ್ಕೆ ಪೂರಕವಾಗಿ ಸ್ಪಂದಿಸಿದ್ದಾರೆ ಛಾಯಾಗ್ರಾಹಕ.

ಅನಾವರಣ

ಪಾರ್ಶ್ವವಾಯು ಪೀಡಿತ ಮಗಳನ್ನು ನೋಡುವ ಸಲುವಾಗಿ ಎರಡು ದಿನಗಳ ಪೆರೋಲ್ ಮೇಲೆ ಬಿಡುಗಡೆಯಾಗಿ, ಬಿರುಸು ಮಳೆಯಲ್ಲಿ ತೋಯುತ್ತಾ ಬರುವ ಬಸ್ಸಿನಲ್ಲಿ(ಇದರ ಚಿತ್ರಣ ಪರಿಣಾಮಕಾರಿಯಾಗಿ ಮೂಡಿಬಂದಿದೆ) ನಾಯಕ ತನ್ನ ಹಿಂದಿನ ಬದುಕಿನ ಘಟನೆಗಳನ್ನು ನೆನಪಿಸಿಕೊಳ್ಳುವ ಫ್ಲಾಶ್‌ಬ್ಯಾಕ್‌ನೊಂದಿಗೆ ಚಿತ್ರ ಆರಂಭವಾಗುತ್ತದೆ.

ಭಾರತದ ರೇಷ್ಮೆಸೀರೆಗಳ ತವರೂರು ಎಂದು ಪ್ರಸಿದ್ಧಿ ಪಡೆದ ಕಾಂಚಿವರಂನಲ್ಲಿನ ನೇಕಾರರ ಕಲಾತ್ಮಕ ನೇಯ್ಗೆಯ ಸೀರೆಗಳಿಗೆ ಬ್ರಿಟಿಷರಿಂದ ಬಹುಬೇಡಿಕೆಯಿತ್ತು. ಸ್ಥಳೀಯ ಬಂಡವಾಳಶಾಹಿ ಮಾಲಕರು ಬಡ ನೇಕಾರರನ್ನು ಚೆನ್ನಾಗಿ ದುಡಿಸಿಕೊಂಡು, ಬ್ರಿಟಿಷರಿಗೆ ಸೀರೆಗಳನ್ನು ಪೂರೈಸಿ ಸಾಕಷ್ಟು ದುಡ್ಡು ಸಂಪಾದಿಸುತ್ತಿದ್ದರು. ಆದರೆ ನೇಕಾರರಿಗೆ ಯಾವುದೇ ಸೌಲಭ್ಯಗಳನ್ನು ನೀಡದೆ ಅವರನ್ನು ಅತ್ಯಂತ ಹೀನಾಯವಾಗಿ ಕಾಣಲಾಗುತ್ತಿತ್ತು. ಮಾಲಕರಿಗೆ ಅಂಜಿ ಅವರು ಬದುಕುವಂತಹ ಸ್ಥಿತಿಯಿತ್ತು. 'ರೇಷ್ಮೆ ನೇಯುವ ನೇಕಾರ ಎಂದಿಗೂ ರೇಷ್ಮೆ ಬಟ್ಟೆ ತೊಡಲಾರ' ಎಂಬುದು ಸಾಮಾನ್ಯವಾಗಿತ್ತು. ರೇಷ್ಮೆ ಸೀರೆ ಖರೀದಿಸುವ ಕನಸನ್ನೂ ಕಾಣಲಾಗದಷ್ಟು ಕಡು ಬಡತನದ ಬದುಕು ಅವರದ್ದು.

ಇಂತಹ ದಾರುಣ ಪರಿಸ್ಥಿತಿಯಲ್ಲಿದ್ದ ಕಾಂಚಿವರಂನ ನೇಕಾರರಲ್ಲಿ ಒಬ್ಬ ನೇಕಾರ ವೆಂಕಟಂ. ಇವನ ನೆಯ್ಗೆ ನೈಪುಣ್ಯತೆಯನ್ನು ಬ್ರಿಟೀಷರೂ ಮೆಚ್ಚಿರುತ್ತಾರೆ. ಅಂತಹ ವೆಂಕಟಂ ತಾನು ಮದುವೆಯಾಗುವ ಹೆಣ್ಣಿಗೆ ರೇಷ್ಮೆ ಸೀರೆ ತೊಡಿಸುವ ಆಸೆ ಈಡೇರದಿದ್ದರೂ ತನಗೆ ಹುಟ್ಟಿದ ಮಗಳಿಗಾದರೂ, ಅವಳು ಮದುವೆಯಾಗುವಾಗ ರೇಷ್ಮೆ ಸೀರೆ ತೊಡಿಸುವೆಂದು ಮಾತು ಕೊಡುತ್ತಾನೆ. ಇದೇ ಅವನ ಜೀವನದ ಬಹುದೊಡ್ಡ ಆಸೆ ಮತ್ತು ಗುರಿ. ಅದಕ್ಕಾಗಿ ಪ್ರತಿದಿನ ಅಲ್ಪಪ್ರಮಾಣದಲ್ಲಿ ಕೂಡಿಟ್ಟ ಹಣವೂ ವ್ಯರ್ಥವಾಗಿ ಖರ್ಚಾಗುತ್ತದೆ. ಆದರೆ ತನ್ನ ಜೀವನದ ಆಸೆಯನ್ನು ಈಡೇರಿಸಿಕೊಳ್ಳಲೇಬೇಕೆಂಬ ಹಠಕ್ಕೆ ಬಿದ್ದ ನಾಯಕ ತಾನು ಕೆಲಸ ಮಾಡುವ ಫ್ಯಾಕ್ಟರಿಯಿಂದ ದಿನವೂ ರೇಷ್ಮೆಯ ನೂಲನ್ನು ಕದ್ದು, ತನ್ನ ಬಾಯಿಯಲ್ಲಿ ಅವಿತಿಟ್ಟುಕೊಂಡು ತಂದು ಕೂಡಿಡುತ್ತಾನೆ.

ಅಂತರ್‌ವಾಹಿನಿ

ಇದೇ ಸಂದರ್ಭದಲ್ಲಿ ಭಾರತದ ಆಗಿನ ಐತಿಹಾಸಿಕ ಮತ್ತು ರಾಜಕೀಯ ಬೆಳವಣಿಗೆಗಳ ಚಿತ್ರಣ ಪ್ರಮುಖವಾಗಿಯಲ್ಲದಿದ್ದರೂ ಅಂತರ್‌ವಾಹಿಯಾಗಿ ಪ್ರವಹಿಸುತ್ತದೆ. ಕಮ್ಯುನಿಸ್ಟರ ಭೂಗತ ಕಾರ್ಯಚಟುವಟಿಕೆ ಮತ್ತು ದುಡಿವ ಜನರ ಮಧ್ಯೆ ಅವರ ಆಂದೋಲನಗಳ ಬಗ್ಗೆಯೂ ಪ್ರಸ್ತಾಪವಾಗುತ್ತದೆ. ಅದರ ಪ್ರಭಾವಕ್ಕೊಳಗಾಗುವ ಕಾಂಚಿವರಂ ನ ನೇಕಾರರೂ ಅದರಲ್ಲಿ ಭಾಗವಹಿಸುತ್ತಾರೆ ಮತ್ತು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಮಾಲೀಕನಿಗೆ ಬೇಡಿಕೆ ಪಟ್ಟಿ ಸಲ್ಲಿಸುತ್ತಾರೆ. ಈ ನೇಕಾರರ ನೇತೃತ್ವವನ್ನು ಸ್ವತಃ ವೆಂಕಟಂ ವಹಿಸುತ್ತಾನೆ. ಮಾಲೀಕ ಇವರ



ಬೇಡಿಕೆಯನ್ನು ತಿರಸ್ಕರಿಸಿದಾಗ ಚಳುವಳಿಗೆ ಕರೆ ನೀಡಿ, ಕೆಲಸವನ್ನು ಸ್ಥಗಿತಗೊಳಿಸುತ್ತಾರೆ.

ಹೀಗಿರುವಾಗಲೇ ಮಗಳಿಗೆ ಮದುವೆ ನಿಶ್ಚಯವಾಗುತ್ತದೆ. ಕೆಲಸ ಸ್ಥಗಿತಗೊಂಡಿದೆ, ಆದರೆ ತಾನು ಕೆಲಸಕ್ಕೆ ಹೋದಲ್ಲಿ ಮಾತ್ರ ರೇಷ್ಮೆ ಕದ್ದು ತಂದು ಸೀರೆ ಪೂರ್ಣ ನೇಯ್ಯಲು ಸಾಧ್ಯ. ತಾನು ನಂಬಿದ ತತ್ವಕ್ಕೆ ನಿಷ್ಠನಾಗುವುದೋ ಅಥವಾ ಜೀವನದ ಮಹದಾಸೆಯಾದ ಮಗಳಿಗೆ ರೇಷ್ಮೆ ಸೀರೆ ಉಡಿಸುವುದೋ ಎಂದು ವೆಂಕಟಂ ಗೊಂದಲಕ್ಕೊಳಗಾಗುತ್ತಾನೆ. ಕೊನೆಗೆ ತನ್ನ ವೈಯಕ್ತಿಕ ಕನಸು, ಮಗಳ ಮೇಲಿನ ವ್ಯಾಮೋಹವೇ ಹೆಚ್ಚಾಗಿ, ಚಳುವಳಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿ, ಕೆಲಸಕ್ಕೆ ವಾಪಸ್ಸಾಗಲು ಕರೆ ನೀಡುತ್ತಾನೆ. ಕೆಲವರು ಆತನನ್ನು ಹಿಂಬಾಲಿಸಿದರೆ ಮತ್ತೆ ಕೆಲವರು ಚಳುವಳಿ ಮುಂದೊಯ್ಯಲು ನಿರ್ಧರಿಸಿ, ಧರಣಿ ಮುಂದುವರಿಸುತ್ತಾರೆ.

ತನ್ನ ಸ್ವಾರ್ಥ ಸಾಧನೆಗೆ ಕೆಲಸಕ್ಕೆ ಹಾಜರಾಗುವ ವೆಂಕಟಂ ಮತ್ತೆ ರೇಷ್ಮೆ ನೂಲು ಕದ್ದು ಹೊರಬರುವಾಗ, ಚಳುವಳಿಗೆ ದ್ರೋಹ ಬಗೆದ ಕಾರಣಕ್ಕೆ ಇತರ ಕಾರ್ಮಿಕರಿಂದ ಪ್ರಶ್ನೆಗೊಳಗಾಗುತ್ತಾನೆ. ಸಂದರ್ಭದಲ್ಲಿ ತಾನು ಕದ್ದ ರೇಷ್ಮೆ ನೂಲಿನೊಂದ ಸಿಕ್ಕಿಬೀಳುತ್ತಾನೆ. ಮಾಲೀಕನ ಗೂಂಡಾಗಳ ಹಲ್ಲೆಗೊಳಗಾಗುವುದಲ್ಲದೇ ಚಳುವಳಿ ನಿ ಕಾರ್ಮಿಕರೂ ಆಕ್ರೋಶಗೊಂಡು ಆತನ ಮೇ ಹಲ್ಲೆ ನಡೆಸುತ್ತಾರೆ. ವೆಂಕಟಂ ಜೈ ಪಾಲಾಗುತ್ತಾನೆ.

ದುರಂತ ಯಾರದ್ದು?

ಇಲ್ಲಿ ಸ್ವತಃ ನಿರ್ದೇಶಕರು ಹಾಗೂ ಮತ್ತಿತ ಕಮ್ಯುನಿಸಂನ ವೈಫಲ್ಯದ ಅನಾವರಣದ ಬ ಎಂಬಂತೆ ಮಾತನಾಡುತ್ತಿರುವುದು ಕ ಬಂದಿದೆ. ಭಾರತದಲ್ಲಿ ಆಗ ಟಿಸಿಲೊಡೆಯುತ್ತಿದ್ದ ಕಮ್ಯುನಿಸಂನ ಸಿದ್ಧಾಂತಗಳ ಬಗ್ಗೆ ಅಷ್ಟು ಬೇಗೆ ತೀರ್ಮಾ ಬರುವುದು ಪೂರ್ವಾಗ್ರಹಪೀಡಿತವೇ ಸ ಅಷ್ಟಕ್ಕೂ ಇಲ್ಲಿ ಎಂತೆಂತಹ ಕಲಾತ್ಮಕ ರ ಸೀರೆಗಳನ್ನು ನೇಯ್ದರೂ ಅಪಾರ ಶ್ರಮ ದುಡಿದರೂ ತನ್ನ ಕುಟುಂಬದವರಿಗೆ ರೇಷ್ಮೆ ಸೀರೆ ಕೊಳ್ಳಲಾರದ ಕಾರ್ಮಿ ಜೀವನ ಸ್ಥಿತಿಯು ಬಂಡವಾಳಗಾ ಶೋಷಣೆಗೆ ಹಾಗೂ ಅದನ್ನು ಪೋಷಿ ಬ್ರಿಟಿಷ್ ನೀತಿಗೆ ಸಾಕ್ಷಿಯಾಗುತ್ತದೆ ಹೊರತು ವೆಂಕಟಂ ನ ದುರ ಕಮ್ಯೂನಿಸಂ ಹೇಗೆ ಹೊಣೆಯಾಗುತ್ತ ದುರಂತ ಅಂತ್ಯಕ್ಕೆ ಕಾರಣವೇ ಹೊರತು ಕಮ್ಯು ಅಲ್ಲ. ತತ್ವ ಸಿದ್ಧಾಂತಗಳನ್ನು ನಂಬಿ ಕೆಡುವುದಿಲ್ಲ, ಅವುಗಳನ್ನು ಬಿಟ್ಟು ಹೊರಬಂ ದುರಂತಕ್ಕೀಡಾಗುವುದೇ ಈ ಚಿತ್ರದ ವಸ್ತು!

ಅಂತಿಮವಾಗಿ ಹಾಸಿಗೆ ಹಿಡಿದ ಮಗ ನೋಡಿಕೊಳ್ಳಲು ಯಾರೂ ಇಲ್ಲದಂತಾಗಿ, ವಿಷ ಉಣಿಸಿ ಮಗಳನ್ನು ಕೊಲ್ಲುತ್ತಾನೆ ವೆಂಕ ತನ್ನ ಮಗಳಿಗೆ ರೇಷ್ಮೆ ಸೀರೆ ಉಡಿಸಿ ನೋಡಬೇ ಸಣ್ಣ ಆಸೆ ಈಡೇರಿಸಿಕೊಳ್ಳಲು ಒಬ್ಬ ತಂದೆ ತಾನು ಕಳ್ಳನಾದುದು, ನಂಬಿದ ಸಿದ್ಧಾಂತಕ್ಕೆ ದ ಬಗೆದದ್ದನ್ನು ಒಪ್ಪಿಕೊಳ್ಳುತ್ತಾನೆ. ಇಂತಹ ನೂಕಲ್ಪಟ್ಟ ಸಾಮಾಜಿಕ ಪರಿಸ್ಥಿತಿಯ ಚಿಂತಿಸಬೇಕಾಗಿದೆ.

ರೇಷ್ಮೆ ಸೀರೆ ಉಡಿಸಿ ಮದ ಮಾಡಬೇಕೆಂದಿದ್ದವನು, ಕೊನೆಗೆ ಆಕೆಯ ಅರ್ಧ ನೇಯ್ದ ಸೀರೆ ಹೊದಿಸುತ್ತಾನೆ. ಸೀರೆ ಮುಖ ಮುಚ್ಚಿದರೆ ಕಾಲಿಗೆ ಸಾಲದಂತಾಗ ಕಾಲು ಮುಚ್ಚಿದರೆ ಮುಖಕ್ಕೆ ಸಾಲದಂತಾಗ ಆ ಪ್ರಯತ್ನದಲ್ಲಿಯೇ ಹುಚ್ಚನಂತಾಗುವುದರೊಂದಿಗೆ ಅಂತ್ಯವಾಗುತ್ತದೆ. ಇದು ಬಹುತೇಕ ದುಡಿವ ಜೀವನದ ಕ್ರೂರ ವಾಸ್ತವ ಸ್ಥಿತಿ



ಅಕ್ಟೋಬರ್ 1, 2009 ಚೀನಾ ಕ್ರಾಂತಿಯ 60ನೇ ವಾರ್ಷಿಕದ ಸಂದರ್ಭದಲ್ಲಿ ನಡೆದ ಆಕರ್ಷಕ ಕವಾಯತು ಬೀಜಿಂಗ್‌ನ ತಿಯಾನ್‌ಮನ್ ಚೌಕದಲ್ಲಿ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH